ಸಂಪಾದಕರು :
ಎಂ.ಎಸ್. ವಿಕಾಸ್

ಭಾನುವಾರ, ಫೆಬ್ರವರಿ 11, 2024
ದಾವಣಗೆರೆ, ಪುಟ : 8 ರೂ : 5
ಸಂಪುಟ : 50 ಸಂಚಿಕೆ : 270 RNI : 27369/75


# ಜನತಾವಾಣಿ


ಮಧ್ಯ ಕರ್ನಾಟಕದ ಆಪ್ತ ಒಡನಾಡಿ

1974 2023

janathavani@mac.com
www.janathavani.com
08192 254736 91642 99999



## ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ

## ಆಡಳಿತ ಮಂಡಳಿ ಚುನಾವಣೆ-2024

ಮಾನ್ಯ ಗೌರವಾನ್ವಿತ ಷೇರುದಾರರಲ್ಲಿ ವಿನಂತಿ

ದಿನಾಂಕ : 11.02.2024ರ ಭಾನುವಾರ ನಡೆಯಲಿರುವ ಬ್ಯಾಂಕಿನ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆಯಲ್ಲಿ ಗುರುರಾಜ್ ಎನ್.ಎ. ಹಾಗೂ ಬೆಳ್ಳೂಡಿ ಮಂಜುನಾಥ್ ಆದ ನಾವು ಗುರು-ಹಿರಿಯರ ಹಾಗೂ ತಮ್ಮೆಲ್ಲರ ಆಶೀರ್ವಾದದೊಂದಿಗೆ ನಿರ್ದೇಶಕರ ಸ್ಥಾನಗಳಿಗೆ ಸ್ಪರ್ಧಿಸುತ್ತಿದ್ದೇವೆ. ಬ್ಯಾಂಕಿನ ಅಭಿವೃದ್ಧಿ ಮತ್ತು ಬ್ಯಾಂಕಿನ ಸದಸ್ಯರಾದ ತಮ್ಮೆಲ್ಲರ ಸೇವೆ ಮಾಡುವ ಅವಕಾಶ ಕಲ್ಪಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇವೆ.

| | | | |
|---|---|---|---|
| 7 | ಗುರುರಾಜ್ ಎನ್.ಎ. ಸಾಮಾನ್ಯ ವರ್ಗ | | |
| 14 | ಬೆಳ್ಳೂಡಿ ಮಂಜುನಾಥ್ ಹಿಂದುಳಿದ ವರ್ಗ/ಪ್ರವರ್ಗ ಬಿ. ಮೀಸಲು | | |



ಧನ್ಯವಾದಗಳೊಂದಿಗೆ,
ತಮ್ಮ ಸೇವಾಕಾಂಕ್ಷಿ : ಗುರುರಾಜ್ ಎನ್.ಎ.
(ನಾಗೂರು ಅಡಿವೆಪ್ಪನವರ ಮಗ)
ಎಪಿಎಂಸಿ ಮಾಜಿ ನಿರ್ದೇಶಕರು, ಫೋ. : 93438 12345

ತಮ್ಮ ಸೇವಾಕಾಂಕ್ಷಿ : ಬೆಳ್ಳೂಡಿ ಮಂಜುನಾಥ್
(ಮುದ್ದಳ್ಳಿ ವೀರಣ್ಣನವರ ಮಗ)
ಫೋ. : 99722 85497



ಚುನಾವಣೆ ದಿನಾಂಕ : 11.02.2024, ಭಾನುವಾರ
ಸಮಯ : ಬೆಳಿಗ್ಗೆ 9.00 ರಿಂದ ಸಂಜೆ 4.00
ಸ್ಥಳ : ಮೋತಿ ವೀರಪ್ಪ ಕಾಲೇಜ್ ಆವರಣ, ದಾವಣಗೆರೆ.




## ದಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ

ಬ್ಯಾಂಕಿನ ಷೇರುದಾರರು / ಮತದಾರರಾದ ತಮ್ಮಲ್ಲಿ ಜಯಪ್ರಕಾಶ್ ಎಂ. ವಿ. ಮಾಡುವ ನಮಸ್ಕಾರಗಳು

ಮಾನ್ಯರೆ, ದಿನಾಂಕ 11-02-2024 ರ ಭಾನುವಾರ ಬ್ಯಾಂಕಿನ ಚುನಾವಣೆ ನಡೆಯಲಿದ್ದು ನಾನು ಈ ಚುನಾವಣೆಯಲ್ಲಿ ಸಾಮಾನ್ಯ ಕ್ಷೇತ್ರದಿಂದ ಸ್ಪರ್ಧಿಸಿದ್ದು ತಮ್ಮಗಳ ಸೇವೆ ಮಾಡಲು ಅವಕಾಶ ನೀಡ ಬೇಕಾಗಿ ವಿನಂತಿ. ಆದ್ದರಿಂದ ತಾವುಗಳು ಮತದಾನ ಮಾಡುವಾಗ ನಿಮ್ಮ ಮತವನ್ನು ನನಗೂ ಒಂದು ನೀಡಿ ಎಂದು ಪ್ರೀತಿಯಿಂದ ವಿನಮ್ರವಾಗಿ ಕೇಳಿಕೊಳ್ಳುತ್ತೇನೆ.

ಸಾಮಾನ್ಯ ಕ್ಷೇತ್ರದ ಅಭ್ಯರ್ಥಿ
ಜಯಪ್ರಕಾಶ್ ಎಂ. ವಿ.



-: ಇಂತಿ ನಿಮ್ಮ ಸೇವಕ :-
**ಜಯಪ್ರಕಾಶ್ ಎಂ. ವಿ.**
(ಜಯಪ್ರಕಾಶ್ ಮಾಗಿ)
ಮಾಲೀಕರು, ಹರ್ಷ ಕಮರ್ಷಿಯಲ್ಸ್, ಜೆ.ಪಿ. ಎಂಟರ್‌ಪ್ರೈಸಸ್, ರೈಸ್ ಕಾರ್ನರ್
ನಿರ್ದೇಶಕರು, ದಾವಣಗೆರೆ ಜಿಲ್ಲಾ ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾ
ಅಧ್ಯಕ್ಷರು, ಚೌಕಿಪೇಟೆ ಅಕ್ಕಿ ವರ್ತಕರ ಸಂಘ, ದಾವಣಗೆರೆ. ಹಿಂದೂ ಮಹಾಗಣಪತಿ ಟ್ರಸ್ಟ್, ದಾವಣಗೆರೆ.
ಉಪಾಧ್ಯಕ್ಷರು, ಬನ್ನಿ ಮಹಾಕಾಳಿ ಸೇವಾ ಸಮಿತಿ, ದೇವರಾಜ ಅರಸು ಬಡಾವಣೆ
ಹಾಗೂ ಶ್ರೀ ಶಬರಿಗಿರೀಶ ಸೇವಾ ಸಮಿತಿ (ರಿ.) ಶಿವಾಲಿ ರಸ್ತೆ
Mob. : 9449807696, 7259407696

ಚುನಾವಣೆ 2024 :-
ಸಾಮಾನ್ಯ ಕ್ಷೇತ್ರದ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದೇನೆ

ದಿನಾಂಕ : 11-02-2024 ರ ಭಾನುವಾರ
ಸಮಯ : ಬೆಳಗ್ಗೆ 09 ರಿಂದ ಸಂಜೆ 04 ರವರೆಗೆ
ಸ್ಥಳ : ಮೋತಿ ವೀರಪ್ಪ ಕಾಲೇಜು ಆವರಣ.

| ಕ್ರಮ ಸಂಖ್ಯೆ | ಅಭ್ಯರ್ಥಿಯ ಹೆಸರು | ಚಿಹ್ನೆ | |
|---|---|---|---|
| 8 | ಜಯಪ್ರಕಾಶ್ ಎಂ. ವಿ. | | |

"ಮತ ನಿಮ್ಮದು ಸೇವೆ ನನ್ನದು"



ಆಶೂಜಿ

## ನಾವು ಗ್ರಾಹಕರ ಸೇವೆಗೆ ಲಭ್ಯ




ಸಿಲ್ಕ್ ಸ್ಯಾರಿ | ಫ್ಯಾನ್ಸಿ ಸ್ಯಾರಿಸ್ | ಲೆಹಂಗಾ | ಚೂಡಿದಾರ್ | ಕುರ್ತೀಸ್ | ಮೆನ್ಸ್ ರೆಡಿಮೇಡ್ | ಮೆನ್ಸ್ ಫ್ಯಾಬ್ರಿಕ್ | ಮೆನ್ಸ್ ಎಥ್ನಿಕ್ | ಬೆಡ್‌ಸ್ಪ್ರೆಡ್ | ಬ್ಲಾಂಕೆಟ್ | ಹ್ಯಾಂಡ್‌ಲೂಮ್

#572, 6ನೇ ಮುಖ್ಯ ರಸ್ತೆ, ರಾಮ್ & ಕೋ ಸರ್ಕಲ್ ಹತ್ತಿರ, ಚರ್ಚ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ - 577002 | +91 9686577166

SCAN TO LOCATE OUR STORE

# ಕೇಂದ್ರದಿಂದ ಒಳ ಮೀಸಲಾತಿ ಶಿಫಾರಸ್ಸು ಹಿಂಪಡೆಯಬೇಕು

ಜಗಳೂರು, ಫೆ.10- ಕೇಂದ್ರಕ್ಕೆ ಸಲ್ಲಿಸಲಾಗಿರುವ ನ್ಯಾ.ಸದಾಶಿವ ಆಯೋಗದ ಶಿಫಾರಸ್ಸನ್ನು ಹಿಂಪಡೆದು ಯಥಾಸ್ಥಿತಿಯಲ್ಲಿ ಮೀಸಲಾತಿ ಒದಗಿಸಬೇಕು ಎಂದು ಚಿತ್ರದುರ್ಗ ಬಂಜಾರ್ ಗುರುಪೀಠದ ಸರ್ದಾರ್ ಸೇವಾಲಾಲ್ ಸ್ವಾಮೀಜಿ ಒತ್ತಾಯಿಸಿದರು.



ಜಗಳೂರಿನ ಕಾರ್ಯಕ್ರಮದಲ್ಲಿ ಚಿತ್ರದುರ್ಗ ಬಂಜಾರ್ ಗುರುಪೀಠದ ಸರ್ದಾರ್ ಸೇವಾಲಾಲ್ ಸ್ವಾಮೀಜಿ ಒತ್ತಾಯ

ಪಟ್ಟಣದಲ್ಲಿ ಇಂದು 285ನೇ ಸಂತ ಸೇವಾಲಾಲ್ ಜಯಂತಿ ಅಂಗವಾಗಿ ಪಟ್ಟಣದ ಪ್ರವಾಸಿ ಮಂದಿರದಿಂದ ಪ್ರಮುಖ ಬೀದಿಗಳ ಮೂಲಕ ತಾಲ್ಲೂಕು ಕಛೇರಿಯವರೆಗೆ ಬಂಜಾರ ಸಮುದಾಯದಿಂದ ಹಮ್ಮಿಕೊಂಡಿದ್ದ ಬೃಹತ್ ಮೆರವಣಿಗೆಯಲ್ಲಿ ಭಾಗವಹಿಸಿ, ತಾಲ್ಲೂಕು ಕಛೇರಿ ಮುಂಭಾಗ ಭಾವಚಿತ್ರಕ್ಕೆ ವಿಶೇಷ ಪೂಜೆ ಸಲ್ಲಿಸಿ ಅವರು ಮಾತನಾಡಿದರು.

ಸಮುದಾಯಗಳಲ್ಲಿ 101 ಜಾತಿಗಳೂ ಸಂವಿಧಾನ ಬದ್ಧವಾಗಿ ಸಮಾನ ಮೀಸಲಾತಿಗೆ ಅರ್ಹರು. ಆದರೆ, ರಾಜ್ಯ ಸರ್ಕಾರ ಕೇವಲ ಕೆಲವೇ ಎಸ್ಸಿ ಸಮುದಾಯಗಳಿಗೆ ಒಳಮೀಸಲಾತಿಗೆ ಶಿಫಾರಸ್ಸು ಮಾಡಿರುವುದು ಸರಿಯಲ್ಲ. ಕೂಡಲೇ ಹಿಂಪಡೆಯಬೇಕು. ಇಲ್ಲವಾದರೆ ಕೊರಚ, ಲಂಬಾಣಿ, ಭೋವಿ, ಸಮುದಾಯಗಳು ಬೀದಿಗಿಳಿದು ಹೋರಾಟ ನಡೆಸುವ ಮೂಲಕ ಮುಖ್ಯಮಂತ್ರಿ ನಿವಾಸಕ್ಕೆ ಮುತ್ತಿಗೆ ಹಾಕಲಾಗುವುದು ಎಂದು ಎಚ್ಚರಿಸಿದರು.

ಬಂಜಾರ ಸಮುದಾಯದ ಆರಾಧ್ಯ ದೈವ ಸಂತ ಸೇವಾಲಾಲ್ ಅವರ 285 ನೇ ಜಯಂತ್ಯೋತ್ಸವ ಹೊನ್ನಾಳಿ ತಾಲ್ಲೂಕಿನ ಸೂರಗೊಂಡನಕೊಪ್ಪದ ಚಿನ್ನಿಕಟ್ಟೆಯಲ್ಲಿ ಇದೇ ದಿನಾಂಕ 13 ರಿಂದ 15 ರವರೆಗೆ ಅದ್ದೂರಿಯಾಗಿ ಜರುಗಲಿದ್ದು, ರಾಜ್ಯದ ಮೂಲೆ ಮೂಲೆಗಳಿಂದ ಬಂಜಾರ ಸಮುದಾಯದ ಮುಖಂಡರುಗಳು, ಕಲಾವಿದರು ಹಾಗೂ ಸಮಾಜದ ಮಾಲಾಧಾರಿಗಳಾಗಿ, ಭಜನೆಯೊಂದಿಗೆ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ ಎಂದು ತಿಳಿಸಿದರು.

ತಾಲ್ಲೂಕಿನಲ್ಲಿ ಬಂಜಾರ ಸಮುದಾಯಕ್ಕೆ ಒಂದು ಭವನ, ಮಂದಿರವಿಲ್ಲ. ಮುಂದಿನ ವರ್ಷದ ಸೇವಾಲಾಲ್ ಜಯಂತ್ಯೋತ್ಸವ ವೇಳೆಗೆ ಪಟ್ಟಣದಲ್ಲಿ ಸಮುದಾಯ ಭವನ ನಿರ್ಮಾಣ ಮಾಡಲು ಸ್ಥಳೀಯ ಶಾಸಕರಿಗೆ ಮನವಿ ಮಾಡಲಾಗುವುದು ಎಂದು ಹೇಳಿದರು.

**ಅದ್ದೂರಿ ಮೆರವಣಿಗೆ :** ಪಟ್ಟಣದ ಪ್ರವಾಸಿ ಮಂದಿರದಿಂದ ಆರಂಭವಾದ ಮೆರವಣಿಗೆಯಲ್ಲಿ ಡಿಜಿ ಶಬ್ದಕ್ಕೆ ಯುವಕ - ಯುವತಿಯರು, ವಿವಿಧ ಪಕ್ಷಗಳ ಮುಖಂಡರುಗಳು ದಾರಿಯುದ್ದಕ್ಕೂ ಹೆಜ್ಜೆ ಹಾಕಿದರು. ಅಲ್ಲದೇ ತೀಜ್ ಹೊತ್ತ ಯುವತಿಯರ ನೃತ್ಯ ಸಾರ್ವಜನಿಕರ ಗಮನ ಸೆಳೆಯಿತು.

ಮೆರವಣಿಗೆಯಲ್ಲಿ ಮಾಜಿ ಶಾಸಕ ಹೆಚ್.ಪಿ.ರಾಜೇಶ್, ಸಂಸದ ಜಿ.ಎಂ. ಸಿದ್ದೇಶ್ವರ ಅವರ ಪುತ್ರ ಅನಿತ್ ಕುಮಾರ್, ಕೆಪಿಸಿಸಿ ಎಸ್ಸಿ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ಎಂ.ಡಿ. ಕೀರ್ತಿಕುಮಾರ್, ಕೆಪಿಸಿಸಿ ಸದಸ್ಯ ಕಲ್ಲೇಶ್ ರಾಜ್ ಪಟೇಲ್, ಬಿಜೆಪಿ ಮುಖಂಡ ಬಿಸ್ತುವಳ್ಳಿ ಬಾಬು ಸೇರಿದಂತೆ ಅನೇಕರು ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಸೂರಗೊಂಡನಕೊಪ್ಪ ಧರ್ಮಾಧಿಕಾರಿ ಬಾಲಕೃಷ್ಣ ಮಹಾರಾಜ್, ಧರ್ಮದರ್ಶಿ ವೆಂಕಟೇಶ್, ಬಂಜಾರ ಸಂಘದ ತಾಲ್ಲೂಕು ಅಧ್ಯಕ್ಷ ಕೆ.ಜಿ.ಪುರುಷೋತ್ತಮ ನಾಯ್ಕ, ಕಾರ್ಯದರ್ಶಿ ಸುರೇಶ್ ನಾಯ್ಕ, ಮುಖಂಡರಾದ ಕುಮಾರ ನಾಯ್ಕ, ಮುನಿಯ ನಾಯ್ಕ, ಜ್ಯೋತಿ ನಾಯ್ಕ, ಮೂರ್ತಿ ನಾಯ್ಕ, ಮಂಜಾನಾಯ್ಕ, ರೇವಣ್ಣ ನಾಯ್ಕ, ಕೊಟ್ರೇಶ್ ನಾಯ್ಕ, ಗ್ರಾ.ಪಂ. ಮಾಜಿ ಅಧ್ಯಕ್ಷ ಶಿವಕುಮಾರ್ ನಾಯ್ಕ ಹಾಗೂ ಮತ್ತಿತರರು ಭಾಗವಹಿಸಿದ್ದರು.

# ಈಶ್ವರಪ್ಪ ಅವರ ಮೇಲೆ ಪ್ರಕರಣ ದಾಖಲು : ವಾಪಸ್ಸಿಗೆ ಆಗ್ರಹ



ದಾವಣಗೆರೆ, ಫೆ.10-ಜಿಲ್ಲಾಧ್ಯಕ್ಷರ ಪದಗ್ರಹಣ ಸಮಾರಂಭದಲ್ಲಿ ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ ಅವರು ತಮ್ಮ ಭಾಷಣದಲ್ಲಿ ಎಲ್ಲಿಯೂ ತಪ್ಪು ಹೇಳಿಕೆ ನೀಡಿಲ್ಲ ಎಂದು ನಗರ ಪಾಲಿಕೆ ವಿರೋಧ ಪಕ್ಷದ ನಾಯಕ ಕೆ. ಪ್ರಸನ್ನ ಕುಮಾರ್ ಸ್ಪಷ್ಟಪಡಿಸಿದ್ದಾರೆ.

ಈಶ್ವರಪ್ಪ ಅವರು 'ದೇಶ ವಿರೋಧಿ ಹೇಳಿಕೆ ನೀಡಿರುವಂತಹ ಅಥವಾ ಮುಂದೆ ಹೇಳಿಕೆ ನೀಡುವ ವ್ಯಕ್ತಿಗಳಿಗೆ ಗುಂಡೇಟು ನೀಡುವಂತಹ ಕಾನೂನನ್ನು ಜಾರಿಗೆ ತರಬೇಕು ಎಂದು ನರೇಂದ್ರ ಮೋದಿ ಅವರಲ್ಲಿ ಕೇಳಿಕೊಳ್ಳುತ್ತೇನೆ' ಎಂಬ ಶಬ್ಧ ಪ್ರಯೋಗ ಮಾಡಿದ್ದಾರೆ. ಯಾರಿಗೂ ಕೂಡ ಗುಂಡಿನಿಂದ ಹೊಡೆಯಬೇಕು ಎಂದು ಪ್ರಚೋದನಕಾರಿ ಹೇಳಿಕೆ ನೀಡಿಲ್ಲ.

ದೇಶ ವಿರೋಧಿ ಚುಟುವಟಿಕೆ ಮಾಡುವವರನ್ನು ಕಾನೂನು ಜಾರಿ ಮಾಡಿ ಶಿಕ್ಷೆಗೆ ಒಳಪಡಿಸಬೇಕು ಎಂದು ಹೇಳಿರುವ ಈಶ್ವರಪ್ಪ ಅವರ ಮೇಲೆ ಪ್ರಕರಣ ದಾಖಲಿಸಲಾಗುತ್ತಿದೆ ಮತ್ತು ನೋಟೀಸ್ ನೀಡಲಾಗಿದೆ. ಆದರೆ, ದೇಶವನ್ನು ತುಂಡರಿಸಬೇಕು ಎಂದು ಹೇಳಿಕೆ ನೀಡಿರುವ ಸಂಸದ ಡಿ.ಕೆ.ಸುರೇಶ್ ಅವರ ವಿರುದ್ಧ ಯಾವುದೇ ಪ್ರಕರಣ ದಾಖಲಿಸದೇ ದೇಶ ವಿರೋಧಿಗಳನ್ನು ಪೋಷಿಸುವ ಸರ್ಕಾರ ಎಂದು ಸಾಬೀತುಪಡಿಸಿದೆ. ಈಶ್ವರಪ್ಪನವರಿಗೆ ಕೇಸ್ ದಾಖಲಿಸುವುದಾದರೆ, ಸಂಸದ ಡಿ.ಕೆ. ಸುರೇಶ್ ಅವರ ಮೇಲೆ ಭಯೋತ್ಪಾದಕರಿಗೆ ವಿಧಿಸುವಂತಹ ಸೆಕ್ಷನ್ ಅಡಿಯಲ್ಲಿ ಅಥವಾ ಟಾಡಾ ಕಾಯ್ದೆಯಲ್ಲಿ ಕೇಸ್ ದಾಖಲು ಮಾಡುತ್ತೀರಾ? ಅನ್ನುವುದನ್ನು ಸರ್ಕಾರ ಸ್ಪಷ್ಟಪಡಿಸಬೇಕು.

ಈ ಹಿಂದೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕುಕ್ಕರ್‌ನಲ್ಲಿ ಬಾಂಬ್ ಇಟ್ಟು ಭಯೋತ್ಪಾದಕ ಕೃತ್ಯದಲ್ಲಿ ಭಾಗಿಯಾದವರ ಪರವಾಗಿ ಅವರು ಅಮಾಯಕ ಅನ್ನುವಂತಹ ಹೇಳಿಕೆ ನೀಡಿದ್ದರು. ಇದನ್ನು ನೋಡಿದರೆ ಒಂದೆಡೆ ಕಾಂಗ್ರೆಸ್ ಭಯೋತ್ಪಾದಕರನ್ನು ಪೋಷಿಸುವುದು ಮತ್ತು ಈ ದೇಶವನ್ನು ಒಡೆಯುವಂತದ್ದು, ಭಯೋತ್ಪಾದನೆ ಹರಡುವವರ ಪರವಾಗಿದೆ ಎಂದು ಸ್ಪಷ್ಟವಾಗಿದೆ. ದೇಶ ಪ್ರೇಮಿಗಳಿಗೆ, ದೇಶದ ಬಗ್ಗೆ ಮಾತನಾಡುವವರಿಗೆ ಪೊಲೀಸ್ ಇಲಾಖೆಯನ್ನು ಬಳಸಿ, ವಾಕ್ ಸ್ವತಂತ್ರ್ಯವನ್ನು ಹರಣ ಮಾಡುವಂತಹ ಕೆಲಸ ಮಾಡಿದ್ದಾರೆ ಎಂದು ಪ್ರಸನ್ನ ಕುಮಾರ್ ಕಿಡಿ ಕಾರಿದ್ದಾರೆ.

## ನಗರದಲ್ಲಿ ನಾಳೆ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಕಾರ್ಯಾಗಾರ

ದಾವಣಗೆರೆ, ಫೆ.10- ಕರ್ನಾಟಕ ಸರ್ಕಾರದ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ ವತಿಯಿಂದ ನಾಳೆ ದಿನಾಂಕ 12 ರಿಂದ ಇದೇ ದಿನಾಂಕ 24 ರವರೆಗೆ ನಗರದ ಜೈನ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ.

ಕಾಲೇಜಿನ ಪ್ರಾಚಾರ್ಯ ಡಾ.ಡಿ.ಬಿ. ಗಣೇಶ್ ನೇತೃತ್ವದಲ್ಲಿ ಈ ಕಾರ್ಯಾಗಾರ ನಡೆಯಲಿದೆ. ವಿಶ್ವವಿದ್ಯಾಲಯದ ಅಡಿಯಲ್ಲಿ ಬರುವ ಕಾಲೇಜುಗಳ ಅಧ್ಯಾಪಕರುಗಳಿಗೆ ಕಾರ್ಯಾಗಾರ ಏರ್ಪಡಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಡಾ. ಮಧುಕೇಶ್ವರ ಡೀನ್ (9242202964) ಹಾಗೂ ಡಾ. ಎನ್.ವೈ. ಗಣೇಶ್ (9108952823) ಇವರನ್ನು ಸಂಪರ್ಕಿಸಬಹುದು.

## ಹರಪನಹಳ್ಳಿ : ಶರಣರ ಜಯಂತಿ ಆಚರಣೆ



ಹರಪನಹಳ್ಳಿ, ಫೆ. 10 - ಪಟ್ಟಣದ ತಾಲ್ಲೂಕು ಆಡಳಿತ ಸೌಧದಲ್ಲಿ ಶನಿವಾರ ತಾಲ್ಲೂಕು ಆಡಳಿತದಿಂದ ಕಾಯಕ ಶರಣರ ಜಯಂತಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಗ್ರೇಡ್2 ತಹಶೀಲ್ದಾರ್ ನಟರಾಜ, ಮುಖಂಡರಾದ ನಿಚ್ಚವ್ವನಹಳ್ಳಿ ಭೀಮಪ್ಪ, ಸಂತೋಷ, ತೆರದಾಳ್ ಶಿವಪ್ಪ ಸೇರಿದಂತೆ ಸಿಬ್ಬಂದಿ ಇದ್ದರು.

## ರೈತ ಸಂಘದ ಆಯ್ಕೆ



ದಾವಣಗೆರೆ, ಫೆ.10- ಕರ್ನಾಟಕ ರಾಜ್ಯ ರೈತ ಸಂಘ ದಾವಣಗೆರೆ ತಾ. ಅಧ್ಯಕ್ಷರಾಗಿ ಕೆಂಚಮ್ಮನಹಳ್ಳಿ ಹನುಮಂತಪ್ಪ ಹಾಗೂ ಕಿತ್ತೂರು ಹನುಮಂತಪ್ಪ ಅವರನ್ನು ಉಪಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ ಎಂದು ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ಗುಮ್ಮನೂರು ಬಸವರಾಜ್ ತಿಳಿಸಿದ್ದಾರೆ.

## ಹಿರೇಹಳ್ಳಿಯಲ್ಲಿ ಇಂದು ಜಾತ್ರೆ

ಚಳ್ಳಕೆರೆ ತಾಲ್ಲೂಕಿನ ಹಿರೇಹಳ್ಳಿ ಗ್ರಾಮದಲ್ಲಿ ಇಂದು ಸೂರ್ಯ ದೇವರ ಜಾತ್ರೆ ಜರುಗಲಿದೆ.


### ಅಗಸನಕಟ್ಟೆ ಎ. ರಂಗನಾಥ್ ನಿಧನ



ದಾವಣಗೆರೆ ಸಮೀಪದ ಹೊಸ ಕುಂದುವಾಡ ಗ್ರಾಮದ ಅಗಸನಕಟ್ಟೆ ರಂಗನಾಥ್ (60 ವರ್ಷ) ಇವರು ದಿನಾಂಕ 10.02.2024ರ ಶನಿವಾರ ರಾತ್ರಿ 9.30ಕ್ಕೆ ನಿಧನರಾದರು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯಯು ದಿನಾಂಕ 11.02.2024ರ ಭಾನುವಾರ ಮಧ್ಯಾಹ್ನ 3 ಕ್ಕೆ ದಾವಣಗೆರೆ ಗಾಂಧಿನಗರದ ರುದ್ರಭೂಮಿಯಲ್ಲಿ ನೆರವೇರಲಿದೆ.

## ರಾಣೇಬೆನ್ನೂರು ಹಾಲಿ ಶಾಸಕರಿಗೆ ಮಾಜಿ ಶಾಸಕರ 11 ಪ್ರಶ್ನೆಗಳ ಮನವಿ





ರಾಣೇಬೆನ್ನೂರು,ಫೆ.10- ಹಾಲಿ ಶಾಸಕ ಪ್ರಕಾಶ ಕೋಳಿವಾಡ ಅವರಿಗೆ ಮಾಜಿ ಶಾಸಕ ಅರುಣಕುಮಾರ ಪೂಜಾರ ಅವರು ಇಂದು ತಮ್ಮ ಬೆಂಬಲಿಗರೊಂದಿಗೆ ಬಿಜೆಪಿ ಕಛೇರಿಯಿಂದ ತಾಪಂನಲ್ಲಿರುವ ಶಾಸಕ ಪ್ರಕಾಶ ಕೋಳಿವಾಡ ಕಛೇರಿಗೆ ತೆರಳಿ ಕೆಳಗಿನಂತಿರುವ ಹನ್ನೊಂದು ಪ್ರಶ್ನೆಗಳ ಮನವಿ ಪತ್ರವನ್ನು ಶಾಸಕರ ಆಪ್ತ ಸಹಾಯಕರಿಗೆ ಸಲ್ಲಿಸಿದರು. ಕ್ಷೇತ್ರದ ಅಭಿವೃದ್ಧಿಗೆ ತಂದ ಅನುದಾನವೆಷ್ಟು, ಅದರಲ್ಲಿ ಹಣ ಬಿಡುಗಡೆ ಆದದ್ದೆಷ್ಟು, ಚುನಾವಣೆ ಸಂದರ್ಭದ ಭರವಸೆಗಳ ವಿವರ, ರೈತರಿಗೆ ನೀಡಿದ ಪರಿಹಾರವೆಷ್ಟು, ನಿರುದ್ಯೋಗ ವಿವರ, ಶೈಕ್ಷಣಿಕ ಅಭಿವೃದ್ಧಿಯ ಕ್ರಮಗಳೇನು, ಆರೋಗ್ಯ ಕ್ರಮಗಳೇನು, ರಸ್ತೆ ಅಭಿವೃದ್ಧಿ ಎಷ್ಟು, ಕುಡಿಯುವ ನೀರಿನ ಹಾಗು ಒಳಚರಂಡಿ ಕ್ರಮಗಳೇನು? ಮುಂತಾದ ಪ್ರಶ್ನೆಗಳ ಮನವಿಯನ್ನ ಶಾಸಕರ ಆಪ್ತ ಸಹಾಯಕರಿಗೆ ನೀಡಲಾಯಿತು.

## ಡಿಪ್ಲೋಮಾ, ಐಟಿಐ ಅಭ್ಯರ್ಥಿಗಳಿಗೆ ಅಪ್ರೆಂಟಿಸ್ ಮೇಳ ; ಫೆ.19ಕ್ಕೆ ಮುಂದೂಡಿಕೆ

ಹರಿಹರ, ಫೆ.10- ಹರಿಹರದ ಎಪಿಎಂಸಿ ಬಳಿ ಇರುವ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ವತಿಯಿಂದ ಡಿಪ್ಲೋಮಾ, ಐಟಿಐ ಪಾಸಾದವರಿಗೆ ಹಮ್ಮಿಕೊಳ್ಳಲಾಗಿದ್ದ ಜಿಲ್ಲಾ ಮಟ್ಟದ ರಾಷ್ಟ್ರೀಯ ಅಪ್ರೆಂಟಿಸ್ ಮೇಳವನ್ನು ಫೆಬ್ರವರಿ 19 ಕ್ಕೆ ಮುಂದೂಡಲಾಗಿದೆ.

ಈ ಶಿಶಿಕ್ಷು ಮೇಳದಲ್ಲಿ ಜಿಲ್ಲೆಯ ಐ.ಟಿ.ಐ, ಡಿಪ್ಲೋಮಾ ಪಾಸ್ ಆದ ನಿರುದ್ಯೋಗಿ ಯುವಕ, ಯುವತಿಯರು ಹಾಗೂ ಅಂತಿಮ ವರ್ಷದ ವಿದ್ಯಾರ್ಥಿಗಳು ಸಹ ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗಾಗಿ ಮೊ. 9480085001, 9945049894, 9743104863 ಸಂಪರ್ಕಿಸಲು ಸ.ಕೈ.ತ.ಸಂಸ್ಥೆ ಪ್ರಾಂಶುಪಾಲ ಜಯಪ್ಪ ಎಂ. ತಿಳಿಸಿದ್ದಾರೆ.

## ಚನ್ನಗಿರಿ ತಾಲ್ಲೂಕಿನಲ್ಲಿ ಇಂದು - ನಾಳೆ ಸಂವಿಧಾನ ಜಾಗೃತಿ ಜಾಥಾ

ಸಂವಿಧಾನದ ಆಶಯಗಳ ಜನಸಾಮಾನ್ಯರಿಗೆ ತಿಳಿಸಿಕೊಡಲು ಸಂವಿಧಾನ ಜಾಗೃತಿ ಜಾಥಾ ಜಿಲ್ಲೆಯಾದ್ಯಂತ ನಡೆಯತ್ತಿದ್ದು, ಚನ್ನಗಿರಿ ತಾಲ್ಲೂಕಿನ ವಿವಿಧ ಗ್ರಾಮ ಪಂಚಾಯಿತಿ ಕೇಂದ್ರ ಸ್ಥಳಗಳಲ್ಲಿ ಇಂದು ಮತ್ತು ನಾಳೆ ಸಂಚರಿಸಲಿದೆ. ಜಾಥಾವು ಇಂದು ಚನ್ನಗಿರಿ ತಾಲ್ಲೂಕಿನ ಲಿಂಗದಹಳ್ಳಿ-ನಲ್ಲೂರು, ನಲ್ಲೂರು-ಇಟ್ಟಿಗೆ, ಇಟ್ಟಿಗೆ-ಬುಳಸಾಗರ, ಬುಳಸಾಗರ-ಕಗತೂರು, ಕಗತೂರು-ಅಗರಬನ್ನಿಹಟ್ಟಿ, ಅಗರಬನ್ನಿಹಟ್ಟಿ-ಗರಗ, ಗರಗ-ಮುದಿಗೆರೆ ಜಾಥಾವು ಮುದಿಗೆರೆ ಗ್ರಾಮದಿಂದ ಮುಂದಿನ ಗ್ರಾಮಗಳಿಗೆ ಸಂಚರಿಸಲಿದೆ. ನಾಳೆ ಸೋಮವಾರ ಮುದಿಗೆರೆ-ಹಿರೆಮಳಲಿ, ಹಿರೇಮಳಲಿ-ಚೆನ್ನೇಶಪುರ, ಚೆನ್ನೇಶಪುರ-ಜೋಳದಾಳ್, ಜೋಳದಾಳ್-ಹರೋನಹಳ್ಳಿ, ಹರೋನಹಳ್ಳಿ-ಅಜ್ಜಿಹಳ್ಳಿ, ಅಜ್ಜಿಹಳ್ಳಿ-ಚನ್ನಗಿರಿ ಟೌನ್, ಚನ್ನಗಿರಿ ಟೌನ್-ತಿಪ್ಪಗೊಂಡನಹಳ್ಳಿ ಜಾಥಾವು ಸಾಗಲಿದ್ದು, ತಿಪ್ಪಗೊಂಡನಹಳ್ಳಿ ಗ್ರಾಮದಿಂದ ಮುಂದಿನ ಗ್ರಾಮಗಳಿಗೆ ಸಂಚರಿಸಲಿದೆ.

## ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪಗೆ ನೋಟಿಸ್

ದಾವಣಗೆರೆ, ಫೆ.10- ತನಿಖೆಗಾಗಿ ಠಾಣೆಗೆ ಆಗಮಿಸುವಂತೆ ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಅವರಿಗೆ ಬಡಾವಣೆ ಪೊಲೀಸರು ನೋಟೀಸ್ ಕಳುಹಿಸಿದ್ದಾರೆ.

ಕೆ.ಎಸ್. ಈಶ್ವರಪ್ಪ ಅವರು ಪ್ರಚೋದನಕಾರಿ ಹೇಳಿಕೆ ನೀಡಿದ್ದಾರೆಂದು ಶುಕ್ರವಾರ ಇಲ್ಲಿನ ಬಡಾವಣೆ ಪೊಲೀಸ್ ಠಾಣೆಯಲ್ಲಿ ಹನುಮಂತ ಎಂಬುವವರು ದೂರು ನೀಡಿದ್ದರು. ಕಲಂ 505 (1)(ಸಿ), 505(2), 506 ಐಪಿಸಿ ಅಡಿಯಲ್ಲಿ ಪ್ರಕರಣ ದಾಖಲಾಗಿತ್ತು.

ಈ ಹಿನ್ನೆಲೆಯಲ್ಲಿ ಸದರಿ ಕೇಸಿನಲ್ಲಿ ಘಟನೆ ಬಗ್ಗೆ ಕೆಲವು ಸತ್ಯಾಂಶ ಹಾಗೂ ಸನ್ನಿವೇಶಗಳನ್ನು ಖಚಿತಪಡಿಸಿಕೊಳ್ಳಬೇಕಾಗಿರುವುದರಿಂದ ವಿಚಾರಣೆ ಮಾಡಲು ಪೂರಕ ಕಾರಣಗಳು ಕಂಡು ಬಂದಿದ್ದು, ಕೇಸಿನ ಆರೋಪ ವಿಚಾರಣೆಗಾಗಿ ಫೆ.15ರಂದು ಬೆಳಿಗ್ಗೆ 10.30 ಗಂಟೆಗೆ ಬಡಾವಣೆ ಪೊಲೀಸ್ ಠಾಣೆಗೆ ಆಗಮಿಸುವಂತೆ ಆರಕ್ಷಕ ಉಪ ನಿರೀಕ್ಷಕರು ನೊಟೀಸ್ ಕಳುಹಿಸಿದ್ದಾರೆ.

## ನಗರದಲ್ಲಿ ಇಂದು 6 ನೇ ವಾರ್ಷಿಕೋತ್ಸವ

ಪಿ.ಬಿ. ರಸ್ತೆ ಪಿಸಾಳೆ ಕಾಂಪೌಂಡ್‌ನಲ್ಲಿರುವ ಶ್ರೀ ಶ್ರೀನಿವಾಸ ಸೇವಾ ಸಂಘದ ವತಿಯಿಂದ ಇಂದು ಬೆಳಿಗ್ಗೆ 5 ರಿಂದ ಮಧ್ಯಾಹ್ನ 12.30 ರವರೆಗೆ ಶ್ರೀ ಗುಳ್ಳಮ್ಮ ದೇವಿ ದೇವಸ್ಥಾನದಲ್ಲಿ 6 ನೇ ವಾರ್ಷಿಕೋತ್ಸವ ಕಾರ್ಯಕ್ರಮಗಳು ಜರುಗಲಿವೆ. ಬೆಳಿಗ್ಗೆ 5.10 ರಿಂದ 6.10 ರವರೆಗೆ ಧ್ವಜಾರೋಹಣ, 6.30 ರಿಂದ ಗಣಪತಿ ಪೂಜೆ ನಂತರ ಪುಣ್ಯಾಹ, ನಂದಿಪೂಜೆ, ಅಮ್ಮನವರಿಗೆ ಅಭಿಷೇಕ, ಗಣಹೋಮ, ನವಗ್ರಹ ಹೋಮ, ದೇವಿ ಹೋಮ ನಡೆಯಲಿವೆ. ಮಧ್ಯಾಹ್ನ 1 ಗಂಟೆಗೆ ಪ್ರಸಾದ ವಿತರಣೆ ಮಾಡಲಾಗುವುದು.

## ತೋಳಹುಣಸೆ : ಅಪರಿಚಿತ ಶವ ಪತ್ತೆ

ದಾವಣಗೆರೆ, ಫೆ. 10- ಸುಮಾರು 55 ರಿಂದ 60 ವರ್ಷ ವಯಸ್ಸಿನ ಗೋಧಿ ಮೈಬಣ್ಣ, ಕೋಲು ಮುಖ, ಸಾಧಾರಣ ಮೈಕಟ್ಟು, ತಲೆಯಲ್ಲಿ ಬಿಳಿ ಕೂದಲಿನ ಅಪರಿಚಿತ ಗಂಡಸಿನ ಶವ ದಾವಣಗೆರೆ-ತೋಳಹುಣಸೆ ರೈಲು ನಿಲ್ದಾಣಗಳ ಮಧ್ಯೆ ಪತ್ತೆಯಾಗಿದೆ. ಸಂಬಂಧಪಟ್ಟವರು ದಾವಣಗೆರೆ ರೈಲ್ವೆ ಪೊಲೀಸ್ ಠಾಣೆ (08192-259643 ಅಥವಾ 94808 00469, 94808 02123) ಯನ್ನು ಸಂಪರ್ಕಿಸಬಹುದು.

## ಬೆನಕನಹಳ್ಳಿಯ ವಿ.ಎಸ್.ಎಸ್.ಎನ್.ಗೆ ಅಧ್ಯಕ್ಷರಾಗಿ ಟಿ.ಜಿ.ಜ್ಯೋತಿ



ಹೊನ್ನಾಳಿ, ಫೆ.10- ತಾಲ್ಲೂಕಿನ ಬೆನಕನಹಳ್ಳಿಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿಯ ಅಧ್ಯಕ್ಷ - ಉಪಾಧ್ಯಕ್ಷರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ ಎಂದು ಚುನಾವಣಾಧಿಕಾರಿ ನವೀನ್‌ಕುಮಾರ್ ಘೋಷಿಸಿದರು. ಟಿ.ಜಿ.ಜ್ಯೋತಿ ಪ್ರಕಾಶ್ ಅಧ್ಯಕ್ಷರಾಗಿ ಆಯ್ಕೆಯಾದರೆ, ಎಂ. ಬೂದ್ಯಪ್ಪ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಈ ಸಂದರ್ಭದಲ್ಲಿ ನಿರ್ದೇಶಕರಾದ ಡಿ.ಎಸ್. ಸುರೇಂದ್ರಗೌಡ, ಟಿ.ಜಿ.ಗಣೇಶಪ್ಪ, ಮಂಜುನಾಥ ಸ್ವಾಮಿ, ಮಾಜಿ ಸೈನಿಕರಾದ ಬಿ.ಜಿ.ಸಿದ್ದೇಶಪ್ಪ, ಎಂ.ನಾರಪ್ಪ, ಹೆಚ್.ಜಿ.ಮಂಜುಳ ಗಣೇಶ್, ಹೆಚ್.ಜಿ.ವಿನಾಯಕ, ಕುಮಾರ್ ನಾಯ್ಕ್, ಹನುಮಂತಪ್ಪ, ಬಿ.ಜಿ.ಶಿವಕುಮಾರ್ ಮತ್ತು ಕಾರ್ಯದರ್ಶಿ ಹಾಲೇಶ್ ಮತ್ತು ಗಣೇಶ್ ಬೆನಕನಹಳ್ಳಿ ಉಪಸ್ಥಿತರಿದ್ದರು.

ಹಿಂದಿನ ಅವಧಿಯ ಪದಾಧಿಕಾರಿಗಳಾಗಿದ್ದ ಎ.ಜಿ.ಗಣೇಶ್, ಎಸ್.ಗಣೇಶಪ್ಪ, ಕೆ.ಶೇಖರಪ್ಪ, ವೈ.ಹೆಚ್.ಮಹೇಶ್ವರಪ್ಪ, ಲಲಿತಮ್ಮ, ರಾಜೇಶ್ವರಿ, ಟಿ.ವಿ.ರುದ್ರೇಶಪ್ಪ, ಕೆ.ಬೆನಕಪ್ಪ, ಸೇವ್ಯಾನಾಯ್ಕ್, ಬಸವರಾಜಪ್ಪ ಮತ್ತು ಟಿ.ಮಂಜಪ್ಪ ಅವರನ್ನು ಸನ್ಮಾನಿಸಿ ಬೀಳ್ಕೊಡಲಾಯಿತು.

## ನಗರದಲ್ಲಿ ಇಂದು ವಿಷ್ಣುವರ್ಧನ್, ಅಂಬರೀಶ್ ಸ್ಮರಣೆ, ಪ್ರಶಸ್ತಿ ಪ್ರದಾನ, ಸನ್ಮಾನ

ದಾವಣಗೆರೆ, ಫೆ. 10- ಗಾನಸುಧೆ ಕಲಾ ಬಳಗದಿಂದ ನಾಳೆ ದಿನಾಂಕ 11 ರ ಭಾನುವಾರ ಸಂಜೆ 5 ಕ್ಕೆ ನಗರದ ಶಿವಯೋಗ ಮಂದಿರದ ಆವರಣದಲ್ಲಿ ಫ್ರೆಂಡ್ಸ್ ಮೆಲೋಡಿ ಆರ್ಕೆಸ್ಟ್ರಾ ವತಿಯಿಂದ ಸಾಹಸ ಸಿಂಹ ವಿಷ್ಣುವರ್ಧನ್ ಮತ್ತು ರೆಬೆಲ್ ಸ್ಟಾರ್ ಅಂಬರೀಶ್ ಸ್ಮರಣಾರ್ಥ ಆಪ್ತಮಿತ್ರರ ಸವಿನೆನಪಿಗಾಗಿ ರಸಮಂಜರಿ ಕಾರ್ಯಕ್ರಮ ಹಾಗೂ ಸಾಧಕರು ಮತ್ತು ಕಲಾವಿದರಿಗೆ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಬಳಗದ ಪ್ರಧಾನ ಕಾರ್ಯದರ್ಶಿ ಟಿ. ಪರಮೇಶ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ವಾಸುದೇವ ರಾಯ್ಕರ್ ಕಾರ್ಯಕ್ರಮ ಉದ್ಘಾಟಿಸುವರು. ಟಿ. ಪರಮೇಶ್ ಪ್ರಾಸ್ತಾವಿಕವಾಗಿ ಮಾತನಾಡಲಿದ್ದು, ಬಿ.ಜಿ. ಅಜಯ್ ಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ. ಶ್ರೀನಿವಾಸ್ ದಾಸಕರಿಯಪ್ಪ ಚಿತ್ರನಟರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಿದ್ದಾರೆ. ಜಿ.ಬಿ. ವಿನಯ್ ಕುಮಾರ್ ಕಕ್ಕರಗೊಳ್ಳ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ಕನ್ನಡ ಮಾಣಿಕ್ಯ ಪ್ರಶಸ್ತಿಯನ್ನು ಕರವೇ ಜಿಲ್ಲಾಧ್ಯಕ್ಷ ಎಂ.ಎಸ್. ರಾಮೇಗೌಡ, ಕಲಾಭೂಷಣ ಪ್ರಶಸ್ತಿಯನ್ನು ಹರಿಹರದ ಗಾಯಕ ನಾಗರಾಜ್ ಎಂ. ಆಚಾರ್ ಅವರಿಗೆ ಪ್ರದಾನ ಮಾಡಲಾಗುವುದು. ಮುಖ್ಯ ಅತಿಥಿಗಳಾಗಿ ಡಾ.ಟಿ.ಜಿ. ರವಿಕುಮಾರ್, ರವಿಚಂದ್ರ, ಹೊದಿಗೆರೆ ರಮೇಶ್, ಬಸವರಾಜ್, ಸಾಗರ್, ಮಹಾಂತೇಶ್ ವಿ. ಒಣರೊಟ್ಟಿ ಮತ್ತಿತರರು ಭಾಗವಹಿಸಲಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಂಜುನಾಥ್, ನಾಗರಾಜಚಾರ್, ಎನ್. ಮಂಜುನಾಥ, ಸೌಮ್ಯಶ್ರೀ, ಹರೀಶ್, ಅನುಪ್ರಸಾದ್ ಉಪಸ್ಥಿತರಿದ್ದರು.

## ಸೈಬರ್ ಅಪರಾಧ ತಡೆಗೆ ಪೊಲೀಸರಿಂದ 'ಸ್ವಯಂ ಸೇವಕರ' ತಂಡ

ಪೋರ್ಟ್ ಬ್ಲೇರ್, ಫೆ. 10 – ಸೈಬರ್ ಅಪರಾಧಿಗಳನ್ನು ತಡೆಯಲು ಸ್ಥಳೀಯ ನಾಗರಿಕರ 'ಸೈಬರ್ ಸ್ವಯಂ ಸೇವಕರ' ತಂಡ ರಚಿಸಲು ಅಂಡಮಾನ್ ಮತ್ತು ನಿಕೋಬಾರ್ ಪೊಲೀಸರು ನಿರ್ಧರಿಸಿದ್ದಾರೆ.

2023ರಲ್ಲಿ ಅಂಡಮಾನ್ ಮತ್ತು ನಿಕೋಬಾರ್ ಪೊಲೀಸರಲ್ಲಿ 723 ಸೈಬರ್ ಅಪರಾಧಗಳ ದೂರುಗಳು ದಾಖಲಾಗಿದ್ದವು. 38 ಲಕ್ಷ ರೂ.ಗಳನ್ನು ವಶಪಡಿಸಿಕೊಳ್ಳುವಲ್ಲಿ ಪೊಲೀಸರು ಯಶಸ್ವಿಯಾಗಿದ್ದರು. ಹೆಚ್ಚುತ್ತಿರುವ ಸೈಬರ್ ಪಿಡುಗು ತಡೆಯಲು ಸ್ವಯಂ ಸೇವಕರ ತಂಡ ರಚಿಸಲು ಪೊಲೀಸರು ಮುಂದಾಗಿದ್ದಾರೆ. ಅಕ್ರಮ ಚಟುವಟಿಕೆಗಳನ್ನು ಗುರುತಿಸಿ ಮಾಹಿತಿ ನೀಡಲು ಹಾಗೂ ಸೈಬರ್ ಅರಿವು ಮೂಡಿಸುವ ದಿಸೆಯಲ್ಲಿ ಕಾರ್ಯನಿರ್ವಹಿಸಲು ಸ್ವಯಂ ಸೇವಕರು ನೆರವಾಗಲಿದ್ದಾರೆ.

## ಶಂಕರಪ್ಪ ಬೆಂಡಿಗೇರಿ ನಿಧನ



ದಾವಣಗೆರೆ ಎಂ.ಸಿ.ಸಿ. 'ಎ' ಬ್ಲಾಕ್, ಬಕ್ಕೇಶ್ವರ ಸ್ಕೂಲ್ ಹತ್ತಿರದ ವಾಸಿ, ನಿವೃತ್ತ ಕಾರ್ಯಪಾಲಕ ಇಂಜಿನಿಯರ್ (ಕೆ.ಇ.ಬಿ.) ಆದ

**ಶ್ರೀ ಶಂಕರಪ್ಪ ಬೆಂಡಿಗೇರಿ** ಅವರು

ದಿನಾಂಕ 10-2-2024ರ ಶನಿವಾರ ರಾತ್ರಿ 11.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 80 ವರ್ಷ ವಯಸ್ಸಾಗಿತ್ತು. ಪತ್ನಿ, ನಾಲ್ವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು- ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 11-2-2024ರ ಭಾನುವಾರ ಮಧ್ಯಾಹ್ನ 3 ಕ್ಕೆ ಗ್ಲಾಸ್‌ಹೌಸ್ ಹತ್ತಿರವಿರುವ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**

**ಮೊ. : 94833 21612, 77605 35353**

॥ ಶ್ರೀ ಗುರು ಮುಕೇಶ ಪ್ರಸನ್ನ ॥

## ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ



ಜನನ 14.08.1963 ಮರಣ 03.02.2024

ದಾವಣಗೆರೆ ಸಿಟಿ 4ನೇ ಕ್ರಾಸ್, ಕೆ.ಬಿ. ಬಡಾವಣೆ ವಾಸಿ

**ಶ್ರೀ ನಿಜಲಿಂಗಪ್ಪ ಹಳಕಟ್ಟಿ ಮತ್ತು ಸಹೋದರರು**

ಮಾಡುವ ವಿಜ್ಞಾಪನೆಗಳು.

ದಿ. : 03.02.2024ನೇ ಶನಿವಾರ ಬೆಳಗಿನ ಜಾವ 1.00ಕ್ಕೆ ನನ್ನ ಸಹೋದರರಾದ

**ಶ್ರೀ ಎಸ್.ಹೆಚ್. ಮುಕೇಶಪ್ಪ (ಅಜ್ಜಣ್ಣ)**

ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**ಕೈಲಾಸ ಸಮಾರಾಧನೆಯನ್ನು**

**ದಿನಾಂಕ : 11.02.2024ನೇ ಭಾನುವಾರ ಬೆಳಿಗ್ಗೆ 11.00 ಗಂಟೆಗೆ, ದಾವಣಗೆರೆಯ ಮೃತರ ಸ್ವಗೃಹದಲ್ಲಿ** ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :

**ಶ್ರೀ ನಿಜಲಿಂಗಪ್ಪ ಹಳಕಟ್ಟಿ ಮತ್ತು ಸಹೋದರರು ಹಾಗೂ ಬಂಧು-ಮಿತ್ರರು.**

ವಿನಾಯಕ ಟ್ರೇಡಿಂಗ್ ಕಂಪನಿ, ಮುಕೇಶ್ ಟ್ರೇಡಿಂಗ್ ಕಂಪನಿ, ಈರುಳ್ಳಿ ಮಾರುಕಟ್ಟೆ, ದಾವಣಗೆರೆ. 94480 86655, 94482 29598

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.

## ಹಿರೇಕೋಗಲೂರು ಹೆಚ್.ಪಿ. ರುದ್ರೇಶ್ ನಿಧನ



ದಾವಣಗೆರೆ ತಾಲ್ಲೂಕು ಹೊಸಬೆಳವನೂರು ಗ್ರಾಮದ ವಾಸಿ, ಚನ್ನಗಿರಿ ತಾಲ್ಲೂಕು ಹಿರೇಕೋಗಲೂರು ಗ್ರಾಮದ ಪಾಲಾಕ್ಷಪ್ಪನವರ ಪುತ್ರ


**ಶ್ರೀ ಹೆಚ್.ಪಿ. ರುದ್ರೇಶ್**

ಅವರು ದಿನಾಂಕ 10-2-2024ರ ಶನಿವಾರ ಬೆಳಿಗ್ಗೆ 10.10ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 46 ವರ್ಷ ವಯಸ್ಸಾಗಿತ್ತು. ತಂದೆ, ತಾಯಿ, ನಾಲ್ವರು ಸಹೋದರಿಯರು, ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು- ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 11-2-2024ರ ಭಾನುವಾರ ಮಧ್ಯಾಹ್ನ 12 ಕ್ಕೆ ಚನ್ನಗಿರಿ ತಾಲ್ಲೂಕು ಹಿರೇಕೋಗಲೂರು ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**

**ಮೊ. : 99802 23943, 70197 48226, 99003 30948**

## ಹೆದ್ನೆ ನಾಗರತ್ನಮ್ಮ ನಿಧನ



ದಾವಣಗೆರೆ ತಾಲ್ಲೂಕು ಮಾಯಕೊಂಡ ಹೋಬಳಿ ಹೆದ್ನೆ ಗ್ರಾಮದ ವಾಸಿ ಶಿವನೇರ ಹೆಚ್.ಎಸ್. ವಿಜಯಕುಮಾರ್ ಇವರ ಧರ್ಮಪತ್ನಿ

**ಶ್ರೀಮತಿ ಆರ್.ಟಿ. ನಾಗರತ್ನಮ್ಮ**

ಇವರು, ದಿನಾಂಕ 10.02.2024ರ ಶನಿವಾರ ಬೆಳಿಗ್ಗೆ 9.05ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 55 ವರ್ಷ ವಯಸ್ಸಾಗಿತ್ತು. ಓರ್ವ ಪುತ್ರ, ಓರ್ವ ಪುತ್ರಿ, ಸೊಸೆ, ಅಳಿಯ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 11.02.2024ರ ಭಾನುವಾರ ಬೆಳಿಗ್ಗೆ 11.30ಕ್ಕೆ ಮೃತರ ಸ್ವಗ್ರಾಮವಾದ ದಾವಣಗೆರೆ ತಾಲ್ಲೂಕು ಮಾಯಕೊಂಡ ಹೋಬಳಿ ಹೆದ್ನೆ ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ : **ಶಿವನೇರ ವಂಶಸ್ಥರು, ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು ಹಾಗೂ ಹೆದ್ನೆ ಗ್ರಾಮಸ್ಥರು.**

**ಮೊ : 80887 73482, 91106 47879**

KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

1974 2023

ಭಾನುವಾರ, ಫೆಬ್ರವರಿ 11, 2024

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

☎ 08192 254736 91642 99999

## ಅರ್ಬನ್ ಬ್ಯಾಂಕ್ ಚುನಾವಣೆ : ಕೋಗುಂಡಿ ಬಕ್ಕೇಶಪ್ಪ, ಉಮಾಪತಿ ನೇತೃತ್ವದ ಗುಂಪಿಗೆ 5 ಅವಿರೋಧ ಆಯ್ಕೆ



**ಒಟ್ಟು 15 ಸ್ಥಾನಗಳಲ್ಲಿ ಐವರು ಪುನರಾಯ್ಕೆ : ಉಳಿದ 10 ಸ್ಥಾನಗಳಿಗೆ ಇಂದು ಚುನಾವಣೆ**

ದಾವಣಗೆರೆ, ಫೆ. 10 - ಪ್ರತಿಷ್ಠಿತ ಸಹಕಾರಿ ಬ್ಯಾಂಕ್‌ಗಳಲ್ಲೊಂದಾದ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಆಡಳಿತ ಮಂಡಳಿಗೆ ನಾಳೆ ದಿನಾಂಕ 11ರ ಭಾನುವಾರ ಚುನಾವಣೆ ನಡೆಯಲಿದ್ದು, ಒಟ್ಟು 15 ಸ್ಥಾನಗಳ ಪೈಕಿ ಐವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಪರಿಶಿಷ್ಟ ಪಂಗಡದ ಮೀಸಲು ಕ್ಷೇತ್ರದಿಂದ ಎಂ. ಚಂದ್ರಶೇಖರ್, ಪ್ರವರ್ಗ 'ಎ' ಮೀಸಲು ಕ್ಷೇತ್ರದಿಂದ ಇ.ಎಂ. ಮಂಜುನಾಥ, ಪರಿಶಿಷ್ಟ ಜಾತಿ ಮೀಸಲು ಕ್ಷೇತ್ರದಿಂದ ವಿ. ವಿಕ್ರಮ್, ಮಹಿಳಾ ಮೀಸಲು ಕ್ಷೇತ್ರದಿಂದ ಶ್ರೀಮತಿ ಸುರೇಖಾ ಎಂ. ಚಿಗಟೇರಿ ಮತ್ತು ಶ್ರೀಮತಿ ಅರ್ಚನಾ ಡಾ. ರುದ್ರಮುನಿ ಅವರುಗಳು ಅವಿರೋಧವಾಗಿ ಆಯ್ಕೆಯಾಗಿರುವ ನಿರ್ದೇಶಕರು. ಈ ಐವರೂ ಮತ್ತೊಂದು ಅವಧಿಗೆ ಪುನರಾಯ್ಕೆಯಾಗಿದ್ದಾರೆ.

ಉಳಿದಂತೆ 10 ಸ್ಥಾನಗಳಲ್ಲಿ ಸಾಮಾನ್ಯಕ್ಕೆ ಮೀಸಲಾಗಿರುವ 9 ಸ್ಥಾನಗಳಿಗೆ 12 ಜನರು, ಪ್ರವರ್ಗ 'ಬಿ' ಮೀಸಲು ಕ್ಷೇತ್ರದ 1 ಸ್ಥಾನಕ್ಕೆ 6 ಜನರು ಸ್ಪರ್ಧಾ ಕಣದಲ್ಲಿದ್ದಾರೆ.

ಬ್ಯಾಂಕಿನ ಹಾಲಿ ಅಧ್ಯಕ್ಷ ಕೋಗುಂಡಿ ಬಕ್ಕೇಶಪ್ಪ, ಹಾಲಿ ಉಪಾಧ್ಯಕ್ಷ ಅಂದನೂರು ಮುಪ್ಪಣ್ಣ, ಹಾಲಿ ನಿರ್ದೇಶಕರುಗಳಾದ ಬಿ.ಸಿ. ಉಮಾಪತಿ, ಟಿ.ಎಸ್. ಜಯರುದ್ರೇಶ್, ಅಜ್ಜಂಪುರಶೆಟ್ರು ವಿಜಯಕುಮಾರ್, ದೇವರಮನಿ ಶಿವಕುಮಾರ್, ಪಲ್ಲಾಗಟ್ಟೆ ಶಿವಾನಂದಪ್ಪ, ಕಂಚಿಕೇರಿ ಮಹೇಶ್, ಮಾಜಿ ನಿರ್ದೇಶಕ ಹೆಚ್.ಎಂ. ರುದ್ರಮುನಿಸ್ವಾಮಿ ಅವರುಗಳು ಸಾಮಾನ್ಯ ಕ್ಷೇತ್ರದಿಂದ ಸ್ಪರ್ಧೆ ಮಾಡಿದ್ದಾರೆ. ಇವರೆಲ್ಲರೂ ಬಿ.ಸಿ. ಉಮಾಪತಿ ಮತ್ತು ಕೋಗುಂಡಿ ಬಕ್ಕೇಶಪ್ಪ ನೇತೃತ್ವದಲ್ಲಿ ಸ್ಪರ್ಧಿಸಿದ್ದಾರೆ. ಇದೇ ಗುಂಪಿನಿಂದ ಪ್ರವರ್ಗ 'ಬಿ' ಮೀಸಲು ಕ್ಷೇತ್ರದ 1 ಸ್ಥಾನಕ್ಕೆ ಸೋಗಿ ಮುರುಗೇಶ್ ಸ್ಪರ್ಧಿಸಿದ್ದಾರೆ.

ಆಯ್ಕೆ ಬಯಸಿ ನಾಮಪತ್ರ ಸಲ್ಲಿಸಿದ್ದ ಬಾದಾಮಿ ಜಯಣ್ಣ, ಸ್ವರೂಪ್ ವಿ. ಅಂಗಡಿ, ಮತ್ತಿಹಳ್ಳಿ ವಿ. ಸಂತೋಷ್‌ಕುಮಾರ್, ಎಂ.ಜೆ. ಗಿರೀಶ್, ಶ್ರೀಮತಿ ಎಸ್.ಎಸ್. ಮೀನಾಕ್ಷಿ, ಶ್ರೀಮತಿ ಎಂ.ಎಂ. ಜಯಶೀಲ, ಹೆಚ್.ಆರ್. ನಿಂಗರಾಜ್ ಮತ್ತು ಎನ್.ಕೆ. ಕೊಟ್ರೇಶ್ ಅವರುಗಳು ಬಿ.ಸಿ. ಉಮಾಪತಿ ಮತ್ತು ಕೋಗುಂಡಿ ಬಕ್ಕೇಶಪ್ಪ ನೇತೃತ್ವದ ಗುಂಪನ್ನು ಬೆಂಬಲಿಸಿ, ತಮ್ಮ ಉಮೇದುವಾರಿಕೆ ಅರ್ಜಿಯನ್ನು ವಾಪಸ್ ಪಡೆದಿದ್ದಾರೆ.

ಸಾಮಾನ್ಯ ಕ್ಷೇತ್ರದ 9 (7ನೇ ಪುಟಕ್ಕೆ)

## ನಿವೃತ್ತರಿಗೆ ಇ.ಎಸ್.ಐ. ಸೌಲಭ್ಯ ನೀಡಲು ನಿಯಮ ಸಡಿಲಿಕೆ

ನವದೆಹಲಿ, ಫೆ. 10 – ನಿವೃತ್ತಿ ಹೊಂದಿದವರಿಗೆ ವೈದ್ಯಕೀಯ ಸೌಲಭ್ಯಗಳನ್ನು ವಿಸ್ತರಿಸಲು ನಿಯಮಗಳನ್ನು ಸಡಿಲಿಸಲು ಉದ್ಯೋಗಿಗಳ ಸರ್ಕಾರಿ ವಿಮಾ ನಿಗಮ (ಇ.ಎಸ್.ಐ.ಸಿ.) ನಿರ್ಧಾರ ತೆಗೆದುಕೊಂಡಿದೆ. ಕೇಂದ್ರ ಕಾರ್ಮಿಕ ಸಚಿವ ಭೂಪೇಂದ್ರ ಯಾದವ್ ಅವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ವೇತನದ ಮಿತಿ ದಾಟಿದ ಕಾರಣದಿಂದಾಗಿ ಇಎಸ್ಐ ಯೋಜನೆ ವ್ಯಾಪ್ತಿಯಿಂದ ನಿವೃತ್ತರಾದವರಿಗೆ ವೈದ್ಯಕೀಯ ಸೌಲಭ್ಯಗಳನ್ನು ಕಲ್ಪಿಸಲು ನಿರ್ಧಾರ ತೆಗೆದುಕೊಳ್ಳಲಾಗಿದೆ. ಕನಿಷ್ಠ 5 ವರ್ಷ ಕಾಲ ವಿಮೆ ವ್ಯಾಪ್ತಿಗೆ ಬಂದಿರುವ ಕಾರ್ಮಿಕರಾಗಿದ್ದರೆ ಈ ಸೌಲಭ್ಯ ಸಿಗಲಿದೆ.

**ಬೇಕಾಗಿದ್ದಾರೆ**
ಆಫೀಸಿನಲ್ಲಿ ಕೆಲಸಕ್ಕೆ ಅಟೆಂಡರ್ಸ್ (ಹುಡುಗರು) ಬೇಕಾಗಿದ್ದಾರೆ.
ಊಟ, ವಸತಿ, ಸಂಬಳ ಕೊಡುತ್ತೇವೆ.
ಸ್ಥಳ : ಮೈಸೂರು (ವಿದ್ಯಾಸಂಸ್ಥೆಗೆ)
ವಯಸ್ಸು : 35 ವರ್ಷದ ಒಳಗಿನವರು ಮಾತ್ರ
ಕರೆ ಮಾಡಿ :
9901456770

**ಬೇಕಾಗಿದ್ದಾರೆ**
ರವಿತೇಜ ಟೆಕ್ಸ್‌ಟೈಲ್ಸ್
ಅಂಗಡಿಯಲ್ಲಿ ಅನುಭವವುಳ್ಳ ಕ್ಯಾಶಿಯರ್ ಸೇಲ್ಸ್ ಮೆನ್, ಸೇಲ್ಸ್ ಗರ್ಲ್ಸ್ ಕೆಲಸ ಮಾಡಲು ಬೇಕಾಗಿದ್ದಾರೆ.
89703 23033

ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ
**ಆಡಳಿತ ಮಂಡಳಿ ಚುನಾವಣೆ-2024**
ಮಾನ್ಯ ಸದಸ್ಯರೇ,
ದಿನಾಂಕ : 11.02.2024ರ ಭಾನುವಾರದಂದು ನಡೆಯಲಿರುವ ಬ್ಯಾಂಕಿನ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆಯಲ್ಲಿ ಹಂಪಾಳಿ ನಾಗಮಣಿ ಬಸವರಾಜ, ವಕೀಲರೂ ಆದ ನಾನು ಹಿಂದುಳಿದ ಪ್ರವರ್ಗ-"ಬಿ" ಮೀಸಲು ಕ್ಷೇತ್ರದಿಂದ ಆಯ್ಕೆ ಬಯಸಿ ಸ್ಪರ್ಧಿಸಿದ್ದು, ಬ್ಯಾಂಕ್‌ನ ಸರ್ವತೋಮುಖ ಬೆಳವಣಿಗೆ ಹಾಗೂ ಅಭಿವೃದ್ಧಿಯ ಸಲುವಾಗಿ ಶ್ರಮಿಸಲಿದ್ದು, ತಮ್ಮಗಳ ಸೇವೆ ಮಾಡುವ ಮಹತ್ವಾಕಾಂಕ್ಷೆಯನ್ನು ಹೊಂದಿರುತ್ತೇನೆ. ಆದ್ದರಿಂದ ನಿಮ್ಮ ಅಮೂಲ್ಯವಾದ ಮತ ನೀಡುವುದರ ಮೂಲಕ ನನಗೆ ಆಶೀರ್ವದಿಸಿ ಸೇವೆಯನ್ನು ಸಲ್ಲಿಸುವ ಸದಾವಕಾಶ ನೀಡಬೇಕಾಗಿ ವಿನಂತಿ.
18 ಹಂಪಾಳಿ ನಾಗಮಣಿ ಬಸವರಾಜ್



ತಮ್ಮ ಸೇವಾಕಾಂಕ್ಷಿ :
ಹಂಪಾಳಿ ನಾಗಮಣಿ ಬಸವರಾಜ್
ವಕೀಲರು, ದಾವಣಗೆರೆ.
ಮೊ. : 94484 14944, 86182 74275
ನನ್ನ ಕ್ರಮ ಸಂಖ್ಯೆ -18
ಗುರುತಿನ ಚಿಹ್ನೆ - ಕೋಟು
ಚುನಾವಣೆ ದಿನಾಂಕ : 11.02.2024, ಭಾನುವಾರ
ಸಮಯ : ಬೆಳಿಗ್ಗೆ 9.00 ರಿಂದ ಸಂಜೆ 4.00
ಸ್ಥಳ : ಮೋತಿ ವೀರಪ್ಪ ಕಾಲೇಜ್ ಆವರಣ,ದಾವಣಗೆರೆ.

## ಭೂ ಸುಧಾರಣಾ ಕಾಯ್ದೆಗೆ ತಿದ್ದುಪಡಿ ಸಿಎಂ ಭರವಸೆ

ಬೆಂಗಳೂರು, ಫೆ. 10 - ರೈತರ ಬೇಡಿಕೆಗಳನ್ನು ಗಂಭೀರವಾಗಿ ಪರಿಗಣಿಸಿ, ಕೇಂದ್ರ ಸರ್ಕಾರ ಜಾರಿಗೆ ತಂದಿರುವ ರೈತ ವಿರೋಧಿ ಭೂ ಸುಧಾರಣಾ ಕಾಯ್ದೆ-2020ಕ್ಕೆ ತಿದ್ದುಪಡಿ ತರಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಭರವಸೆ ನೀಡಿದರು.

ಫ್ರೀಡಂ ಪಾರ್ಕ್‌ನಲ್ಲಿ ರೈತ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ರೈತ ನಾಯಕ ನಂಜುಂಡಸ್ವಾಮಿ ಸಂಘಟಿಸಿದ ಸ್ಟಡಿ ಸರ್ಕಲ್ ಮೂಲಕ ಸಮಾಜವಾದಿ ಆರ್ಥಿಕತೆ, ಸಮಾಜವಾದಿ ರಾಜಕಾರಣದ ಬಗ್ಗೆ ಸ್ಪಷ್ಟತೆ ಸಿಕ್ಕಿತು, ಎಲ್ಲ (7ನೇ ಪುಟಕ್ಕೆ)

## ಇ.ಪಿ.ಎಫ್.ಒ. ಬಡ್ಡಿ ದರ ಶೇ.8.25

ನವದೆಹಲಿ, ಫೆ. 10 – 2023 – 24ರ ಸಾಲಿಗೆ ಶೇ.8.25ರ ಬಡ್ಡಿ ದರ ನಿಗದಿ ಪಡಿಸಲು ನಿವೃತ್ತಿ ನಿಧಿ ಸಂಸ್ಥೆಯಾದ ಇ.ಪಿ.ಎಫ್.ಒ. ನಿರ್ಧರಿಸಿದೆ. ಇದು ಮೂರು ವರ್ಷಗಳಲ್ಲೇ ಅತಿ ಹೆಚ್ಚಾಗಿದೆ.

ಮಾರ್ಚ್ 2023ರಲ್ಲಿ ಇ.ಪಿ.ಎಫ್.ಒ. ದರ ಶೇ.8.15ರಷ್ಟಿತ್ತು. ಇ.ಪಿ.ಎಫ್.ಒ.ದ ಕೇಂದ್ರೀಯ ಟ್ರಸ್ಟಿಗಳ ಮಂಡಳಿ ಸಭೆಯಲ್ಲಿ ಬಡ್ಡಿ ದರವನ್ನು ಶೇ.8.25ಕ್ಕೆ ಹೆಚ್ಚಿಸಲು ನಿರ್ಧರಿಸಲಾಗಿದೆ.


ದಿ ದಾವಣಗೆರೆ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್ ಲಿ.,
ಪ್ರಧಾನ ಕಛೇರಿ : ಪೋಸ್ಟ್ ಬಾಕ್ಸ್ ನಂ. 217, ಪಿ.ಬಿ. ರಸ್ತೆ, ದಾವಣಗೆರೆ-577 002.
ಬ್ಯಾಂಕಿನ ಆಡಳಿತ ಮಂಡಳಿ ಚುನಾವಣೆಯಲ್ಲಿ ಮತ ಚಲಾಯಿಸಲು ಕಡ್ಡಾಯವಾಗಿ ಸದಸ್ಯರು ಗುರುತಿನ ಚೀಟಿ ತರಬೇಕಾಗಿದ್ದು, ಗುರುತಿನ ಚೀಟಿ ಪಡೆಯದೇ ಇರುವ ಸದಸ್ಯರು ದಿನಾಂಕ : 10.02.2024 ರ ಶನಿವಾರದಂದು ಬೆಳಿಗ್ಗೆ 10.00 ರಿಂದ ಸಂಜೆ 5.30ರವರೆಗೆ ಹಾಗೂ ದಿನಾಂಕ : 11.02.2024ರ ಭಾನುವಾರದಂದು ಬೆಳಿಗ್ಗೆ 8.30 ರಿಂದ ಸಂಜೆ 3.30ರವರೆಗೆ ಬ್ಯಾಂಕಿನ ಪಿ.ಜೆ. ಬಡಾವಣೆ ಶಾಖೆಗೆ ಭೇಟಿ ನೀಡಿ ಗುರುತಿನ ಚೀಟಿ ಪಡೆಯಲು ಮಾನ್ಯ ಸದಸ್ಯರಲ್ಲಿ ಕೋರಿದೆ.
ಶ್ರೀ ಬಿ.ಎಸ್. ಮಲ್ಲೇಶ್
ಪ್ರಧಾನ ವ್ಯವಸ್ಥಾಪಕರು

ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ



ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆ-2024
ಮಾನ್ಯ ಗೌರವಾನ್ವಿತ ಷೇರುದಾರರಲ್ಲಿ ವಿನಂತಿ
ದಿನಾಂಕ 11.02.2024ರ ಭಾನುವಾರ ನಡೆಯಲಿರುವ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ ಇದರ ಆಡಳಿತ ಮಂಡಳಿ ನಿರ್ದೇಶಕರ ಸ್ಥಾನಕ್ಕೆ ಹಿಂದುಳಿದ 'ಬಿ' ವರ್ಗ ಕ್ಷೇತ್ರದಿಂದ ಸ್ಪರ್ಧಿಸಿರುತ್ತೇನೆ. ಬ್ಯಾಂಕಿಗೆ ಹೆಚ್ಚಿನ ದೃಢತೆ ಮತ್ತು ವ್ಯಾಪಕತೆ ನೀಡಲು ಹೊಸ ಅವಿಷ್ಕಾರದ ಬ್ಯಾಂಕಿಂಗ್ ಸೇವೆ ಜೊತೆಗೆ ಇತ್ತೀಚಿನ ಆಧುನಿಕತೆಗೆ ತಕ್ಕಂತೆ ಕಾಲಕಾಲಕ್ಕೆ ತಾಂತ್ರಿಕತೆಯ ಅಳವಡಿಕೆಯಲ್ಲಿ ನಾವು ಕಾರ್ಯ ಪ್ರವೃತ್ತರಾಗಬೇಕಿದೆ, ಈ ನಿಟ್ಟಿನಲ್ಲಿ ನಾನು ಆಡಳಿತ ಮಂಡಳಿ ನಿರ್ದೇಶಕರ ಸ್ಥಾನಕ್ಕೆ ಸ್ಪರ್ಧಿಸಿದ್ದು, ತಾವುಗಳು ನನ್ನ ಚಿಹ್ನೆಯಾದ **'ಹೆಲ್ಮೆಟ್'** ಗುರುತಿಗೆ ತಮ್ಮ ಅತ್ಯಅಮೂಲ್ಯವಾದ ಮತವನ್ನು ನೀಡಿ ನನ್ನನ್ನು ಜಯಶೀಲರನ್ನಾಗಿ ಮಾಡಿ ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗಾಗಿ ಮತ್ತು ತಮ್ಮಗಳ ಸೇವೆ ಮಾಡಲು ಅವಕಾಶ ಮಾಡಿ ಕೊಡಬೇಕಾಗಿ ತಮ್ಮಲ್ಲಿ ಸವಿನಯ ಪ್ರಾರ್ಥನೆ.
ಕ್ರ.ಸಂ. 16 ಶಿವಯೋಗಿಶ್ವರಸ್ವಾಮಿ ಎಂ.ಹೆಚ್.
ಸಂಪಾದಕರು: 'ಮಹಿಳಾ ಧ್ವನಿ' ಪಾಕ್ಷಿಕ ಪತ್ರಿಕೆ
ಜಿಲ್ಲಾ ಸಂಚಾಲಕರು, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ (ರಿ.)
ಚುನಾವಣೆ ದಿನಾಂಕ : 11.02.2024, ಭಾನುವಾರ
ಸಮಯ : ಬೆಳಿಗ್ಗೆ 9.00 ರಿಂದ ಸಂಜೆ 4.00
ಸ್ಥಳ : ಮೋತಿ ವೀರಪ್ಪ ಕಾಲೇಜ್ ಆವರಣ, ದಾವಣಗೆರೆ.
ದ್ವಿಚಕ್ರ ವಾಹನ ಸವಾರರಲ್ಲಿ ವಿನಂತಿ
ವಾಹನ ಚಾಲನೆ ಮಾಡುವಾಗ ಕಡ್ಡಾಯವಾಗಿ ಹೆಲ್ಮೆಟ್ ಧರಿಸಿ.
ತಮ್ಮ ಸೇವಾಕಾಂಕ್ಷಿ
ಶಿವಯೋಗಿಶ್ವರಸ್ವಾಮಿ ಎಂ.ಹೆಚ್.
ಮೊ. : 9448339424

SCIENCE ACADEMY (R.)
(A UNIQUE CENTRE FOR P.U. CLASSES)
# 307 / 2B, PJ EXTENSION,
NEAR DISTRICT STADIUM, DAVANGERE – 02.
ADMISSION STARTED FOR
CET–NEET CRASH COURSE
Classes Starts from 21st March 2024
AND
II PUC (PCMB) SUMMER CLASSES
Classes Starts from 4th March 2024



* Subject Experts will engage the classes.
* Newly well Prepared study materials will be given.
* Only Few Seats are Available Join early
For more Details:
08192 - 457761,
9980368779,
9448178087.
HOSTEL FACILITY IS AVAILABLE FOR BOTH BOYS AND GIRLS

ದಿ ದಾವಣಗೆರೆ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್ ಲಿ.,
ಪ್ರಧಾನ ಕಛೇರಿ : ಪೋಸ್ಟ್ ಬಾಕ್ಸ್ ನಂ. 217, ಪಿ.ಬಿ. ರಸ್ತೆ, ದಾವಣಗೆರೆ-577 002.
**ಬ್ಯಾಂಕಿನ ಮಾನ್ಯ ಸದಸ್ಯರ ಗಮನಕ್ಕೆ**
ಈಗಾಗಲೇ ಅರ್ಹತೆ ಹೊಂದಿರುವ ಬ್ಯಾಂಕಿನ 6010 ಸದಸ್ಯರ ಜೊತೆಗೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಇವರ 'ರಿಟ್ ಪಿಟಿಷನ್ ನಂ.2818/2024' ರ ದಿನಾಂಕ : 09.02.2024 ರ ಆದೇಶದನ್ವಯ ಸುಸ್ತಿದಾರ ಸದಸ್ಯರನ್ನು ಹೊರತುಪಡಿಸಿ ಅನರ್ಹ ಮತದಾರರ ಪಟ್ಟಿಯಲ್ಲಿರುವ ಬ್ಯಾಂಕಿನ 6193 ಸದಸ್ಯರಿಗೆ ದಿನಾಂಕ : 11.02.2024ರ ಬ್ಯಾಂಕಿನ ಆಡಳಿತ ಮಂಡಳಿ ಚುನಾವಣೆಯಲ್ಲಿ ಮತದಾನ ಮಾಡಲು ಷರತ್ತುಗಳಿಗೊಳಪಟ್ಟು ಅವಕಾಶ ಕಲ್ಪಿಸಿರುವುದರಿಂದ ಸದರಿ ಆದೇಶಕ್ಕೆ ಒಳಪಟ್ಟು ದಿನಾಂಕ : 11.02.2024ರ ಭಾನುವಾರದಂದು ಬೆಳಿಗ್ಗೆ 9.00 ಘಂಟೆಯಿಂದ ಸಂಜೆ 4.00 ಘಂಟೆಯವರೆಗೆ ಮೋತಿ ವೀರಪ್ಪ ಸರ್ಕಾರಿ ಪದವಿ ಪೂರ್ವ ಕಾಲೇಜು, ಗುಂಡಿ ಸರ್ಕಲ್, ಹತ್ತಿರ, ದಾವಣಗೆರೆಯಲ್ಲಿ ನಡೆಯುವ ಬ್ಯಾಂಕಿನ ಆಡಳಿತ ಮಂಡಳಿ ಚುನಾವಣೆಯಲ್ಲಿ ಮಾನ್ಯ ಸದಸ್ಯರು ಮತದಾನದ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಬೇಕೆಂದು ಕೋರಲಾಗಿದೆ.
ದಿನಾಂಕ : 09.02.2024
ಸ್ಥಳ : ದಾವಣಗೆರೆ
ಶ್ರೀ ಬಿ.ಎಸ್. ಮಲ್ಲೇಶ್
ಪ್ರಧಾನ ವ್ಯವಸ್ಥಾಪಕರು
ಶ್ರೀ ಎನ್.ಜಿ. ರುದ್ರಪ್ಪ
ರಿಟರ್ನಿಂಗ್ ಅಧಿಕಾರಿಗಳು
ದಿ ದಾವಣಗೆರೆ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಶಿವಮೊಗ್ಗ ಉಪವಿಭಾಗ, ಶಿವಮೊಗ್ಗ

**ಸೈಟುಗಳು ಮಾರಾಟಕ್ಕಿವೆ**
ಸಿದ್ದವೀರಪ್ಪ ಬಡಾವಣೆಯಲ್ಲಿ 30x40 North, ಬನಶಂಕರಿ ಲೇಔಟ್‌ನಲ್ಲಿ 30x40 East, 30x40 West, ವಿನಾಯಕ ಬಡಾವಣೆಯಲ್ಲಿ 40x50 South.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಶಾಮನೂರು ಹತ್ತಿರ ಡಾಲರ್ಸ್ ಕಾಲೋನಿಯಲ್ಲಿ 60x60 North, 60x45 South, 30x60 North, 40x40 South, 30x50 North, 30x45 North-East Corner.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಬೇಕಾಗಿದ್ದಾರೆ**
ಪೈಪ್ ಮತ್ತು ಸ್ಯಾನಿಟರಿ ಶೋರೂಂನಲ್ಲಿ Tally ಗೊತ್ತಿರುವ ಅಕೌಂಟೆಂಟ್ ಮಹಿಳೆ ಬೇಕಾಗಿದ್ದಾರೆ.
ಸಂಪರ್ಕಿಸಿ: ಮಾಗನೂರು ಎಂಟರ್ ಪ್ರೈಸಸ್
ರೆಡ್ಡಿ ಬಿಲ್ಡಿಂಗ್ ಹತ್ತಿರ, ಎಂ.ಸಿ.ಸಿ. 'ಎ' ಬ್ಲಾಕ್, ದಾವಣಗೆರೆ.
97436 36000, 8197696774

**ಶ್ರೇಯಸ್ ಉದರ, ಲಿವರ್, ಕರುಳು ರೋಗಗಳ ಚಿಕಿತ್ಸಾ ಕೇಂದ್ರ**
ಡಾ. ಇ.ಆರ್. ಸಿದ್ದೇಶಿ
M.D. (MED), D.M. (Gastro), F.A.C.G. (USA), P.G.C.C. Diab. Care (Aust)
ಉದರ, ಲಿವರ್, ಕರಳು, ಪ್ಯಾನ್‌ಕ್ರಿಯಾಸ್, ಎಂಡೋಸ್ಕೋಪಿ, ಸಕ್ಕರೆ ಕಾಯಿಲೆ ತಜ್ಞರು
8th Main, 8th Cross, P.J. Extension, Davangere.
08192-237325, 94837 23166

**ಮನೆ ಲೀಜ್‌ಗೆ ಇದೆ**
ನಿಟ್ಟುವಳ್ಳಿ ಮುಖ್ಯ ರಸ್ತೆ, ಲೇಬರ್ ಕಾಲೋನಿ 2ನೇ ಕ್ರಾಸ್‌ನಲ್ಲಿ 2ನೇ ಮಹಡಿಯಲ್ಲಿ ಉತ್ತರ ದಿಕ್ಕಿನ ಎರಡು ಬೆಡ್‌ರೂಮ್‌ನ ಮನೆ ಲೀಜ್‌ಗೆ ಇದೆ. ಸಂಪರ್ಕಿಸಿ :
78996 81386, 96206 92911

**HOUSES FOR RENT**
2 BHK, 3BHK, Duplex, Independent Siddaveer-appa, Shivaparvathi, SS Layout, Saraswathi Nagara.
77955 06795
Dakshith Iyanahalli

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**WANTED**
Applications are invited for the post of Audit Assistant
1. Number of Vancancies : 2
2. Minimum Qualification : Any Graduation with Computer knoweldge.
Shankar & Co.
Auditor & Practitioner
Amaravathi Colony, HARIHARA.
81975 70094

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಪೂಜಿ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ಮನೆ ಬಾಡಿಗೆಗೆ**
ಬೆಡ್ ರೂಮ್, ಕಾರ್ಪೊರೇಷನ್/ಬೋರ್ ನೀರು ವ್ಯವಸ್ಥೆಯಿರುವ, KTJ ನಗರ, 1ನೇ ಮೇನ್, 9ನೇ ಕ್ರಾಸ್‌ನಲ್ಲಿ ಮನೆ ಖಾಲಿ ಇದೆ. ವಿಚಾರಿಸಿ : ಸಂಪರ್ಕಿಸಿ :
73489 15945

**ಸೈಟು ಮಾರಾಟಕ್ಕಿದೆ**
20x30 ಅಡಿ ಅಳತೆಯ ಉತ್ತರ ದಿಕ್ಕಿನ ಸೈಟ್ ನಂ.188, ಚಿಕ್ಕಮಣಿ ದೇವರಾಜ ಅರಸ್ ಬಡಾವಣೆ, ದಾವಣಗೆರೆ ಇಲ್ಲಿ ಮಾರಾಟಕ್ಕಿದೆ.
ಸಂಪರ್ಕಿಸಿ: ರವಿಕುಮಾರ್
ಮೊ : 9242245311

**ಹುಡುಗ/ಹುಡುಗಿಯರು ಕೆಲಸಕ್ಕೆ ಬೇಕಾಗಿದ್ದಾರೆ**
ಬಂಗಾರದ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗ / ಹುಡುಗಿಯರು ಬೇಕಾಗಿದ್ದಾರೆ.
94489-29897

**ಸೈಟುಗಳು ಮಾರಾಟಕ್ಕಿವೆ**
30x50 ಟಾಟಾ ಶೋ ರೂಮ್ ಹಿಂಭಾಗ ಸಿದ್ದಗಂಗಾ ಲೇಔಟ್ ಕಾಂಕ್ರೀಟ್ ರೋಡ್, Good Location, 120 ಅಡಿ ರಿಂಗ್ ರೋಡ್ ಹಿಂಭಾಗ, Near PB Road, ಆವರಗೆರೆ, ದಾವಣಗೆರೆ. ಸಂಪರ್ಕಿಸಿ :
98452 95326

**ಮನೆ ಬಾಡಿಗೆಗೆ/ಲೀಸ್‌ಗಿದೆ**
ಸರಸ್ವತಿ ಬಡಾವಣೆ, ಜಯನಗರ, ಶಿವಕುಮಾರಸ್ವಾಮಿ ಬಡಾವಣೆ, ಶಕ್ತಿ ನಗರ, ಕೆ.ಬಿ. ಬಡಾವಣೆ ಆಂಜನೇಯ ಬಡಾವಣೆ.
78997 60749, 99726 75759

**ಮನೆ ಬಾಡಿಗೆಗೆ ಇದೆ**
ನಗರದ ಶ್ರೀ ಶಿವಕುಮಾರಸ್ವಾಮಿ ಬಡಾವಣೆ 1ನೇ ಹಂತ, 1ನೇ ಮೇನ್, 2ನೇ ಕ್ರಾಸ್ ನಲ್ಲಿ, #759/17ನ 2 ಬೆಡ್ ರೂಂ, ಸೋಲಾರ್ ವ್ಯವಸ್ಥೆ, ಬೋರ್ ವೆಲ್ ಹಾಗೂ ಮುನ್ಸಿಪಲ್ ನೀರಿನ ಸೌಲಭ್ಯವುಳ್ಳ ನೆಲಮಹಡಿಯ ಮನೆ ಬಾಡಿಗೆಗಿದೆ.
ಬಾಡಿಗೆ ರೂ.15,000/-
ಮೊ : 94804 25036

**ಮನೆ ಬಾಡಿಗೆಗಿದೆ**
1BHK ಸುಸಜ್ಜಿತ ಎರಡನೇ ಮಹಡಿ ಮನೆ 12ನೇ ಕ್ರಾಸ್, 9ನೇ ಮೇನ್, ಸಿದ್ದವೀರಪ್ಪ ಬಡಾವಣೆ, ದಾವಣಗೆರೆ ಇಲ್ಲಿ ಬಾಡಿಗೆಗಿದೆ.
ಕುಟುಂಬಸ್ಥರು ಹಾಗೂ ಸಸ್ಯಹಾರಿಗಳು ಮಾತ್ರ. ಸಂಪರ್ಕಿಸಿ
79751 37289

**WANTED**
Accountant for Electronics Shop
BHERAV DISTRIBUTOR
Jaydev Circle Davangere
Minimum 2 year experience in Account handling. Boys only
Qualification : B.Com or MBA
90365-74144

**ಮನೆ ಲೀಸ್‌ಗೆ ಇದೆ**
SS ಬಡಾವಣೆಯ 'B' ಬ್ಲಾಕ್, 4th ಮೇನ್ ರೋಡ್, ಮೊದಲನೇ ಮಹಡಿಯಲ್ಲಿ ಡಬ್ಬಲ್ ಬೆಡ್ ರೂಮ್ ಹಾಗೂ ಬಾಲ್ಕನಿ, ಅಟ್ಯಾಚ್ ಬಾತ್ ರೂಮ್ ಇರುವ ಮನೆಯು ಲೀಸ್‌ಗೆ ಇದೆ. ವಿಚಾರಿಸಿ :
97425 37448

**ಸೈಟ್, ಮನೆ, ಹೊಲ ಬೇಕಾದಲ್ಲಿ ಸಂಪರ್ಕಿಸಿ.**
ಸರ್ಕಾರಿ ನೌಕರರ ಬಡಾವಣೆಯಲ್ಲಿ ಬಿ ಬ್ಲಾಕ್ 30x50, 30x40 ಪೂರ್ವ, ಎಸ್.ಎಸ್. ಬಡಾವಣೆಯ ಬಿ ಬ್ಲಾಕ್‌ನಲ್ಲಿ 40x60 ದಕ್ಷಿಣ ಶ್ರೀ ಸಾಮಾನ್ಯದಲ್ಲಿ 30x43 ಉತ್ತರ 40 ಅಡಿ ರಸ್ತೆಗೆ, ಬೈಪಾಸ್ ಸರ್ವೀಸ್ ರಸ್ತೆಗೆ, 30x55 ದಕ್ಷಿಣ (ಕಮರ್ಷಿಯಲ್) ಸರ್ಕಾರಿ ನೌಕರರ ಪಕ್ಕದ ಬಡಾವಣೆಯಲ್ಲಿ 30x40 ಪೂರ್ವ 2 ಸೈಟ್‌ಗಳು ಮಾರಾಟಕ್ಕೆ ಇವೆ.
ಸಂಪರ್ಕಿಸಿ. ಸುರೇಶ್ ಪಿ.ಎಸ್. ಶಾಮನೂರು
84314 00907

**ಬೇಕಾಗಿದ್ದಾರೆ**
ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಿ: ಪ್ರಕಾಶ ಟಿವಿ ಸೆಂಟರ್
ಕುರುಬರ ಹಾಸ್ಟೆಲ್ ಎದುರು, ಶ್ರೀಮುರುಘರಾಜೇಂದ್ರ ಕಾಂಪ್ಲೆಕ್ಸ್, ಹದಡಿ ರಸ್ತೆ, ದಾವಣಗೆರೆ.

**ಮಾರಾಟಕ್ಕೆ ಹೋಟೆಲ್ ವಸ್ತುಗಳು**
ಡೀಪ್ ಫ್ರೀಜರ್, ಟೇಬಲ್ ಚೇರ್, ಬರ್ನರ್ ಮತ್ತು ಸಿಂಕ್ ಹೊಂದಿರುವ ಸ್ಟೀಲ್ ಕಿಚನ್ ಟೇಬಲ್, ಪಿಜ್ಜಾ ಓವನ್, ಕ್ರೋಕರಿ ಮಾರಾಟಕ್ಕೆ. ಸಂಪರ್ಕಿಸಿ :
63612 97004

**ಸೈಟುಗಳು ಮಾರಾಟಕ್ಕಿವೆ**
30x59 ದಕ್ಷಿಣ 40 ಅಡಿ ರಸ್ತೆಗೆ (ಕಾರ್ನರ್ ಸೈಟಿನ ಪಕ್ಕ) ಆಟದ ಮೈದಾನ ಮತ್ತು ಪಾರ್ಕ್‌ನ ಸಮೀಪ ಹರಿಹರದ KHB ಲೇಔಟ್, ಅಮರಾವತಿ ಕಾಲೋನಿ, ಚ.ಅಡಿಗೆ ರೂ. 2750/- ರಂತೆ. ಸಂಪರ್ಕಿಸಿ :
99802 00664, 94495 81264

**ಮನೆ ಬಾಡಿಗೆಗೆ ಇದೆ**
ಸರಸ್ವತಿ ನಗರ 'ಸಿ' ಬ್ಲಾಕ್, ಡಾಬಾ ಸ್ಟಾಪ್ ಹತ್ತಿರ, 1ನೇ ಮಹಡಿಯಲ್ಲಿ, 2 ಬೆಡ್ ರೂಮ್ ಮನೆ ಬಾಡಿಗೆಗಿದೆ. ಸಂಪರ್ಕಿಸಿ :
88925 81379

**ಸಾಯಿಬಾಬಾ ಬೋರ್‌ವೆಲ್**
ಮನೆ ಒಳಗೆ ಮತ್ತು ಹೊರಗೆ ಬೋರ್‌ವೆಲ್ ಕೊರೆಯುವುದು 41/2ಇಂಚು, 350 ರಿಂದ 400ರವರೆಗೆ ಬೋರ್ ಕೊರೆಯುವುದು.
99640 78484
95906 15776

**ಮನೆ ಬಾಡಿಗೆಗೆ ಇದೆ**
(ಸಸ್ಯಹಾರಿಗಳಿಗೆ ಮಾತ್ರ)
2BHK (Ground Floor) 4th main, 4th cross, SS Layout, 'B' Block, Davanagere.
96868 07752
99866 49474

**ಡಬಲ್ ಬೆಡ್ ರೂಮ್ ಮನೆ ಬಾಡಿಗೆಗೆ ಇದೆ**
ಸಸ್ಯಹಾರಿಗಳಿಗೆ ಮಾತ್ರ
ಡಿ.ಸಿ.ಎಂ. ಹಿಂಭಾಗ, ರಾಜೇಂದ್ರ ಬಡಾವಣೆ, ಶಕ್ತಿ ನಗರ. ಸಂಪರ್ಕಿಸಿ :
63600 74675

**ಬೇಕಾಗಿದ್ದಾರೆ**
ಎಸ್.ಎಂ.ಎಸ್. ಕಾನ್ವೆಂಟ್ ಹಾಗೂ ಪ್ರೌಢ ಶಾಲೆ ರಾಜೀವ್ ಗಾಂಧಿ ಬಡಾವಣೆ RTO ಕಛೇರಿ ಹತ್ತಿರ ದಾವಣಗೆರೆ ಆಂಗ್ಲ ಮಾಧ್ಯಮದಲ್ಲಿ ಬೋಧಿಸಲು ಅರ್ಹ ಶಿಕ್ಷಕ/ಶಿಕ್ಷಕಿಯರು ಬೇಕಾಗಿದ್ದಾರೆ.
DE.d - 2, BA, BE.d - Kan - 2, Eng - 2, Hindi - 2, S.S - 2, Bsc, BE.d - PCM - 2, CBZ - 2, Computer BCA / B.Com - 1. ಸಂಪರ್ಕಿಸಿ :
98447 35946, 96631 95531

**ಸೈಟು ಮಾರಾಟಕ್ಕಿದೆ**
KHB ಲೇಔಟ್ ದಾವಣಗೆರೆಯಲ್ಲಿ 50×80 ಪಶ್ಚಿಮ ಸೈಟ್. ಓನರ್ ಗೆ ಸಂಪರ್ಕಿಸಿ
63621 81509

**ಹೋಮ್ ನರ್ಸಿಂಗ್ ಸರ್ವೀಸ್**
ವಯೋವೃದ್ಧರು, ಬೆಡ್ ರಿಡನ್ ಪೇಷೆಂಟ್‌ಗಳಿಗೆ ಬೆಳಿಗ್ಗೆ ಮತ್ತು ಸಂಜೆ ಬಂದು ಡೈಪರ್ ಚೇಂಜ್ ಮಾಡುವುದು. ಸ್ಪಾಂಜ್ ಬಾತ್ (ಸ್ನಾನ) ಮಾಡಿಸುತ್ತೇವೆ.
85508 36642, 76191 70395

**ರೆಡಿಮೇಡ್ ಬಟ್ಟೆ ಅಂಗಡಿ ಮಾರಾಟಕ್ಕಿದೆ**
ಚಾಲ್ತಿಯಲ್ಲಿರುವ ಸುಸುಜ್ಜಿತವಾದ ರೆಡಿಮೇಡ್ ಬಟ್ಟೆ ಅಂಗಡಿ ದಾವಣಗೆರೆ ಗಡಿಯಾರ ಕಂಬದ ಹತ್ತಿರ ಇರುವ ಹೇಗಿದೆಯೋ ಹಾಗೆ ಮಾರಾಟಕ್ಕಿದೆ. (ಬಾಡಿಗೆ ಇರುವ ಮಳಿಗೆಯ ಹೊಸ ಬಾಡಿಗೆ ಕರಾರು ಪತ್ರವನ್ನು ಕಟ್ಟಡದ ಮಾಲೀಕರೊಂದಿಗೆ ಮಾತನಾಡಿ ತಮ್ಮ ಹೆಸರಿಗೆ ಮಾಡಿಸಿ ಕೊಡಲಾಗುವುದು)
95156 19205

**ಮನೆ ಮಾರಾಟಕ್ಕೆ ಇದೆ**
ಮಹಾಲಕ್ಷ್ಮಿ ಬಡಾವಣೆಯಲ್ಲಿ 30x50ರಲ್ಲಿ ಪಶ್ಚಿಮ ದಿಕ್ಕಿನಲ್ಲಿ 2 ಬೆಡ್ ರೂಂನ ಹೊಸ ಮನೆ ಮಾರಾಟಕ್ಕೆ ಇದೆ.
98448 82366

**ಬೇಕಾಗಿದ್ದಾರೆ**
ಫರ್ನೀಚರ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ವಯೋಮಿತಿ 21 ರಿಂದ 30 ವರ್ಷ, ಸ್ಥಳ : ದಾವಣಗೆರೆ.
86182 60719

**AVOID MOSQUITOES**
Mosquito Net For Doors & Windows
SRI GOWRI ENTERPRISES
# 7C2, 4th Cross, Near Shaneshwara Temple, Karur Industrial Area, P.B. Road, Davangere-6
72049 94628

**ಬೇಕಾಗಿದ್ದಾರೆ**
ITI / Diploma ಮಾಡಿದವರು ಬೇಕಾಗಿದ್ದಾರೆ. Solar Plant Maintenance ಮಾಡಲು ಆಸಕ್ತಿಯುಳ್ಳವರು ಸೈಟ್ ವಿಸಿಟ್ ಮಾಡಬೇಕಾಗಿ ವಿನಂತಿ. ಲೋಕಿಕೆರೆ ರಸ್ತೆ, ಹನುಮಾಪುರ, ಬೆಳವನೂರು, ದಾವಣಗೆರೆ.
94499 61819, 08192 261819

**ಸೈಟ್ ಮಾರಾಟಕ್ಕಿದೆ**
ಶ್ರೀನಿವಾಸ ನಗರ 5ನೇ, 6ನೇ ಕ್ರಾಸ್‌ನಲ್ಲಿ 60 ಅಡಿ ರಸ್ತೆಗೆ ಸಮೀಪವಿರುವ 20×60 ಸೈಟ್ ಮಾರಾಟಕ್ಕಿದೆ. ಸಂಪರ್ಕಿಸಿ :
76762 32720

**ಸೈಟು ಮಾರಾಟಕ್ಕಿವೆ**
ದಾವಣಗೆರೆ ಮಹಾಲಕ್ಷ್ಮಿ ಲೇಔಟ್ ಹತ್ತಿರ, 34x60 =2040 ಚ.ಅ. ವುಳ್ಳ ದಕ್ಷಿಣ ಮುಖದ ಸೈಟು ಮಾರಾಟಕ್ಕಿದೆ.
98441 09210

**ಮನೆ ಬಾಡಿಗೆಗೆ ಇದೆ**
30x50 ಪೂರ್ವ ಬಾಗಿಲು 3 ಬೆಡ್ ರೂಂ, ಗ್ರೌಂಡ್ ಫ್ಲೋರ್‌ನಲ್ಲಿ ಸರಸ್ವತಿ ನಗರ, ಡಾಬಾ ಸ್ಟಾಪ್, ದಾವಣಗೆರೆ
98802 76367
90607 90962

**ಸೈಟ್ ಮಾರಾಟಕ್ಕಿದೆ**
ಕೆ.ಬಿ. ಬಡಾವಣೆಯಲ್ಲಿ ಪೂರ್ವ ಮುಖವಾಗಿರುವ ಅಳತೆ 44x42.
ಆಸಕ್ತರು ಸಂಪರ್ಕಿಸಿ
98440 25005

**ಬೇಕಾಗಿದ್ದಾರೆ**
ಅಕೌಂಟೆಂಟ್ ಹುದ್ದೆಗೆ ಬಿ.ಕಾಂ ಆಗಿರುವ ಮಹಿಳಾ ಅಭ್ಯರ್ಥಿಗಳು, ಕಲೆಕ್ಷನ್ ಬಾಯ್ ಬೇಕಾಗಿದ್ದಾರೆ.
ನವೋದಯ ಚಿಟ್ ಫಂಡ್ಸ್
C/o ಲಕ್ಷ್ಮೀ ಬಾಲಾಜಿ ಸಿಲ್ವರ್ ಪೋಟೋ ಫ್ರೇಮ್ಸ್ ಮಳಿಗೆ ನಂ. 34, ಶ್ರೀ ಮುರುಘರಾಜೇಂದ್ರ ಕಾಂಪ್ಲೆಕ್ಸ್, ಶಿವಪ್ಪಯ್ಯ ವೃತ್ತದ ಹತ್ತಿರ, ದಾವಣಗೆರೆ.
ಮೊ. : 99451 59582

**ತಕ್ಷಣ ಬೇಕಾಗಿದ್ದಾರೆ**
ಭತ್ತ ಕೊಯ್ಯುವ ಯಂತ್ರ ನೋಡಿಕೊಳ್ಳಲು SSLC & PUC ಓದಿರುವ ಹಿಂದಿ ಭಾಷೆಯುಳ್ಳ ಯುವಕರು ಬೇಕಾಗಿದ್ದಾರೆ. (ಸೂಪರ್ ವೈಸರ್) ಊಟ, ವಸತಿ ಆಕರ್ಷಕ ಸಂಬಳ ಕೊಡಲಾಗುವುದು. ಬೈಕ್‌ವುಳ್ಳವರಿಗೆ ಮೊದಲನೇ ಆದ್ಯತೆ.
9482389317, 6363403567

**ಬೇಕಾಗಿದ್ದಾರೆ**
ಟಾಟಾ ಪವರ್ ಸೋಲಾರ್ ಮಾರ್ಕೆಟಿಂಗ್ ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಿ :
M/s ಬಸವಶ್ರೀ ಸೋಲಾರ್ ಟೆಕ್ನಾಲಜೀಸ್
#43H, ಎಸ್.ಜೆ.ಜೆ. ಎಮ್ ಕಾಂಪ್ಲೆಕ್ಸ್, ಜಯದೇವ ಸರ್ಕಲ್, ಹದಡಿ ರಸ್ತೆ, ದಾವಣಗೆರೆ,
ಮೊ : 99001 42052,
ಸಮಯ : 1PM to 5 PM

**ಮಳಿಗೆ/ಮನೆ ಮಾರಾಟಕ್ಕಿದೆ**
ನಗರದ ಕೆ.ಆರ್ ರಸ್ತೆ, ಶ್ಯಾಮನೂರು ಶಿವಶಂಕರಪ್ಪ ಸಾರ್ವಜನಿಕ ಆಸ್ಪತ್ರೆ ಹತ್ತಿರ, ಸಿಟಿ ಡೆಂಟಲ್ ಕ್ಲಿನಿಕ್ ಪಕ್ಕ, 10x51 ಅಡಿ ಉದ್ದದ ಕೆಳಗೆ ವ್ಯಾಪಾರ ಮಾಡಲು ಮಳಿಗೆ, ಮೇಲೆ ವಾಸಕ್ಕೆ ಅನುಕೂಲವಿರುವ ಕಟ್ಟಡ ಮಾರಾಟಕ್ಕಿದೆ.
79758 23058

**ಬೋರ್ ಪಾಯಿಂಟ್**
ವೈಜ್ಞಾನಿಕ ವಿಧಾನದಿಂದ ಬೋರ್ ಪಾಯಿಂಟ್ ಮಾಡಿಕೊಡಲಾಗುವುದು
ಸಂಪರ್ಕಿಸಿ :
86609 98651
97436 54365

**24X7 CAR TAXI**
ಕಾರ್ ಬಾಡಿಗೆಗೆ
ಸಂಪರ್ಕಿಸಿ :
86609 98651
97436 54365

**ಸೈಟು & ಮನೆ ಮಾರಾಟಕ್ಕಿವೆ**
1) ಡಾಲರ್ಸ್ ಕಾಲೋನಿ ಮನೆ (30x50) ಪಶ್ಚಿಮ
2) ಡಾಲರ್ಸ್ ಕಾಲೋನಿ ಸೈಟ್ (40x51) ಪಶ್ಚಿಮ
3) ಹಳೇ ಕುಂದವಾಡ ಸೈಟ್ (30x50) ಪಶ್ಚಿಮ
ಸಂಪರ್ಕಿಸಿ:
97404 47907, 91481 25125

**ಬೇಕಾಗಿದ್ದಾರೆ**
ಅಂಗಡಿಗೆ ಕೆಲಸಕ್ಕೆ 10ನೇ ಅಥವಾ ಪಿಯುಸಿ ಮುಗಿದ ಹುಡುಗರು ಬೇಕಾಗಿದ್ದಾರೆ.
9008060508

**ವಾಟರ್ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ಮನೆ ಮಾರಾಟಕ್ಕಿದೆ**
1828/A25,ಆಂಜನೇಯ ಬಡಾವಣೆ,18ನೇ ಕ್ರಾಸ್ ನಲ್ಲಿರುವ ಡುಪ್ಲೆಕ್ಸ್ (North Face), 1ನೇ ಮಹಡಿಯಲ್ಲಿ ಸಿಂಗಲ್ ಬೆಡ್ ರೂಂ ಮನೆ (East Face) ವಾಸ್ತು ಪ್ರಕಾರ ಎಲ್ಲಾ ಅನುಕೂಲವಿರುವ fully furnished, ಬೋರ್ ವೆಲ್ & ಕಾರ್ಪೊರೇಶನ್ ನೀರಿನ ವ್ಯವಸ್ಥೆ ಇರುವ ಮನೆ ಮಾರಾಟಕ್ಕೆ ಇದೆ.
9008432505 /9902432505

ನೇರ ಪರೀಕ್ಷೆ ಕಟ್ಟಲು/ರೆಗ್ಯುಲರ್ ಪ್ರವೇಶಕ್ಕಾಗಿ
**SSLC ನೇರ ಪರೀಕ್ಷೆ**
IInd PUC/Senior Secondary, Arts/Commerce/Science B.Sc.-Agriculture, B.Tech All branches, D.Pharma, B.Ed., PhD regular B.A., B.com., B.Sc., M.A., M.Com., MBA, MLIB, Correspondence.
ಆಸಕ್ತರು ಫೋಟೋ-8, ಆಧಾರ್ ಕಾರ್ಡ್ ಹಾಗೂ ಮಾರ್ಕ್ಸ್ ಕಾರ್ಡ್‌ನೊಂದಿಗೆ ಸಂಪರ್ಕಿಸಿ.
SS Global Institute for Higher Education
1982-1ನೇ ಮಹಡಿ, ಅನ್ನಯ ಆಯುರ್ವೇದಿಕ್ ಆಸ್ಪತ್ರೆ, ಶ್ರೀ ಸಾಯಿಬಾಬಾ ದೇವಸ್ಥಾನ ಹತ್ತಿರ, ಎಂಸಿಸಿ 'ಎ' ಬ್ಲಾಕ್, ದಾವಣಗೆರೆ-04.
72593 59861/99863 45266
ವಿ. ಸೂ: ಫೀಸನ್ನು ಕಂತಿನಲ್ಲಿ ಪಾವತಿಸಬಹುದು

**ಮನೆ ಬಾಡಿಗೆಗೆ ಇದೆ**
ಹೊಂಡದ ಸರ್ಕಲ್‌ನ ಖಂಡಪ್ಪನ ಗಲ್ಲಿಯಲ್ಲಿ 13x45 ಅಳತೆಯ ಒಂದನೇ ಮಹಡಿ ಮನೆ ಸೋಲಾರ್, ನೀರು ಸೌಲಭ್ಯವಿರುವ ಮನೆ ಬಾಡಿಗೆಗೆ ಇದೆ.
94480 47506

**ಬೇಕಾಗಿದ್ದಾರೆ**
ಫಾರ್ಮಸ್ಯೂಟಿಕಲ್ ಡಿಸ್ಟ್ರಿಬ್ಯೂಟರ್‌ನಲ್ಲಿ ಕೆಲಸ ಮಾಡಲು ಯುವಕ/ಯುವತಿಯರು ಬೇಕಾಗಿದ್ದಾರೆ. SSLC/PUC Pass, ಪದವೀಧರರು ಬೇಕಾಗಿದ್ದಾರೆ.
ಎಂಸಿಸಿ ಬಿ ಬ್ಲಾಕ್, ದಾವಣಗೆರೆ.
96069 04471

**ಮನೆ ಬಾಡಿಗೆಗೆ ಇದೆ**
ಡಬಲ್ ಬೆಡ್ ರೂಂ ನೀರಿನ ಸೌಕರ್ಯವಿರುವ ಗ್ರೌಂಡ್ ಫ್ಲೋರ್ ಮನೆ 3ನೇ ಮೇನ್, 'ಬಿ' ಬ್ಲಾಕ್ ಎಸ್.ಎಸ್. ಲೇಔಟ್.
93432 30533, 90362 02619

**FLAT FOR LEASE**
2 BHK, North facing
1325 Sq.ft.
Address : AM Apartment, Nainika Prime Rose, Vidyanagar City Bus Last Stop, Davanagere.
89519 38228

ಶ್ರೀ ದುಗ್ಗಮ್ಮ ದೇವಿ ಪ್ರಸನ್ನ
**ಟಗರು ಮಾರಾಟಕ್ಕಿವೆ**
ನೇರ ರೈತರಿಂದ ಮಾರಾಟ 2 ಹಲ್ಲು 4 ಹಲ್ಲಿನ ಟಗರುಗಳು ಸಿಗುತ್ತವೆ, ಯಾವುದೇ ಮಧ್ಯವರ್ತಿಗಳಿಗೆ ಅವಕಾಶವಿಲ್ಲ. ಸಂಪರ್ಕಿಸಿ :
80883 67539, 97390 63544

**SHASHI SAMAJA**
Organising 3 days training on international Hair styling. By Mr. Reehan at Davanagere.
For Details Contact :
95912 26273, 99456 51521

**ಭೋಗ್ಯಕ್ಕೆ/ಬಾಡಿಗೆಗೆ ಇದೆ**
ಎಲ್ಲಾ ಸೌಕರ್ಯಗಳಿರುವ 3 ಬೆಡ್ ರೂಂ ಮನೆ, 2ನೇ ಮಹಡಿಯಲ್ಲಿ ನಂ. 337/16-A-14 ಗುರು ಗಂಗಾ ನಿಲಯ, 2ನೇ ಮೇನ್, ಗಣೇಶ ಲೇಔಟ್, KSRTC ಬಸ್ ಸ್ಟ್ಯಾಂಡ್ ಪಕ್ಕ, ದಾವಣಗೆರೆ.
70194 31591, 87227 42210

**ವಾಹ್ ಚಾಯ್ !!**
**ರಿಚ್ ಚಾಯ್ !!**
SRK TEA
ಶ್ರೀ ರಾಮಕೃಷ್ಣ ಕಾಫಿ ಕಂಪನಿ
ಮಂಡಿಪೇಟೆ, ದಾವಣಗೆರೆ.
ಮೊಬೈಲ್ : 94487 27084

**ಸಂಜೀವಿನಿ ಹೋಮ್ ನರ್ಸಿಂಗ್ ಸರ್ವೀಸ್**
ವಯೋವೃದ್ಧರನ್ನು ನೋಡಿಕೊಳ್ಳಲು ಹೋಮ್ ನರ್ಸ್ (ಕೇರ್‌ಟೇಕರ್ಸ್) ಬೇಕಾಗಿದ್ದಲ್ಲಿ ಸಂಪರ್ಕಿಸಿ ಹಾಗೂ ವಯೋವೃದ್ಧರನ್ನು ನೋಡಿಕೊಳ್ಳಲು ಮಹಿಳೆಯರು ಮತ್ತು ಯುವತಿಯರು ಬೇಕಾಗಿದ್ದಾರೆ. ವಿದ್ಯಾರ್ಹತೆ 5th, 7th, 10th, PUC, GNM, ANM, ಉಚಿತ ಊಟ, ವಸತಿಯೊಂದಿಗೆ 15,000 ರಿಂದ 25,000 ರೂ.
ಫೋ. : 91486 83185

**ಕೆಲಸಗಾರನ ಅಗತ್ಯವಿದೆ**
ಅಕೌಂಟ್ಸ್ ಮ್ಯಾನೇಜರ್ ಮೇಲಾಗಿ ಪುರುಷರ ಕೆಲಸದ ಸಮಯ ಬೆಳಿಗ್ಗೆ 9 ರಿಂದ ಸಂಜೆ 7 ರವರೆಗೆ ( ಏರಿಳಿತದ ಸಮಯಗಳು) ಟ್ಯಾಲಿ ಮತ್ತು ಎಂಎಸ್ ಆಫೀಸ್‌ನಲ್ಲಿ ಉತ್ತಮ ಜ್ಞಾನವನ್ನು ಹೊಂದಿರಬೇಕು ಸಂಪರ್ಕಿಸಿ :
76250 32196

**WANTED**
**Accountant**
Requirement for Davangere Branch.
Experience 2 year Tally ERP 9
Sri Lakshmi Venkateshwara Granites & Marbles
# 2002/1 to 2002/7, Taralabalu Extn., Hadadi Main Road, Davangere-577004.
E-mail : slvgmdvg2010@gmail.com
90086-60111

**ಬೇಕಾಗಿದ್ದಾರೆ**
ಚಿಟ್ಸ್ ಕಂಪನಿಯಲ್ಲಿ 3 ರಿಂದ 4 ವರ್ಷ ಅನುಭವವುಳ್ಳ ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ಸ್ ಬೇಕಾಗಿದ್ದಾರೆ.
ನಿತ್ಯಚೇತನಾ ಚಿಟ್ಸ್ ಪ್ರೈ. ಲಿ.,
ಎಸ್.ಐ. ಆರ್ಕೇಡ್, 1ನೇ ಮಹಡಿ, ಡೆಂಟಲ್ ಕಾಲೇಜ್ ರೋಡ್, ಯುಬಿಡಿಟಿ ಕಾಲೇಜು ಎದುರು, ದಾವಣಗೆರೆ.
96114-70793, 97422-70483

**WANTED**
Lady CRM 2 No's
(Customer Relationship Manager) with any degree @
Swadeshi Group
Hadadi Road, Opp. SS. Chowtry, Davangere.
95384 40307
98867 44970

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**WANTED**
Any Degree with Computer knowledge is must. for Male & Female.
Contact : Exllent Electronics
#2137/1, 4th Main, 3rd Cross, MCC `A' Block, Davanagere - 577004
98865 15100

**ಬೆಳ್ಳಿ ಪೋಟೋಗಳು ದೊರೆಯುತ್ತವೆ**
ಮದುವೆ, ಗೃಹಪ್ರವೇಶ ಇತ್ಯಾದಿ ಸಮಾರಂಭಗಳಿಗೆ ಬೆಳ್ಳಿ ದೇವರ ಮೂರ್ತಿಗಳ ಪೋಟೋಗಳು ದೊರೆಯುತ್ತವೆ. ಗಣೇಶ, ಬಾಲಾಜಿ, ಲಕ್ಷ್ಮೀ, ಸರಸ್ವತಿ, ಕನ್ನಿಕಾಪರಮೇಶ್ವರಿ, ಸತ್ಯನಾರಾಯಣ ಸ್ವಾಮಿ, ಧರ್ಮಸ್ಥಳ ಮಂಜುನಾಥ ಸ್ವಾಮಿ, ಶಿವ ಪಾರ್ವತಿ, ಮಂತ್ರಾಲಯ ರಾಘವೇಂದ್ರ ಸ್ವಾಮಿ, ಆಂಜನೇಯ ಸ್ವಾಮಿ, ಶಿರಡಿ ಸಾಯಿಬಾಬಾ, ಈಶ್ವರ ಲಿಂಗ, ಮೈಲಾರ ಲಿಂಗೇಶ್ವರ, ವೀರಭದ್ರ ಸ್ವಾಮಿ, ಚಾಮುಂಡೇಶ್ವರಿ, ರೇಣುಕಾ ಯಲ್ಲಮ್ಮ, ಗುರು ಕೊಟ್ಟೂರೇಶ್ವರ ಸ್ವಾಮಿ, ನಾಯಕನಹಟ್ಟಿ ತಿಪ್ಪೇಸ್ವಾಮಿ, ಮರುಳಸಿದ್ದೇಶ್ವರ ಸ್ವಾಮಿ ಸಣ್ಣ ಪ್ಯೂರ್ ಸಿಲ್ವರ್ 999 ಬೆಳ್ಳಿ ಪೋಟೋಗಳು ರೂ. 95, 160 ರಿಂದ 260 ರೂ.ಗಳಿಗೆ ಸಿಗುತ್ತವೆ. ಅಂಗಡಿ ಪ್ರಾರಂಭಿಸಲು ಪೂಜೆ ಮಾಡುವ ವೈಟ್ ಮೆಟಲ್‌ನ ಸರ್ವಾಲಂಕಾರದ (ಲೈಟಿಂಗ್) ಪೋಟೋಗಳು ದೊರೆಯುತ್ತವೆ. ಮದುವೆ ಇತ್ಯಾದಿ ಸಮಾರಂಭಗಳಿಗೆ 1 ಗ್ರಾಂ. ಗೋಲ್ಡ್‌ನಲ್ಲಿ ಡಾಬು, ವಂಕಿ, ಹಾರಗಳು ಸಿಗುತ್ತವೆ ಮತ್ತು ಅನುಕೂಲಕರವಾದ ಗಿಫ್ಟ್‌ಗಳಿವೆ.
ಸ್ಥಳ : ಲಕ್ಷ್ಮೀ ಬಾಲಾಜಿ ಸಿಲ್ವರ್ ಪೋಟೋ ಫ್ರೇಮ್ಸ್
ಮಳಿಗೆ ನಂ. 34, ಶ್ರೀ ಮುರುಘರಾಜೇಂದ್ರ ಕಾಂಪ್ಲೆಕ್ಸ್, ಶಿವಪ್ಪಯ್ಯ ವೃತ್ತದ ಹತ್ತಿರ, ದಾವಣಗೆರೆ.
ಮೊ. : 99451 59582

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**

ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
ದಾವಣಗೆರೆ : 2&3ರಂದು
ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ದಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**NAME CLARIFICATION**
I Suma Rajappa D/o M. Rajappa, 45 years resident @ 1949/34, Vinayaka Badavane, Opp.: Vidyanagar Police Station, Davangere. In my Aadhar Card my name mentioned as Suma Rajappa and in my school Document my name as Suma M.R. In my passport my name mentined as Suma Maralingapalara Rajappa. Further. I write to state theat the above said all names refered to me only and to none else. In future i will be using my name as Suma Rajappa D/o M. Rajappa Swear before Notary Davangere on 10.02.2024
Sd/- Suma Rajappa

**CHANGE OF NAME**
I Tinesh kumar s/o Narinder kumar 46 year, resident @ # 5440/30 in 1st floor, 1st cross, Yellamma krupa Davanagere. Above said name entered in my Aadhar card in my passport my name wrogly entered as Tinesh, My name Tinesh kumar it is correct and i will continue the same name in future aslo sworn before notery Davanagere on 10.02.2024
Sd - Tinesh kumar

**ಶ್ರೀ ಕಾಮಾಕ್ಷಿ ಸ್ವರ್ಣ ಉಳಿತಾಯ ಯೋಜನೆ**
2ನೇ ಲಕ್ಕಿ ಡ್ರಾ ವಿನ್ನರ್
971
ರಾಜೀವ್ ಚಿತ್ತಗುಪ್ಪಿ
ಅತ್ಯುತ್ತಮ ಆಭರಣಕ್ಕಾಗಿ ಇಂದೇ ಭೇಟಿ ಕೊಡಿ:
ರಾಯ್ಕರ್ ಜ್ಯುವೆಲರಿ ವರ್ಕ್ಸ್ ಅಂಡ್ ಜೆಮ್ಸ್
ಶ್ರೇಷ್ಠ ಜಾತಿಯ ಅದೃಷ್ಟ ಹರಳುಗಳ, ರುದ್ರಾಕ್ಷಿಗಳ ಆಗರ
8ನೇ ಮೇನ್, ಚರ್ಚ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ-2. ಫೋನ್ : 08192-252589


# ಅಮಾವಾಸ್ಯೆ : ಅಜ್ಜಯ್ಯನ ದರ್ಶನ ಪಡೆದ ಭಕ್ತರು



ಮಲೇಬೆನ್ನೂರು, ಫೆ. 10- ಸುಕ್ಷೇತ್ರ ಉಕ್ಕಡಗಾತ್ರಿಯಲ್ಲಿ ಅವರಾತ್ರಿ ಅಮಾವಾಸ್ಯೆ ಪ್ರಯುಕ್ತ ರಾಜ್ಯದ ವಿವಿಧ ಭಾಗಗಳಿಂದ ಸಾವಿರಾರು ಭಕ್ತರು ಶುಕ್ರವಾರ ಪವಾಡ ಪುರುಷ ಶ್ರೀ ಗುರು ಕರಿಬಸವೇಶ್ವರ ಅಜ್ಜಯ್ಯನ ದರ್ಶನ ಪಡೆದರು.

ಅವರಾತ್ರಿ ಅಮಾವಾಸ್ಯೆಯು ವಿಶೇಷವಾಗಿ ಅಷ್ಟ ಮಹಾಯೋಗ ಮತ್ತು ಸಂಕಷ್ಟ ನಿವಾರಣೆಗೆ ಶ್ರೇಷ್ಠವಾದುದಾಗಿದೆ ಎಂಬ ನಂಬಿಕೆ ಭಕ್ತರದು.

ಭಕ್ತರು ತುಂಗಾ ಭದ್ರಾ ನದಿಯಲ್ಲಿ ಪುಣ್ಯ ಸ್ನಾನ ಮಾಡಿ, ಸ್ನಾನ ಘಟ್ಟದಲ್ಲಿ ಪ್ರತಿಷ್ಠಾಪಿತ ವಿಘ್ನೇಶ್ವರನಿಗೆ ಪೂಜೆ ಸಲ್ಲಿಸಿದರು. ಕಂಕಣಭಾಗ್ಯ, ಸಂತಾನ ಭಾಗ್ಯ, ಭೂತ, ಪ್ರೇತ ನಿವಾರಣೆ, ಆರೋಗ್ಯ ಸುಧಾರಣೆಗಾಗಿ ಸಂಕಲ್ಪ ಮಾಡಿಕೊಂಡರು.

ನಂತರ ಅಜ್ಜಯ್ಯನ ದರ್ಶನ ಪಡೆದು ಸಂಕಷ್ಟ ಪರಿಹಾರಕ್ಕಾಗಿ ಪೂಜೆ ಸಲ್ಲಿಸಿದರು. ಅಮಾವಾಸ್ಯೆಯ ಪ್ರಯುಕ್ತ ಅಜ್ಜಯ್ಯನಿಗೆ ವಿಶೇಷ ಪೂಜೆ ಮತ್ತು ವಿಶೇಷ ಅಲಂಕಾರ ಮಾಡಲಾಗಿತ್ತು. ದೇವಸ್ಥಾನದ ವತಿಯಿಂದ ಭಕ್ತರಿಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು.

# ಜಿಗಳಿ : ಹಾ.ಉ.ಸ. ಸಂಘದ ಅಧ್ಯಕ್ಷರಾಗಿ ಮಂಜುನಾಥ್



ಮಲೇಬೆನ್ನೂರು, ಫೆ. 10- ಜಿಗಳಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ಕಟ್ಟೆಪ್ಪರ ಮಂಜುನಾಥ್ ಮತ್ತು ಉಪಾಧ್ಯಕ್ಷರಾಗಿ ಎಂ.ಎನ್. ಲೋಕೇಶ್ ಅವರು ಗುರುವಾರ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾದರು.

# ಜಿಗಳಿ : ಎಸ್‌ಡಿಎಂಸಿ ಅಧ್ಯಕ್ಷರಾಗಿ ಗಂಗಾಧರಚಾರಿ



ಮಲೇಬೆನ್ನೂರು, ಫೆ. 10- ಜಿಗಳಿ ಗ್ರಾಮದ ಉನ್ನತೀಕರಿಸಿದ ಸರ್ಕಾರಿ ಹಿ.ಪ್ರಾ. ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷರಾಗಿ ಎ. ಗಂಗಾಧರ ಚಾರಿ ಮತ್ತು ಉಪಾಧ್ಯಕ್ಷರಾಗಿ ಶ್ರೀಮತಿ ಮಂಜುಳಾ ಮಾಲತೇಶ್ ಅವರನ್ನು ಶನಿವಾರ ನಡೆದ ಗ್ರಾಮಸ್ಥರ ಹಾಗೂ ಎಸ್‌ಡಿಎಂಸಿ ಸದಸ್ಯರ ಸಭೆಯಲ್ಲಿ ಅವಿರೋಧವಾಗಿ ಆಯ್ಕೆ ಮಾಡಲಾಯಿತು. ಮುಖ್ಯ ಶಿಕ್ಷಕ ಜಿ. ನಾಗೇಶ್ ಸ್ವಾಗತಿಸಿದರು.

## ಅರ್ಬನ್ ಬ್ಯಾಂಕ್ ಚುನಾವಣೆ : ಹಕ್ಕು ಚಲಾಯಿಸಲು ಮನವಿ

ದಾವಣಗೆರೆ, ಫೆ.10- ನಾಳೆ 11ರ ಭಾನುವಾರ



ನಡೆಯಲಿರುವ ದಾವಣಗೆರೆ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್‌ನ ನಿರ್ದೇಶಕರ ಚುನಾವಣೆಯಲ್ಲಿ ಬ್ಯಾಂಕಿನ ಸದಸ್ಯರು ತಪ್ಪದೇ ಮತ ಚಲಾಯಿಸುವಂತೆ ಹಿರಿಯ ಮುಖಂಡ ಜೆ. ಸೋಮನಾಥ್ ಮನವಿ ಮಾಡಿದ್ದಾರೆ.

ನಿಮಗೆ ಸರಿ ಎನಿಸುವ ಯಾವುದೇ ಅಭ್ಯರ್ಥಿಗೆ ಮತ ಹಾಕಿರಿ. ಆದರೆ ನಿಮ್ಮ ಹಕ್ಕನ್ನು ಚಲಾಯಿಸುವುದನ್ನು ಮಾತ್ರ ಮರೆಯಬೇಡಿ ಎಂದು ಅವರು ಬ್ಯಾಂಕಿನ ಷೇರುದಾರರಿಗೆ ಕಿವಿ ಮಾತು ಹೇಳಿದ್ದಾರೆ.

## ಜಗಳೂರು : ವೈಯಕ್ತಿಕ ಸೌಲಭ್ಯಕ್ಕಾಗಿ ಅರ್ಜಿ

ಜಗಳೂರು, ಫೆ.10- ಶೇಕಡಾ 24.10, 7.25 ಮತ್ತು ಶೇ. 5 ಯೋಜನೆ ಅಡಿಯಲ್ಲಿ ಎಸ್ಸಿ - ಎಸ್ಟಿ ಹಾಗೂ ಹಿಂದುಳಿದ, ಅಲ್ಪಸಂಖ್ಯಾತರ ಮತ್ತು ದೈಹಿಕ ವಿಕಲಚೇತನರ ಅರ್ಹ ಫಲಾನುಭವಿಗಳಿಗೆ ವೈಯಕ್ತಿಕ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ನಮೂನೆಯನ್ನು ಜಗಳೂರು ಪಟ್ಟಣ ಪಂಚಾಯಿತಿಯಲ್ಲಿ ಪಡೆದು ಅಗತ್ಯ ದಾಖಲೆಗಳೊಂದಿಗೆ ಇದೇ ದಿನಾಂಕ 23 ರೊಳಗಾಗಿ ಕಚೇರಿಗೆ ಸಲ್ಲಿಸಬೇಕು.

# ರಾಣೇಬೆನ್ನೂರಿನಲ್ಲಿ ಇಂದು ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ



ಜಿಲ್ಲಾ ಮತ್ತು ತಾಲ್ಲೂಕು ಕಸಾಪ, ರಾಣೇಬೆನ್ನೂರಿನ ಎಪಿಎಂಸಿ ಸಮುದಾಯ ಭವನದಲ್ಲಿ ಇಂದು ಮತ್ತು ನಾಳೆ ನಡೆಯಲಿರುವ 13ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ನಗರ ಅಲಂಕಾರದೊಂದಿಗೆ ಸಂಪೂರ್ಣ ಸಜ್ಜಾಗಿದೆ ಎಂದು ಸ್ವಾಗತ ಸಮಿತಿ ತಿಳಿಸಿದೆ.

ಎಪಿಎಂಸಿ ಸಮುದಾಯ ಭವನದಲ್ಲಿ ಪುಸ್ತಕ ಪ್ರದರ್ಶನ ಹಾಗೂ ಮಾರಾಟಕ್ಕೆ ಮಳಿಗೆಗಳನ್ನು ನಿರ್ಮಿಸಲಾಗಿದೆ. ವೇದಿಕೆ, ಸ್ವಾಗತ ಕಮಾನುಗಳು ಆಕರ್ಷಣೀಯವಾಗಿವೆ. ಬೆಳಗಿನ ತಿಂಡಿಗೆ ವಿಶೇಷ ರುಚಿಯ ಉಪ್ಪಿಟ್ಟು, ಊಟಕ್ಕೆ ಗೋಧಿ ಹುಗ್ಗಿ, ಹೆಸರು ಬೇಳೆ ಪಾಯಸ, ಕಡಕ ಜೋಳದ ರೊಟ್ಟಿ, ಚಪಾತಿ, ಎರಡು ತರದ ಪಲ್ಯ, ಅನ್ನ ಸಾರು,ರಾತ್ರಿ ಪಲಾವು ಹೀಗೆ ಸ್ಥಳೀಯರ ಅಭಿರುಚಿಗೆ ತಕ್ಕ ಅಡುಗೆ ಮಾಡಿಸಲಾಗುತ್ತಿದೆ.

ಮೆರವಣಿಗೆ, ಉದ್ಘಾಟನಾ ಸಮಾರಂಭ, ಎಂಟು ಗೋಷ್ಠಿಗಳು ಒಟ್ಟಾರೆ ಆಮಂತ್ರಣ ಪತ್ರಿಕೆಯಲ್ಲಿನ ನಿಗದಿತ ಸಮಯಕ್ಕೆ ಸರಿಯಾಗಿ ಎಲ್ಲ ಕಾರ್ಯಕ್ರಮಗಳನ್ನು ನಡೆಸಿ, ಸಮ್ಮೇಳನವನ್ನು ಮಾದರಿಯಾಗಿಸುವ ವ್ಯವಸ್ಥೆ ಮಾಡಿಕೊಳ್ಳಲಾಗಿದೆ ಎಂದು ಸಮಿತಿ ಪದಾಧಿಕಾರಿಗಳಾದ ಏಕನಾಥ ಭಾನುವಳ್ಳಿ, ಪುಟ್ಟಪ್ಪ ಮರಿಯಮ್ಮನವರ, ಜಿ.ಜಿ.ಹೊಟ್ಟಿಗೌಡ್ರ, ತಾಲ್ಲೂಕು ಅಧ್ಯಕ್ಷ ವೀರೇಶ ಜಂಬಗಿ ಮತ್ತಿತರರು ವಿವರಿಸಿದರು.

# ಕಮ್ಯುನಿಕೇಷನ್ ಅಂಡ್ ಅಡ್ವರ್‌ಟೈಸಿಂಗ್ ಲಿಮಿಟೆಡ್ ಅಧ್ಯಕ್ಷರಾಗಿ ಸತೀಶ್ ಕೃಷ್ಣ ಸೈಲ್



ಬೆಂಗಳೂರು, ಫೆ.10- ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್‌ಟೈಸಿಂಗ್ ಲಿಮಿಟೆಡ್‌ನ 29ನೇ ಅಧ್ಯಕ್ಷರಾಗಿ ಸತೀಶ್ ಕೃಷ್ಣ ಸೈಲ್ ಆಯ್ಕೆಯಾಗಿದ್ದಾರೆ. ಸತೀಶ್ ಕೃಷ್ಣ ಸೈಲ್ ದಂಪತಿಗೆ ಈ ಸಂದರ್ಭದಲ್ಲಿ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಸಿದ್ದಲಿಂಗಪ್ಪ ಬಿ. ಪೂಜಾರಿ, ಉಪ ಪ್ರಧಾನ ವ್ಯವಸ್ಥಾಪಕ ಪಿ.ಎಸ್. ನಂದೀಶ, ಉಪ ನಿರ್ದೇಶಕರಾದ ಲತಾ ನಾಯಕ್, ವ್ಯವಸ್ಥಾಪಕರಾದ ರಶ್ಮಿ ಯದಾಟಿ, ನಾಗಪ್ಪ ಕಿತ್ತೂರ್, ಸಹಾಯಕ ವ್ಯವಸ್ಥಾಪಕರಾದ ಶ್ರೀಮತಿ ತೇಜಾವತಿ ಅವರು ಅಭಿನಂದಿಸಿದ್ದಾರೆ.

# ಎಲೆಬೇತೂರು ಗ್ರಾ.ಪಂ. ಅಧ್ಯಕ್ಷರಿಗೆ ಯುವ ನಾಯಕ ಅಥಿತ್ ಅಂಬರ್‌ಕರ್‌ರವರಿಂದ ಅಭಿನಂದನೆಗಳು



ದಾವಣಗೆರೆ ತಾಲ್ಲೂಕು ಎಲೆಬೇತೂರು ಗ್ರಾಮ ಪಂಚಾಯತಿ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ರೇವಣಸಿದ್ದಪ್ಪನವರಿಗೆ ಯುವ ನಾಯಕ ಬಿಜೆಪಿ ಯುವ ಮೋರ್ಚಾ ಉಪಾಧ್ಯಕ್ಷರಾದ ಅಥಿತ್ ಅಂಬರ್‌ಕರ್, ಬಿಜೆಪಿ ಜಿಲ್ಲಾ ಖಜಾಂಚಿ ಬಾತಿ ವೀರೇಶ್, ಹಿರಿಯ ಮುಖಂಡರಾದ ಬೇತೂರು ವಿಶ್ವನಾಥ್, ಗಂಗಜ್ಜನವರ ಉಪಸ್ಥಿತಿಯಲ್ಲಿ ಅಭಿನಂದಿಸಿದರು.

ಜಾಹೀರಾತು

# ವಾರ ಭವಿಷ್ಯ

**ದಿನಾಂಕ : 11.02.2024 ರಿಂದ 17.02.2024ರವರೆಗೆ**

**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**

ಆರಂಭಿಸಿರುವ ಹೊಸ ಉದ್ಯಮದಲ್ಲಿ ಲಾಭ ಕಂಡುಬರಲಿದೆ, ಕೆಲವು ವಿಷಯಗಳಲ್ಲಿ ಆತುರದ ನಿರ್ಧಾರಗಳು ಬೇಡ, ಹಿರಿಯರೊಂದಿಗೆ ಸೌಹಾರ್ದತೆಯಿಂದ ನಡೆದುಕೊಳ್ಳಿ, ರಾಜಕಾರಣಿಗಳು ತಮ್ಮ ವ್ಯಕ್ತಿತ್ವದ ಬಗ್ಗೆ ನಂಬಿಕೆ ಕಳೆದುಕೊಳ್ಳ ಬೇಡಿ, ಆದಾಯ ತಕ್ಕಮಟ್ಟಿಗಿರುವುದರಿಂದ ದೈನಂದಿನ ವ್ಯವಹಾರಗಳಿಗೇನೂ ತೊಂದರೆಯಿಲ್ಲ. ರೈತಾಪಿ ಮಿತ್ರರು ಮಧ್ಯವರ್ತಿಗಳ ವಿಚಾರದಲ್ಲಿ ಸಾಕಷ್ಟು ಎಚ್ಚರದಿಂದಿರುವುದು ಮೇಲು, ವಿದ್ಯಾರ್ಥಿಗಳು ಉತ್ತಮ ಫಲಿತಾಂಶ ಪಡೆಯುವರು, ಶ್ರಮಿಕರಿಗೆ ಉತ್ತಮ ದಿನಗಳು. ಸೋಮ-ಮಂಗಳ-ಗುರು-ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ಹೈನುಗಾರಿಕೆ ಲಾಭದಾಯಕವಾಗಿ ಮುಂದುವರೆಯಲಿದೆ. ಯುವ ಜನರಲ್ಲಿ ಚಟುವಟಿಕೆ ಕಂಡುಬರಲಿದೆ, ಸಿನಿಮಾ ಕಲಾವಿದರಿಗೆ ಕಾಣದ ಕೈವಾಡದಿಂದಾಗಿ ಅವಕಾಶಗಳು ಕಡಿಮೆಯಾಗಲಿವೆ. ಹಣಕಾಸಿನ ಹರಿವು ಮಂದಗತಿಯಿಂದಾಗಿ ಕೆಲವು ಯೋಜನೆಗಳು ಮಂದಗತಿಯಲ್ಲಿ ಸಾಗಲಿವೆ, ಅಧ್ಯಾತ್ಮದ ಕಡೆ ಮನಸ್ಸು ತಿರುಗಲಿದ್ದು, ಹೆಚ್ಚಿನ ಗಮನ ಹರಿಯಲಿದೆ, ಹಿರಿಯರ ಆರೋಗ್ಯದಲ್ಲಿ ಕಂಡುಬರಲಿರುವ ವ್ಯತ್ಯಾಸ ತುಸು ಆತಂಕವನ್ನುಂಟು ಮಾಡಲಿದೆ, ವ್ಯಾಪಾರಿಗಳು ವ್ಯವಹಾರ ನಿಮಿತ್ತ ದೂರದ ಊರುಗಳಿಗೆ ಪ್ರಯಾಣ ಮಾಡುವರು. ಭಾನು-ಸೋಮ-ಶುಕ್ರ-ಶುಭ ದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಔ, ಚ.ಕೆ.ಕೋ.ಹ.)**

ಉದ್ಯಮದಲ್ಲಿ ಹೆಚ್ಚಿನ ಲಾಭ ಕಂಡುಬರುವುದರಿಂದ ಉಳಿತಾಯದ ಬಗ್ಗೆ ಯೋಚಿಸಬಹುದು, ಅಪರಿಚಿತರೊಂದಿಗೆ ಹಣಕಾಸಿನ ವ್ಯವಹಾರ ಬೇಡ. ಅನಿರೀಕ್ಷಿತವಾಗಿ ಹಳೆಯ ಮಿತ್ರರ ಭೇಟಿಯಾಗಲಿದ್ದು, ಹಲವು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಿರಿ, ಸೋದರನ ಮದುವೆಗೆ ಇರುವ ವಿಘ್ನಗಳು ಪರಿಹಾರವಾಗಲಿವೆ, ವಿದ್ಯಾರ್ಥಿಗಳಿಗೆ ಉತ್ತಮ ದಿನಗಳು. ಕೆಲವು ತಪ್ಪು ನಿರ್ಧಾರಗಳಿಂದಾಗಿ ಹಲವು ಕೌಟುಂಬಿಕ ಸಮಸ್ಯೆಗಳು ಎದುರಾಗಲಿವೆ, ಗುರು ಜನರ ದರ್ಶನ ಯೋಗವಿದ್ದು, ಇದನ್ನು ಕೈಚೆಲ್ಲಬೇಡಿ, ಗೋ ಸೇವೆ ಮಾಡಿ.ಭಾನು-ಬುಧ-ಗುರು-ಶುಭ ದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೂ.ಡ.ಡಿ.ಡು.ಡೆ.ಡೋ)**

ಪಟ್ಟ ಶ್ರಮಕ್ಕೆ ತಕ್ಕ ಪ್ರತಿಫಲ ಸಿಗಲಿದ್ದು, ಮನಸ್ಸಿಗೆ ಉಲ್ಲಾಸ ಮೂಡಲಿದೆ, ನಿರೀಕ್ಷಿತ ಮಟ್ಟ ಮುಟ್ಟಿದ ಧನಾದಾಯದಿಂದ ಹಲವು ಪ್ರಯೋಜನವಾಗಲಿದೆ. ಮಹಿಳಾ ಉದ್ಯಮಿಗಳು ತಮ್ಮ ಯೋಜನೆಗಳನ್ನು ಬದಲಾಯಿಸಲು ಯತ್ನಿಸುವರು, ರೈತಾಪಿ ಜನರಿಗೆ ಸರ್ಕಾರದಿಂದ ನೆರವು ವಸ್ತುಗಳ ರೂಪದಲ್ಲಿ ದೊರೆಯಲಿದೆ, ಮಕ್ಕಳ ನಡಾವಳಿಯಲ್ಲಿ ಕಂಡುಬಂದ ವ್ಯತ್ಯಾಸ ಮನಸ್ಸಿಗೆ ನೋವುಂಟು ಮಾಡಲಿದೆ, ಆಡುವ ಮಾತಿನಲ್ಲಿ ನಯವಿರಲಿ, ಸಾಧುಸಂತರ ಸಮಾಗಮವಾಗಲಿದೆ. ಶಾಸ್ತ್ರ ಪಂಡಿತರಿಗೆ ಮಠ ಮಾನ್ಯಗಳಿಂದ ಸನ್ಮಾನ, ಗೋವುಗಳಿಗೆ ಮೇವು ಕೊಡಿ. ಭಾನು-ಸೋಮ-ಬುಧ-ಶುಭ ದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ಮಕ್ಕಳ ವಿದ್ಯಾಭ್ಯಾಸದಲ್ಲಿ ಕಂಡುಬರಲಿರುವ ಪ್ರಗತಿ ನೆಮ್ಮದಿ ತರಲಿದೆ. ಕಳೆದುಹೋಗಿದ್ದ ಅಮೂಲ್ಯ ವಸ್ತುವೊಂದು ಮರಳಿ ಸಿಗಲಿದೆ, ಆದಾಯಕ್ಕೆ ತಕ್ಕಂತೆ ಖರ್ಚನ್ನು ಸರಿದೂಗಿಸಲು ಹರಸಾಹಸ ಪಡುವಿರಿ, ಅಂದುಕೊಂಡ ಕಾರ್ಯವೊಂದು ಮಂದಗತಿಯಲ್ಲಿ ಸಾಗುತ್ತಿದ್ದು, ಮನಸ್ಸಿಗೆ ಬೇಸರ ಮೂಡಿಸಲಿದೆ, ರಾಜಕಾರಣಿಗಳೊಂದಿಗೆ ವ್ಯವಹರಿಸುವಾಗ ಸಾಕಷ್ಟು ಎಚ್ಚರದಿಂದಿರುವುದು ಉತ್ತಮ, ಯುವಕರು ಬೇಸಾಯದ ಕಡೆ ಹೆಚ್ಚಿನ ಒಲವು ತೋರುವರು. ಆದಾಯದ ಮೂಲದಲ್ಲಿ ಕ್ರಮೇಣ ಹೆಚ್ಚಳ ಕಾಣಲಿದೆ, ನವಗ್ರಹಾರಾಧನೆ ಮಾಡಿ. ಭಾನು-ಮಂಗಳ-ಗುರು-ಶುಭ ದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ಸರ್ಕಾರದಿಂದಾಗಬೇಕಾಗಿರುವ ಕೆಲಸಗಳಿಗೆ ಪ್ರಭಾವೀ ವ್ಯಕ್ತಿಗಳ ಮರ್ಜಿ ಹಿಡಿಯದೇ ವಿಧಿಯಿಲ್ಲ. ಮನೆಯಲ್ಲಿ ನಡೆಯಬೇಕಾಗಿರುವ ಮಂಗಳ ಕಾರ್ಯಕ್ಕೆ ಸಿದ್ಧತೆಯು ಪೂರ್ವಯೋಜಿತವಾಗಿರಲಿ, ಬಂಧುಗಳ ಅಸಹಕಾರ ಕೆಲವೊಮ್ಮೆ ನಿಮ್ಮನ್ನು ಧೃತಿಗೆಡಿಸಲಿದೆ. ಬರಬೇಕಾಗಿರುವ ಬಾಕಿ ಹಣ ಸಕಾಲದಲ್ಲಿ ಕೈಸೇರಿ ಉಪಯೋಗವಾಗಲಿದೆ, ಆಸ್ತಿ ಖರೀದಿಗೆ ಹಲವು ಮಾರ್ಗೋಪಾಯವನ್ನು ಹುಡುಕುವಿರಿ. ಕೃಷಿ ಹಾಗೂ ಹೈನುಗಾರಿಕೆ ಹೆಚ್ಚಿನ ಲಾಭ ತರದಿದ್ದರೂ, ನಷ್ಟವಂತೂ ಖಂಡಿತಾಯಿಲ್ಲ. ವಿಷ್ಣು ಸಹಸ್ರ ನಾಮ ಪಠಿಸಿರಿ ಗುರು ಸೇವೆ ಮಾಡಿ. ಮಂಗಳ-ಬುಧ-ಶುಕ್ರ-ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ಸರ್ವಶ್ರೇಷ್ಠನೆಂಬ ಅಹಮಿಕೆ ನಿಮ್ಮನ್ನು ಅವನತಿಯತ್ತ ಕೊಂಡೊಯ್ಯಬಹುದು, ಪ್ರತಿಯೊಂದರಲ್ಲೂ ಲಾಭಾಂಶ ಕಾಣಲು ಯತ್ನಿಸುವುದು, ಮೂರ್ಖತನದ ಮಾತಾದೀತು, ಮಾತಿನಲ್ಲಿರುವ ಕಾಠಿಣ್ಯತೆ ಸ್ನೇಹ ಭಂಗಕ್ಕೆ ಕಾರಣವಾಗದಂತೆ ಎಚ್ಚರವಹಿಸಿ. ಸರ್ಕಾರಿ ಆಸ್ತಿ ಕೊಂಡುಕೊಳ್ಳುವ ವಿಚಾರದಲ್ಲಿ ತೀವ್ರ ಹಿನ್ನಡೆಯಾಗಲಿದೆ, ಚಿಕ್ಕಮಕ್ಕಳ ಆರೋಗ್ಯದ ವಿಷಯದಲ್ಲಿ ಅಲಕ್ಷೆಬೇಡ. ದುರಭ್ಯಾಸಗಳಿಂದ ದೂರವಿರುವುದು ಲೇಸು, ಹಣಕಾಸಿನ ವಿಚಾರದಲ್ಲಿ ಹಿರಿಯರೊಂದಿಗೆ ವಾಗ್ವಾದ ನಡೆಯಲಿದೆ, ಒಟ್ಟಿನಲ್ಲಿ ಈ ವಾರ ಹೆಚ್ಚಿನ ತಾಳ್ಮೆಯಿಂದಿರುವುದು ಉತ್ತಮ. ಬುಧ-ಶುಕ್ರ-ಶನಿ-ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯಿ.ಯು.)**

ಅವ್ಯವಸ್ಥಿತ ಚಿತ್ತರಾಗಿದ್ದ ಯುವಜನರಲ್ಲಿ ಇನ್ನೂ ಮುಂದೆ ಶಿಸ್ತು ಕಂಡುಬರಲಿದೆ. ಆದರೆ ಖರ್ಚು-ವೆಚ್ಚ ಮಿತಿಮೀರದಂತೆ ಕಟ್ಟುನಿಟ್ಟಾಗಿರುವುದು ಮೇಲು, ಎಲ್ಲಾ ಬಲ್ಲವರಂತೆ ಮಾತನಾಡುವುದನ್ನು ಮೊದಲು ಬಿಡಿ. ದೊರೆಯಲಿರುವ ಹಿರಿಯರ ಸಹಕಾರವನ್ನು ಸದುಪಯೋಗಪಡಿಸಿಕೊಳ್ಳಿ, ಹೊಸ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಹುಚ್ಚು ಸಾಹಸಕ್ಕೆ ಕೈಹಾಕಬೇಡಿ, ಮಹಿಳೆಯರಿಗೆ ಕೆಲವೊಂದು ಅಗ್ನಿ ಪರೀಕ್ಷೆಗಳು ಎದುರಾಗಬಹುದು, ಲೇವಾದೇವಿ ವ್ಯವಹಾರದಲ್ಲಿ ಲಾಭಾಂಶ ಕಡಿಮೆಯಾಗಲಿದೆ, ದುರ್ಗಾರಾಧನೆ ಮಾಡಿ. ಸೋಮ-ಮಂಗಳ-ಗುರು-ಶುಭ ದಿನಗಳು.

**ಧನಸ್ಸು (ಮೂಲ, ಪೂರ್ವಾಷಾಡ, ಉತ್ತರಾಷಾಡ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ಸರ್ಕಾರದಲ್ಲಿರುವ ಉನ್ನತಾಧಿಕಾರಿಗಳಿಗೆ ಜವಾಬ್ದಾರಿ ಹೆಚ್ಚಲಿದೆ, ಮತ್ತೊಬ್ಬರ ಆಸ್ತಿ ವಿವಾದದಲ್ಲಿ ನಿಮ್ಮ ಪ್ರವೇಶಬೇಡ. ಆರಂಭಿಕ ಉತ್ಸಾಹ ಕೊನೆಯವರೆಗೂ ಇರುವಂತೆ ನೋಡಿಕೊಳ್ಳಿ, ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿರುವವರಿಗೆ ಆಡಳಿತಾತ್ಮಕ ಸಮಸ್ಯೆಗಳು ಎದುರಾಗಲಿವೆ, ಬಂಧುಗಳೊಂದಿಗೆ ಹಗೆತನ ಬಲು ಘೋರ ಎಂಬುದು ನೆನಪಿರಲಿ, ವಿದ್ಯಾರ್ಥಿಗಳು ಶಿಸ್ತು-ಬದ್ಧ ಅಧ್ಯಯನ ನಡೆಸುವುದು ಉತ್ತಮ, ಉಸಿರಾಟದ ತೊಂದರೆಯಿರುವವರು ತುಸು ಎಚ್ಚರದಿಂದಿರುವುದು ಮೇಲು, ಪ್ರಸೂತಿ ತಜ್ಞರಿಗೆ ಬೇಡಿಕೆ ಹೆಚ್ಚಲಿದೆ. ಗುರುಗಳ ಸೇವೆ ಮಾಡಿ. ಭಾನು-ಗುರು-ಶನಿ-ಶುಭ ದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ಸ್ವಂತ ಉದ್ಯಮದಲ್ಲಿ ಒತ್ತಡ ಸಹಜವಾಗಿದ್ದು, ಅದನ್ನು ನಿಭಾಯಿಸಲು ಯತ್ನಿಸಿ. ಸ್ಥಿರ-ಮನಸ್ಸಿನಿಂದ ಮಾಡಿದ ಕಾರ್ಯಗಳಲ್ಲಿ ಮಾತ್ರ ಯಶಸ್ಸು ಕಟ್ಟಿಟ್ಟ ಬುತ್ತಿ ಎಂಬುದು ನೆನಪಿರಲಿ, ಮಂದಗತಿಯಲ್ಲಿದ್ದರೂ, ಹಣಕಾಸಿನ ಸಮಸ್ಯೆ ನಿಮ್ಮನ್ನು ಏನೂ ಬಾಧಿಸದು, ಆದರೆ ಖರ್ಚು-ವೆಚ್ಚಗಳ ಲೆಕ್ಕ ಅತೀಮುಖ್ಯ, ರಾಜಕಾರಣಿಗಳು ಸಾರ್ವಜನಿಕವಾಗಿ ಮಾತನಾಡುವಾಗ ಸಾಕಷ್ಟು ಎಚ್ಚರದಿಂದಿರುವುದು ರಾಜಕೀಯ ಭವಿಷ್ಯದ ದೃಷ್ಟಿಯಿಂದ ಬಹಳ ಮುಖ್ಯವಾಗಿರುತ್ತದೆ. ಅನುಭವಿಗಳಾದ ಹಿರಿಯರು ಕೊಡುವ ಸಲಹೆಗಳು ಮುಂದೆ ಪ್ರಯೋಜನವಾಗಲಿವೆ. ಸೋಮ-ಗುರು-ಶನಿ-ಶುಭ ದಿನಗಳು.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ಸರ್ಕಾರದ ಹೊಣೆಹೊತ್ತಿರುವ ರಾಜಕೀಯ ಧುರೀಣರಿಗೆ ಪಕ್ಷದ ವರಿಷ್ಠರಿಂದ ಬೆಂಬಲ ದೊರೆಯಲಿದೆ, ವಿದೇಶದಲ್ಲಿ ದುಡಿಯುತ್ತಿರುವ ಯುವಕರಿಗೆ ಹೆಚ್ಚಿನ ಗಳಿಕೆಯಾಗಲಿದೆ, ಅವಿವಾಹಿತರಿಗೆ ಕಂಕಣ ಭಾಗ್ಯ ಕೂಡಿಬರಲಿದೆ, ವಿನಾಕಾರಣ ಸಾಲ ಮಾಡಿ ತೊಂದರೆಗೆ ಸಿಲುಕುವಿರಿ, ಪಾಲುದಾರಿಕೆ ವ್ಯವಹಾರದಲ್ಲಿ ಹೆಚ್ಚಿನ ಲಾಭಾಂಶ ಪಡೆಯುವಿರಿ, ಖಾಸಗಿ ಕಂಪನಿ ನೌಕರರು ಉದ್ಯೋಗ ಬದಲಾವಣೆಗೆ ಯತ್ನಿಸುವರು, ಕುಲದೇವತಾ ಹರಕೆ ಪೂಜೆಯನ್ನು ಆದಷ್ಟುಬೇಗ ಮಾಡಿ ಮುಗಿಸುವುದು ಉತ್ತಮ, ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಬೇಡಿ. ಬುಧ-ಶುಕ್ರ-ಶನಿ-ಶುಭ ದಿನಗಳು.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ಪ್ರತಿಯೊಂದು ವಿಷಯಕ್ಕೂ ಮುಂದಾಲೋಚನೆಯಿಲ್ಲದೆ ಕೋಪ ಮಾಡಿಕೊಳ್ಳುವುದರಿಂದ ಏನೂ ಪ್ರಯೋಜನವಿಲ್ಲ, ದುಡುಕಿನ ನಿರ್ಧಾರಗಳು ಭಾರೀ ನಷ್ಟಕ್ಕೆ ಕಾರಣವಾಗಬಹುದು, ಸರಿಯಾದ ದಾಖಲೆಗಳಿಲ್ಲದ ಆಸ್ತಿಯನ್ನು ಕೊಳ್ಳಲು ಹೋಗಬೇಡಿ, ಉಸಿರಾಟದ ಅಥವಾ ಶೀತ ಬಾಧೆಯಿರುವವರು ಸಾಕಷ್ಟು ಹುಷಾರಾಗಿರುವುದು ಮೇಲು, ಹೂವು, ಹಣ್ಣು ಮತ್ತು ತರಕಾರಿ ಮಾರಾಟಗಾರರಿಗೆ ಹೆಚ್ಚಿನ ಲಾಭವಾಗಲಿದೆ. ಮಹಿಳೆಯರು ತಮ್ಮ ಅಚಾತುರ್ಯದಿಂದಾಗಿ ಭಾರೀ ಮೊತ್ತದ ಹಣ ಕಳೆದುಕೊಳ್ಳುವ ಸಂಭವವಿದೆ, ಲಲಿತಾಷ್ಟೋತ್ತರ ಪಠಿಸಿ. ಭಾನು-ಸೋಮ-ಗುರು-ಶುಭ ದಿನಗಳು.

**ಈ ವಾರದ ವಿಶೇಷತೆಗಳು :**
**ದಿನಾಂಕ: 17.2.2024 ನೇ ಶುಕ್ರವಾರ ರಥಸಪ್ತಮೀ**
**ದಿನಾಂಕ: 18.2.2024 ನೇ ಶನಿವಾರ ಭೀಷ್ಮಾಷ್ಟಮೀ.**

# ಲೋಕಸಭಾ ಚುನಾವಣಾ ವೇದಿಕೆಯಾಗಿಸಲು ಪಕ್ಷಗಳು ಸಜ್ಜು

## ನಾಳೆಯಿಂದ ವಿಧಾನಮಂಡಲ ಅಧಿವೇಶನ

ಬೆಂಗಳೂರು, ಫೆ. 10 - ಸೋಮವಾರದಿಂದ ಆರಂಭಗೊಳ್ಳಲಿರುವ ವಿಧಾನಮಂಡಲದ ಬಜೆಟ್ ಅಧಿವೇಶನವನ್ನು ಆಡಳಿತ ಮತ್ತು ಪ್ರತಿಪಕ್ಷಗಳು ಮುಂಬರುವ ಲೋಕಸಭಾ ಚುನಾವಣೆಗೆ ವೇದಿಕೆಯಾಗಿ ಮಾಡಿಕೊಳ್ಳಲು ಸಜ್ಜಾಗಿವೆ.

ಅಯೋಧ್ಯೆ ಹಾಗೂ ಕೇಂದ್ರದ ಅನುದಾನದ ವಿಚಾರವೇ ಇಡೀ ಅಧಿವೇಶನದಲ್ಲಿ ಭಾರೀ ಚರ್ಚೆಗೆ ಕಾರಣವಾಗುವ ಸೂಚನೆ ಇದೆ.

ಆಡಳಿತಾರೂಢ ಕಾಂಗ್ರೆಸ್ ಜನಪರ ಬಜೆಟ್ ಮಂಡನೆ ಮಾಡಿ ಮತದಾರರ ಒಲವು ಗಳಿಸಲು ಈ ವೇದಿಕೆಯನ್ನು ಬಳಸಿಕೊಳ್ಳಲು ಮುಂದಾದರೆ, ಪ್ರತಿಪಕ್ಷ ಬಿಜೆಪಿ ಹಾಗೂ ಜೆಡಿಎಸ್ ಸರ್ಕಾರದ ವೈಫಲ್ಯಗಳನ್ನು ಎಳೆ ಎಳೆಯಾಗಿ ಬಿಡಿಸಿಟ್ಟು ರಾಜಕೀಯ ಅಖಾಡವಾಗಿ ಮಾಡಿಕೊಳ್ಳಲು ಸಿದ್ಧತೆ ನಡೆಸಿವೆ.

ಬೆಳಗಾವಿಯಲ್ಲಿ ನಡೆದ ಅಧಿವೇಶನದಲ್ಲಿ ವಿಷಯಗಳ ಚರ್ಚೆಗೆ ಸೀಮಿತ ಮಾಡಿಕೊಂಡಿದ್ದ ಪ್ರತಿಪಕ್ಷಗಳು ಇದೀಗ ತಮ್ಮ ಬತ್ತಳಿಕೆಯಲ್ಲಿರುವ ಅಸ್ತ್ರಗಳನ್ನು ಸದನದ ಮುಂದಿಟ್ಟು ಸರ್ಕಾರದ ವೈಫಲ್ಯಗಳನ್ನು ದಾಖಲೆ ಸಮೇತ ಬಿಡಿಸಿಡಲು ಮುಂದಾಗಿವೆ.

ಎನ್‌ಡಿಎ ಮೈತ್ರಿಕೂಟಕ್ಕೆ ಜೆಡಿಎಸ್ ಸೇರಿದ ನಂತರ ಎರಡೂ ಪಕ್ಷಗಳಿಗೂ ಬಲ ಬಂದಿದೆ, ಅವು ಒಗ್ಗಟ್ಟಾಗಿ ಆಡಳಿತ ಪಕ್ಷವನ್ನು ಎದುರಿಸಲು ಅಧಿವೇಶನವನ್ನು ಸಮರ್ಪಕವಾಗಿ ಬಳಕೆ ಮಾಡಿಕೊಳ್ಳಲಿವೆ.

ಸರ್ಕಾರದ ವೈಫಲ್ಯಗಳ ಜೊತೆ ಆಡಳಿತದಲ್ಲಿ ನಡೆದಿರುವ ಅಕ್ರಮಗಳನ್ನು ಬಯಲು ಮಾಡಲು ಬಿಜೆಪಿ ಮತ್ತು ಜೆಡಿಎಸ್ ಮುಂದಾಗಿದ್ದರೆ, ಅದನ್ನು ಎದುರಿಸಲು ಆಡಳಿತ ಪಕ್ಷ ಪ್ರತಿತಂತ್ರ ಮಾಡಿರುವುದಲ್ಲದೆ, ಹಿಂದಿನ ಆಡಳಿತಾವಧಿಯಲ್ಲಿ ನಡೆದಿರುವ ಹಗರಣಗಳನ್ನು ಹೊರತರಲು ಮುಖ್ಯಮಂತ್ರಿ ಸಿದ್ದರಾಮಯ್ಯ ಮುಂದಾಗಿದ್ದಾರೆ. ಈಗಾಗಲೇ ಸದನದಲ್ಲಿ ಇವರ ಬಣ್ಣ ಬಯಲು ಮಾಡುತ್ತೇವೆ ಎಂದು ಇಬ್ಬರೂ ಹೇಳಿಕೊಂಡಿದ್ದಾರೆ.

ರಾಜ್ಯ ಎದುರಿಸುತ್ತಿರುವ ಭೀಕರ ಬರಗಾಲ, ಕುಡಿಯುವ ನೀರು, ಮೇವು ಹಾಗೂ ವಿದ್ಯುತ್ ಸಮಸ್ಯೆ ಜೊತೆಗೆ ಕೂಲಿಗಾಗಿ ಜನ ಗುಳೇ ಹೋಗುತ್ತಿರುವುದು ಪ್ರತಿಪಕ್ಷಗಳಿಗೆ ಅಸ್ತ್ರವಾಗಲಿದೆ.

ಬರಗಾಲದಿಂದ ಜನತೆ ಸಂಕಷ್ಟಕ್ಕೆ ಸಿಲುಕಿದರೂ ಪರಿಹಾರ ನೀಡಿಲ್ಲ, ಗ್ಯಾರಂಟಿ ಜಪ ಮಾಡಿಕೊಂಡೇ ಸರ್ಕಾರ ಕುಳಿತಿದೆ ಎನ್ನುವುದು ಒಂದು ಕಡೆಯಾದರೆ, ಮತ್ತೊಂದೆಡೆ ಸರ್ಕಾರಿ ಕಾಮಗಾರಿಗಳಿಗೆ ಶೇಕಡ 40ರಷ್ಟು ಲಂಚ ನೀಡಬೇಕೆನ್ನುವುದು ಈ ಆಡಳಿತದಲ್ಲೂ ಮುಂದುವರೆದಿದೆ ಎಂದು ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ನೀಡಿರುವ ಹೇಳಿಕೆ ಸರ್ಕಾರವನ್ನು ಕಟ್ಟಿಹಾಕಲಿದೆ.

ಗುತ್ತಿಗೆದಾರರ ಸಂಘ ಮಾಡಿದ ಆರೋಪವನ್ನೇ ಮುಂದಿಟ್ಟುಕೊಂಡು ಕಳೆದ ಚುನಾವಣೆಯಲ್ಲಿ ಅಂದಿನ ಬಿಜೆಪಿ ಸರ್ಕಾರದ ವಿರುದ್ಧ ಹೋರಾಟ ನಡೆಸಿದ ಕಾಂಗ್ರೆಸ್‌ಗೆ ಈಗ ಅದೇ ಗುತ್ತಿಗೆದಾರರು ಮುಳುವಾಗಿದ್ದಾರೆ.

ಗ್ಯಾರಂಟಿ ಯೋಜನೆಗಳನ್ನು ಸಮರ್ಥನೆ ಮಾಡಿಕೊಂಡು ಬರವನ್ನು ಯಾವ ರೀತಿ ಎದುರಿಸಿದೆ ಎಂಬುದನ್ನು ಸರ್ಕಾರ ಸದನದ ಮುಂದೆ ಬಿಡಿಸಿಡಲಿದೆ.

ನಮ್ಮ ತೆರಿಗೆ ಹಣವನ್ನು ಪಡೆದು ರಾಜ್ಯಕ್ಕೆ ಕೇಂದ್ರ ಅನುದಾನ ನೀಡದಿರುವುದನ್ನು ಪ್ರತಿಪಕ್ಷದ ಮೇಲೆ ಸರ್ಕಾರ ಅಸ್ತ್ರವಾಗಿ ಬಳಕೆ ಮಾಡಲಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸರ್ಕಾರ ಎದುರಿಸುತ್ತಿರುವ ತೀವ್ರ ಹಣಕಾಸಿನ ಸಂಕಷ್ಟವೇ ಪ್ರತಿಪಕ್ಷಗಳ ಪಾಲಿಗೆ ಪ್ರಮುಖ ಅಸ್ತ್ರವಾಗಲಿದ್ದು, ಇದರಿಂದ ಅಭಿವೃದ್ಧಿ ಹೇಗೆ ಕುಂಠಿತವಾಗಿದೆ ಎಂದು ವಿವರಿಸಲು ಅತ್ಯಾತುರದಿಂದ ಕಾದಿವೆ.

ವಿಧಾನಸಭಾ ಕ್ಷೇತ್ರಗಳಿಗೆ ಸೂಕ್ತ ಅನುದಾನ ದೊರೆಯದೇ ಇರುವುದು, ಕೃಷಿ, ಕೈಗಾರಿಕೆ ಸೇರಿದಂತೆ, ವಿವಿಧ ಕ್ಷೇತ್ರಗಳು ಸಂಕಷ್ಟಕ್ಕೆ ಸಿಲುಕಿರುವುದು ಸೇರಿದಂತೆ ಹಲವು ವಿಷಯ ಗಳು ಪ್ರತಿಪಕ್ಷಗಳ ಪಾಲಿಗೆ ಪ್ರಮುಖ ಅಸ್ತ್ರ ವಾಗಿದ್ದು, ಈ ಅಸ್ತ್ರವನ್ನು ಪರಿಣಾಮಕಾರಿಯಾಗಿ ಪ್ರಯೋಗಿಸಲು ಅವು ಸಜ್ಜಾಗಿವೆ.

ಇನ್ನು ವಿದ್ಯುತ್ ಪರಿಸ್ಥಿತಿಯೂ ದಿನದಿಂದ ದಿನಕ್ಕೆ ಹದಗೆಡುತ್ತಿದ್ದು, ರಾಜ್ಯದ ವಿದ್ಯುತ್ ಬೇಡಿಕೆ ಪ್ರಮಾಣ 16,000 ಮೆಗಾವ್ಯಾಟ್‌ಗಿಂತಲೂ ಹೆಚ್ಚಾಗಿದೆ.

ಉತ್ಪಾದನಾ ಪ್ರಮಾಣ ಗಣನೀಯವಾಗಿ ಕುಸಿದಿದ್ದು, ಸದ್ಯದ ಪರಿಸ್ಥಿತಿ ನೋಡಿದರೆ ಸಿದ್ದರಾಮಯ್ಯ ಅವರ ಸರ್ಕಾರ ಜನರಿಗೆ ಕತ್ತಲೆ ಭಾಗ್ಯ ಕರುಣಿಸುವುದು ಗ್ಯಾರಂಟಿ ಎಂಬುದು ಪ್ರತಿಪಕ್ಷಗಳ ಆರೋಪ.

ಇನ್ನು ಜನರಿಗೆ ಅಗತ್ಯವಾದ ಜೀವನಾವಶ್ಯಕ ವಸ್ತುಗಳ ಬೆಲೆ ದಿನದಿಂದ ದಿನಕ್ಕೆ ಗಗನಕ್ಕೇರುತ್ತಿದ್ದು ಇದಕ್ಕೆ ಕಡಿವಾಣ ಹಾಕುವ ಮಾರ್ಗೋಪಾಯಗಳೇ ಸರ್ಕಾರಕ್ಕೆ ಕಾಣಿಸದಂತಾಗಿದೆ. ಆ ಮೂಲಕ ಜನ ಮತ್ತಷ್ಟು ಸಂಕಷ್ಟಕ್ಕೆ ಸಿಲುಕುವಂತಾಗಿದೆ.

ಸರ್ಕಾರಿ ಕಚೇರಿಗಳಲ್ಲಿ ಹೆಚ್ಚುತ್ತಿರುವ ಭ್ರಷ್ಟಾಚಾರ ಜನರ ಪಾಲಿಗೆ ಹಿಂಸೆಯಾಗಿ ಪರಿಣಮಿಸಿದೆ ಎಂಬುದನ್ನು ಹೇಳಲಿರುವ ಪ್ರತಿಪಕ್ಷಗಳು ಈ ವಿಷಯದಲ್ಲಿ ದೊಡ್ಡ ರಾದ್ಧಾಂತ ಎಬ್ಬಿಸುವ ಸಾಧ್ಯತೆಗಳು ಸ್ಪಷ್ಟವಾಗಿವೆ.

ಒಟ್ಟಾರೆ ಬಜೆಟ್ ಅಧಿವೇಶನ ಚುನಾವಣಾ ಅಖಾಡವಾಗಿ ಪರಿವರ್ತನೆಗೊಳ್ಳಲಿದೆ, ಇದರ ನಡುವೆಯೇ ಮುಖ್ಯಮಂತ್ರಿ ಅವರು, 2024-25ನೇ ಸಾಲಿನ ಮುಂಗಡ ಪತ್ರವನ್ನು ಫೆಬ್ರವರಿ 16 ರಂದು ವಿಧಾನಸಭೆಯಲ್ಲಿ ಮಂಡಿಸಲಿದ್ದಾರೆ.

# ಸಂಸತ್ತಿನಲ್ಲಿ ರಾಮ ನಾಮ ಜಪ

ನವದೆಹಲಿ, ಫೆ. 10 – ಸಂಸತ್ತಿನ ಬಜೆಟ್ ಅಧಿವೇಶನದ ಕೊನೆಯ ದಿನದಂದು ಉಭಯ ಸದನಗಳಲ್ಲಿ ರಾಮ ಮಂದಿರದ ವಿಷಯ ಪ್ರಮುಖವಾಗಿ ಚರ್ಚೆಗೆ ಬಂದಿತು. ಕೆಲ ಗಂಟೆಗಳ ಕಾಲ ಉಭಯ ಸದನಗಳ ಸದಸ್ಯರು ಮಂದಿರ ಕುರಿತು ಚರ್ಚಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಸಂಸತ್ತಿನಲ್ಲಿ ರಾಮ ಮಂದಿರದ ಕುರಿತು ಚರ್ಚಿಸುವುದು ಮುಂದಿನ ಪೀಳಿಗೆಗೆ ಪ್ರಮುಖವಾಗಿದೆ ಎಂದರು.

ಅಯೋಧ್ಯೆ ರಾಮ ಮಂದಿರದ ನಿರ್ಮಾಣ ಹಾಗೂ ಪ್ರಾಣ ಪ್ರತಿಷ್ಠಾಪನೆಯು ಐತಿಹಾಸಿಕ ಸಾಧನೆ ಎಂದು ಲೋಕಸಭೆಯಲ್ಲಿ ನಿರ್ಣಯ ಅಂಗೀಕರಿಸಲಾಯಿತು.

ಈ ನಿರ್ಣಯವನ್ನು ಮಂಡಿಸಿದ ಲೋಕಸಭಾಧ್ಯಕ್ಷ ಓಂ ಬಿರ್ಲಾ, ಇದರಿಂದ ಮೌಲ್ಯಗಳಿಗೆ ಆಶಾಭಾವನೆ ಸಿಗುತ್ತದೆ ಹಾಗೂ ಮುಂದಿನ ಪೀಳಿಗೆಗೆ ಐಕ್ಯತೆ ಸಿಗುತ್ತದೆ ಎಂದರು. ಶತಮಾನಗಳ ನಿರೀಕ್ಷೆಯ ನಂತರ ರಾಮ ಮಂದಿರವು ಉತ್ತಮ ಆಡಳಿತ ಹಾಗೂ ಜನ ಕಲ್ಯಾಣದ ಹೊಸ ಯುಗವನ್ನು ಆರಂಭಿಸಿದೆ. ಮಂದಿರವು ಶ್ರೇಷ್ಠ ಭಾರತದ ಸಂಕೇತವಾಗಿದೆ ಎಂದರು.

ಗೃಹ ಸಚಿವ ಅಮಿತ್ ಷಾ ಮಾತನಾಡಿ, ಮಂದಿರ ಇಲ್ಲದ ದೇಶವನ್ನು ಕಲ್ಪಿಸಿಕೊಳ್ಳುವವರಿಗೆ ಭಾರತದ ಅರ್ಥವಾಗಿಲ್ಲ. ನಮ್ಮ ಸಂಸ್ಕೃತಿ ರಾಮಾಯಣಕ್ಕಿಂತ ಭಿನ್ನವಾಗಿಲ್ಲ ಎಂದರು.

ರಾಜ್ಯಸಭೆಯಲ್ಲಿ ಮಾತನಾಡಿದ ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ, ಬಿಜೆಪಿಯು ಎಂದೂ ರಾಮ ಮಂದಿರದ ವಿಷಯದಲ್ಲಿ ರಾಜಕೀಯ ಲಾಭ ಪಡೆಯುವ ಪ್ರಯತ್ನ ನಡೆಸಿಲ್ಲ. ಇದು ನಮ್ಮ ಬದ್ಧತೆಯಾಗಿದ್ದು, ಆ ಬದ್ಧತೆಯನ್ನು ಈಡೇರಿಸಿದ್ದೇವೆ ಎಂದರು. ಇದು ಇಡೀ ದೇಶಕ್ಕೆ ಸಂಬಂಧಿಸಿದ ವಿಷಯ. ನಾವೆಂದೂ ಈ ವಿಷಯದಲ್ಲಿ ರಾಜಕೀಯ ಲಾಭ ಗಳಿಸುವ ಯತ್ನ ನಡೆಸಿಲ್ಲ ಎಂದವರು ಹೇಳಿದರು.

ರಾಜ್ಯಸಭಾಧ್ಯಕ್ಷ ಜಗದೀಪ್ ಧನಕರ್ ಮಾತನಾಡಿ, ಮಂದಿರದ ಪ್ರಾಣ ಪ್ರತಿಷ್ಠಾಪನೆಯ ದಿನವು ರಾಷ್ಟ್ರೀಯ ಉತ್ಸವದ ದಿನ ಎಂದು ಹೇಳಿದರು.

# ರಾಮ ಮಂದಿರ ವಿಶ್ವ ಮಾನವತೆಯ ಪ್ರತೀಕವಾಗಲಿ



ನವದೆಹಲಿ, ಫೆ. 10 – ಅಯೋಧ್ಯೆಯ ರಾಮ ಮಂದಿರವು ದೇಶ ಹಾಗೂ ವಿಶ್ವಕ್ಕೆ ಮಹಾ ಮಾನವತೆಯ ಪ್ರತೀಕವಾಗಲಿ ಎಂದು ಮಾಜಿ ಪ್ರಧಾನ ಮಂತ್ರಿ ಹೆಚ್.ಡಿ. ದೇವೇಗೌಡ ಆಶಿಸಿದ್ದಾರೆ.

ರಾಜ್ಯಸಭೆಯಲ್ಲಿ ಮಾತನಾಡಿದ ಅವರು, ರಾಮ ಮಂದಿರದ ಪ್ರಾಣ ಪ್ರತಿಷ್ಠಾಪನೆಯ ನೇತೃತ್ವವನ್ನು ಪ್ರಧಾನ ಮಂತ್ರಿ ನರೇಂದ್ರ ಮೋದಿ ವಹಿಸಿಕೊಂಡಿದ್ದಕ್ಕಾಗಿ ಅಭಿನಂದಿಸಿದರು.

ಜನವರಿ 22ರಂದು ನಡೆದ ಬಾಲರಾಮ ದೇವರ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿ ಪತ್ನಿಯೊಂದಿಗೆ ಭಾಗಿಯಾದ ಬಗ್ಗೆ ಮಾತನಾಡಿದ ಅವರು, ಲಕ್ಷಾಂತರ ಭಾರತೀಯರಂತೆ ನನಗೂ ಈ ಕ್ಷಣ ವೈಯಕ್ತಿಕವಾಗಿ ಸಂತೋಷ ಹಾಗೂ ಭಕ್ತಿಪರವಶತೆಯದ್ದಾಗಿತ್ತು ಎಂದರು.

ಶ್ರೀರಾಮದೇವರು ನಮ್ಮ ಹೃದಯ ಮತ್ತು ಮನಸ್ಸಿನಲ್ಲಿ ಇದ್ದಾನೆ. ಶ್ರೀರಾಮ ಸದ್ವಿಚಾರ, ದಯೆ ಹಾಗೂ ಪ್ರೀತಿಯ ಪ್ರತೀಕ. ರಾಮ ಧರ್ಮ ಹಾಗೂ ರಾಜ ಧರ್ಮವನ್ನು ಪಾಲಿಸಿದ್ದ. ಹೀಗಾಗಿ ಪ್ರತಿಯೊಬ್ಬರಿಗೂ ಆ ರಾಮ ಆರಾಧ್ಯ ದೈವ ಎಂದು ಹೇಳಿದರು.

ಮಹಾತ್ಮ ಗಾಂಧೀಜಿ ಅವರೂ ಶ್ರೀರಾಮನಿಂದ ಆಕರ್ಷಿತರಾಗಿದ್ದರು. ನಮ್ಮ ರಾಷ್ಟ್ರದ ಮಹಾನ್ ಸದ್ಗುಣಗಳ ಪ್ರತೀಕ ರಾಮ ಎಂದು ಗಾಂಧೀಜಿ ಹೇಳುತ್ತಿದ್ದರು. ರಾಮ ದೇವರು ನೀಡಿದ ನೈತಿಕ ಬಲದಿಂದ ನಾವು ಬ್ರಿಟಿಷರ ವಿರುದ್ಧ ಹೋರಾಡಿದ್ದೆವು ಎಂದು ಹೇಳಿದರು.

# ಲೋಕಾ ಬಲೆಗೆ ನ್ಯಾಮತಿ ತಹಶೀಲ್ದಾರ್ ಕಚೇರಿ ಗ್ರಾಮ ಆಡಳಿತಾಧಿಕಾರಿ

ನ್ಯಾಮತಿ, ಫೆ.10- ತಾಲ್ಲೂಕಿನ ತಹಶೀಲ್ದಾರ್ ಕಚೇರಿಯ ಗ್ರಾಮ ಆಡಳಿತಾಧಿಕಾರಿಯೊಬ್ಬರು ಅಂಗವಿಕಲ ಮಾಸಾಶನ ನೀಡಲು ಲಂಚ ಪಡೆಯುತ್ತಿರುವಾಗ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.

ಗ್ರಾಮ ಆಡಳಿತಾಧಿಕಾರಿ ಗಣೇಶ್ ಕೆ.ಜಿ. ಲೋಕಾಯುಕ್ತ ಬಲೆಗೆ ಬಿದ್ದವರು. ನ್ಯಾಮತಿ ತಾಲ್ಲೂಕಿನ ಕುಂಕುವ ಗ್ರಾಮದ ವೀರೇಶ್ ಎಸ್. ಅವರು ತಮ್ಮನಾದ ಹರ್ಷ ಅವರಿಗೆ ಅಂಗವಿಕಲ ಮಾಸಾಶನ ನೀಡುವಂತೆ ಅರ್ಜಿ ಸಲ್ಲಿಸಿದ್ದರು. ಮಾಸಾಶನಕ್ಕೆ ಶಿಫಾರಸ್ಸು ಮಾಡಲು 6000 ರೂ. ಲಂಚ ನೀಡುವಂತೆ ಅವರು ಬೇಡಿಕೆ ಇಟ್ಟಿದ್ದರು. ಬಳಿಕ 5,000 ರೂ. ನೀಡುವಂತೆ ಬೇಡಿಕೆ ಇಟ್ಟಿದ್ದರು. ಈ ಸಂಬಂಧ ವೀರೇಶ್ ಲೋಕಾಯುಕ್ತ ಅಧಿಕಾರಿಗಳಿಗೆ ದೂರು ನೀಡಿದ್ದರು.



ಶುಕ್ರವಾರ ನ್ಯಾಮತಿ ತಾಲ್ಲೂಕಿನ ಬಸವನಹಳ್ಳಿ ಗ್ರಾಮದ ನರಸಿಂಹ ಸ್ವಾಮಿ ದೇವಸ್ಥಾನದ ಬಳಿ 5,000 ಪಡೆಯುತ್ತಿದ್ದಾಗ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದ್ದಾರೆ. ಲೋಕಾಯುಕ್ತ ಎಸ್ಪಿ ಎಂ.ಎಸ್. ಕೌಲಾಪೂರೆ ಮಾರ್ಗದರ್ಶನದಲ್ಲಿ ಲೋಕಾಯುಕ್ತ ಡಿವೈಎಸ್‌ಪಿ ಕಲಾವತಿ ಕೆ., ಇನ್‌ಸ್ಪೆಕ್ಟರ್‌ಗಳಾದ ಎಚ್.ಎಸ್. ರಾಷ್ಟ್ರಪತಿ, ಮಧುಸೂದನ್ ಸಿ. ಹಾಗೂ ಸಿಬ್ಬಂದಿ ವೀರೇಶಯ್ಯ, ಸುಂದರೇಶ್, ಸುರೇಶ್, ಮಲ್ಲಿಕಾರ್ಜುನ ಅವರ ತಂಡ ಕಾರ್ಯಾಚರಣೆ ನಡೆಸಿತ್ತು.

## ಪದವಾಣಿ-96

ರಚನೆ : ಮಮತಾ ರಾಧಾಕೃಷ್ಣ
ದಾವಣಗೆರೆ.

| | | | | | | | | |
|---|---|---|---|---|---|---|---|---|
| 1 | | | 2 | ■ | ■ | ■ | 3 | |
| | ■ | ■ | | ■ | ■ | ■ | | ■ |
| | ■ | ■ | 4 | | 5 | | | ■ |
| 6 | 7 | ■ | ■ | ■ | | ■ | ■ | ■ |
| ■ | | ■ | 8 | | | ■ | 9 | ■ |
| ■ | ■ | ■ | | ■ | ■ | ■ | 10 | 11 |
| ■ | 12 | | | | 13 | ■ | ■ | |
| ■ | | ■ | ■ | ■ | | ■ | ■ | |
| 14 | | ■ | ■ | ■ | 15 | | | |

**ಎಡದಿಂದ ಬಲಕ್ಕೆ :**

| | |
|---|---|
| 1) ಸರ ಧರಿಸಿ ಬಂದ ಮುಖ್ಯ ಅಧಿಕಾರಿ | 4 |
| 3) ನಡುಗುವುದನ್ನು ನೋಡಿದ್ದಕ್ಕೇ ಈ ಮಂದಹಾಸ | 2 |
| 4) ಚರಣಕಮಲ | 5 |
| 6) ತರತಮ ತೋರುವಾಗಲೇ ಕವಿದ ಕತ್ತಲು | 2 |
| 8) ಅವನು ಕುಳಿತ ಭೂಮಿ | 3 |
| 10) ಚಂದ್ರ-ಪರ್ಯಾಯ ಪದ | 2 |
| 12) ಗರುಡ ಧ್ವಜ | 5 |
| 14) ಪವಿತ್ರವಾಗಿ ಕಾಣುತ್ತಿರುವ ಓಲೆ | 2 |
| 15) ಕಾಲಸೂಚಕ ಯಂತ್ರ | 4 |

**ಮೇಲಿನಿಂದ ಕೆಳಕ್ಕೆ :**

| | |
|---|---|
| 1) ಉಚಿತವಾಗಿ ಬಂದಿದ್ದರೂ ಯೋಗ್ಯವಾದುದು | 4 |
| 2) ತಿಳುವಳಿಕೆ ಇಲ್ಲದವನು ಶೀರ್ಷಾಸನ ಹಾಕಿದ್ದಾನೆ | 3 |
| 3) ಬಿಹಾರದ ಪ್ರಾಚೀನ ವಿಶ್ವವಿದ್ಯಾಲಯ | 3 |
| 5) ಧೂಳು ತುಂಬಿದ ರಾತ್ರಿ | 3 |
| 7) ಚಿಕ್ಕ ಪ್ರಾಣಿ | 2 |
| 8) ಪಾರ್ವತಿಯ ಮತ್ತೊಂದು ಹೆಸರು | 3 |
| 9) ಇವ ಕಾಣದ್ದನ್ನು ಕವಿ ಕಂಡ | 2 |
| 11) ಭಾರವನ್ನು ಹೊತ್ತವನು | 4 |
| 12) ಈಕೆ ಲಕ್ಷ್ಮಣನ ತಾಯಿ | 3 |
| 13) ರಂಗ ಏರಿದ ಕುದುರೆ | 3 |

(ಉತ್ತರಗಳು ಮುಂದಿನ ವಾರಕ್ಕೆ)

**ಪದವಾಣಿ - 95ರ ಉತ್ತರಗಳು :**

**ಎಡದಿಂದ ಬಲಕ್ಕೆ : 1) ಪಾವನ 2) ಕಡಗ 4) ಸರವಿ 6) ಅನಲ 7) ಸಮುದ್ಧರಣ 8) ವಸಂತ 10) ಗಡವ 12) ತಬ್ಬಿಬ್ಬು 13) ಅತ್ತರು.**

**ಮೇಲಿನಿಂದ ಕೆಳಕ್ಕೆ : 1) ಪಾಮರ 3) ಗಗನ 5) ವಿಶ್ವಾಸಘಾತ 6) ಅರುಣರಾಗ 9) ಸಂಗೀತ 11) ಡಮರು.**

# ಹಲ್ದ್ವಾನಿ ನಗರದಲ್ಲಿ ಕರ್ಫ್ಯೂ ವಾಪಸ್

ಹಲ್ದ್ವಾನಿ, ಫೆ. 10 – ಉತ್ತರಾಖಂಡದ ಹಿಂಸಾ ಪೀಡಿತ ಹಲ್ದ್ವಾನಿ ನಗರದಲ್ಲಿ ಕರ್ಫ್ಯೂ ವಾಪಸ್ ಪಡೆಯಲಾಗಿದೆ. ಆದರೆ, ಹಿಂಸಾಚಾರ ನಡೆದಿದ್ದ ಬಂಭೂಲ್ಪುರ ಪ್ರದೇಶದಲ್ಲಿ ಕರ್ಫ್ಯೂ ಹಾಗೂ ಭದ್ರತಾ ಸಿಬ್ಬಂದಿ ನಿಯೋಜನೆ ಮುಂದುವರೆಸಲಾಗಿದೆ. ಘಟನೆಯ ನ್ಯಾಯಿಕ ತನಿಖೆಗೆ ಆದೇಶಿಸಲಾಗಿದೆ. ಹದಿನೈದು ದಿನಗಳಲ್ಲಿ ವರದಿ ನೀಡಲು ತಿಳಿಸಲಾಗಿದೆ. ಗುರುವಾರ ನಡೆದ ಹಿಂಸಾಚಾರದಲ್ಲಿ ಆರು ಜನರು ಸಾವನ್ನಪ್ಪಿದ್ದರು. ಸ್ಥಳೀಯರು ಕಲ್ಲು ತೂರಾಟ ಹಾಗೂ ಪೆಟ್ರೋಲ್ ಬಾಂಬ್ ಎಸೆದಾಗ 60ಕ್ಕೂ ಹೆಚ್ಚು ಜನ ಗಾಯಗೊಂಡಿದ್ದಾರೆ. ಅಕ್ರಮ ಮದರಸಾ ತೆರವುಗೊಳಿಸಲು ಆಡಳಿತ ಮುಂದಾದಾಗ ಸ್ಥಳೀಯರು ಹಿಂಸಾಚಾರ ನಡೆಸಿದ್ದರು.

# ಕಾಂಗ್ರೆಸ್‌ಗಿಂತ ಬಿಜೆಪಿಗೆ 7 ಪಟ್ಟು ಹೆಚ್ಚು ಬಾಂಡ್ ದೇಣಿಗೆ

ನವದೆಹಲಿ, ಫೆ. 10 – ಕೇಂದ್ರದ ಆಡಳಿತಾರೂಢ ಬಿಜೆಪಿ 2022-23ರಲ್ಲಿ 1,300 ಕೋಟಿ ರೂ.ಗಳನ್ನು ಚುನಾವಣಾ ಬಾಂಡ್‌ಗಳ ಮೂಲಕ ದೇಣಿಗೆ ಪಡೆದಿದೆ. ಇದು ಕಾಂಗ್ರೆಸ್ ಪಡೆದಿರುವ ಹಣಕ್ಕಿಂತ ಏಳು ಪಟ್ಟು ಹೆಚ್ಚಾಗಿದೆ. 2022-23ರ ಸಾಲಿನಲ್ಲಿ ಬಿಜೆಪಿ 2,120 ಕೋಟಿ ರೂ.ಗಳನ್ನು ದೇಣಿಗೆಯಾಗಿ ಪಡೆದಿದೆ. ಇದರಲ್ಲಿ ಶೇ.61ರಷ್ಟು ಚುನಾವಣಾ ಬಾಂಡ್‌ಗಳ ಮೂಲಕ ಬಂದಿದೆ ಎಂದು ಪಕ್ಷದ ವಾರ್ಷಿಕ ಲೆಕ್ಕಪರಿಶೋಧನಾ ವರದಿಯಲ್ಲಿ ಚುನಾವಣಾ ಆಯೋಗಕ್ಕೆ ತಿಳಿಸಲಾಗಿದೆ. ಮತ್ತೊಂದೆಡೆ ಕಾಂಗ್ರೆಸ್ ಪಕ್ಷ ಚುನಾವಣಾ ಬಾಂಡ್‌ಗಳ ಮೂಲಕ 171 ಕೋಟಿ ರೂ.ಗಳನ್ನು ಪಡೆದಿದೆ. 2021-22ರಲ್ಲಿ ಪಕ್ಷ 236 ಕೋಟಿ ರೂ. ಪಡೆದಿತ್ತು.


# ಸಾರ್ವಜನಿಕ ಪ್ರಕಟಣೆ

ದಾವಣಗೆರೆಯ ಜೆ.ಹೆಚ್. ಪಟೇಲ್ ಬಡಾವಣೆ 3ನೇ ಮೇನ್, 2ನೇ ಕ್ರಾಸ್‌ನಲ್ಲಿರುವ ಮನೆ ನ.862ರಲ್ಲಿ ವಾಸವಿರುವ ನಾನು ನವೀನ್ ರಾಜ್ ಬಿನ್ ಜಯರಾಜ್ ಮಾಡಿದ ಸಾರ್ವಜನಿಕ ಪ್ರಕಟಣೆ ಏನೆಂದರೆ ಕೆಳಗೆ ಕಾಣಿಸಿದ ಷೆಡ್ಯೂಲ್ ಸ್ವತ್ತನ್ನು ಈ ಹಿಂದೆ ಡಾ:ಪ್ರೇಮ್ ಜಿತ್ ಎಂ.ಆರ್ ಬಿನ್ ರಣದೇವ.ಎಂ.ಸಿ ಇವರಿಂದ ಜಿ.ಪಿ.ಎ ಮೂಲಕ ಅಧಿಕಾರ ಹೊಂದಿದ ಎನ್.ಎಸ್.ತಿಪ್ಪೇಸ್ವಾಮಿ ಬಿನ್ ಸಂಜೀವಪ್ಪ ಇವರಿಂದ ಶುದ್ಧ ಕ್ರಯಕ್ಕೆ ಪಡೆದಿರುತ್ತೇನೆ. ಸದರಿ ಕ್ರಯಪತ್ರ ದಾವಣಗೆರೆ ಸಬ್ ರಿಜಿಸ್ಟ್ರಾರ್ ನಲ್ಲಿ ದಿನಾಂಕ: 19.2.2009 ರಂದು ದಾಖಲೆ ನಂ. 11415/08-09 ರಂತೆ ರಿಜಿಸ್ಟಾರ್ ಆಗಿದ್ದು ಅಂದಿನಿಂದ ನನ್ನ ಸ್ವಾಧೀನಾನುಭವದ ಸೊತ್ತಾಗಿರುತ್ತದೆ. ಸದರಿ ಆಸ್ತಿಗೆ ಸಂಬಂಧಿಸಿದ ಪೂರ್ವ ದಾಖಲೆಗಳಾದ ರಣದೇವ ಎಂ.ಸಿ ಬಿನ್ ಕಾಶೀರಾಜು ಇವರ ಹೆಸರಿನ ಕ್ರಯಪತ್ರ ಸಂಖ್ಯೆ:4598/04-05 ದಿನಾಂಕ: 9.9.2004 ಮತ್ತು ಡಾ:ಪ್ರೇಮ್ ಜಿತ್ ಎಂ.ಆರ್ ಬಿನ್ ರಣದೇವ ಎಂ.ಸಿ. ಇವರ ಹೆಸರಿಗೆ ಇರುವ ದಾನಪತ್ರ ಸಂಖ್ಯೆ: 7710/07-08 ದಿನಾಂಕ:13.12.2007ರಂದು ಕಳೆದು ಹೋಗಿರುತ್ತವೆ. ಕಳೆದು ಹೋದ ಬಗ್ಗೆ ದಾವಣಗೆರೆ ರೈಲ್ವೆ ಪೊಲೀಸ್ ಸ್ಟೇಷನ್ ಇಲ್ಲಿ ದೂರು ದಾಖಲಿಸಿರುತ್ತೇನೆ ಮತ್ತು ನಗರವಾಣಿ ಪೇಪರ್‌ನಲ್ಲಿ ಸಾರ್ವಜನಿಕ ಪ್ರಕಟಣೆ ಮಾಡಿರುತ್ತಾರೆ. ಆದರೆ ಈಗ ಮತ್ತೊಮ್ಮೆ ಸಾರ್ವಜನಿಕರಲ್ಲಿ ಕೇಳಿಕೊಳ್ಳುವುದೇನೆಂದರೆ ಮೇಲ್ಕಾಣಿಸಿದ ದಾಖಲೆಗಳು ಯಾರಿಗಾದರು ಸಿಕ್ಕಲ್ಲಿ ಕೆಳಗೆ ಕಾಣಿಸಿದ ವಿಳಾಸಕ್ಕೆ ತಲುಪಿಸಲು ಕೋರಿದೆ.

## ಷೆಡ್ಯೂಲ್ :

ದಾವಣಗೆರೆ ಸಬ್ ರಿಜಿಸ್ಟ್ರಾರವರ ಅಧಿಕಾರಕ್ಕೆ ಒಳಪಟ್ಟ ದಾವಣಗೆರೆ ಸರಹದ್ದಿಗೆ ಸೇರಿದ ದಾವಣಗೆರೆ ತಾಲ್ಲೂಕು ಕಸಬಾ ಹೋಬಳಿ ಆವರಗೆರೆ, ಚಿಕ್ಕನಹಳ್ಳಿ ಮತ್ತು ನಿಟುವಳ್ಳಿ ಗ್ರಾಮದ ವಿವಿಧ ಸರ್ವೆ ನಂಬರುಗಳು ಕೈಗಾರಿಕಾ ಉದ್ದೇಶಕ್ಕಾಗಿ ಉಪಯೋಗಿಸಿದ್ದು, ನಂತರ ಮೇಲ್ಕಂಡಂತೆ ವಸತಿ ವಲಯ ಉಪಯೋಗಕ್ಕಾಗಿ ಭೂ ಬದಲಾವಣೆಯಾಗಿ ನೋತರ ಸದರಿ ಪೂರಾ ಪ್ರದೇಶದಲ್ಲಿ ವಿಂಗಡಿಸಿರುವ ನಿವೇಶನಗಳ ಬಗ್ಗೆ ತಯಾರು ಮಾಡಿ ಲೇ ಔಟ್ ಪ್ಲಾನ್ ಸಹ ದಿನಾಂಕ:18.11.2002 ರಂದು ದಾವಣಗೆರೆ ನಗರಾಭಿವೃದ್ಧಿ ಪ್ರಾಧಿಕಾರ ಇವರಿಂದ ಆರ್ಡರ್ ನಂ. ಸಿಆರ್.293/02-03ರ ಪ್ರಕಾರ ನಿವೇಶನಗಳು ಉಪವಿಭಜನೆ ಎಂಬುದಾಗಿ ಅಪ್ರೂವಲ್ ಆಗಿ, ಸದರಿ ಲೇ ಔಟ್ ಪ್ರದೇಶಕ್ಕೆ "ಡಿ.ಸಿ.ಎಂ. ಟೌನ್ ಶಿಪ್" ಎಂಬುದಾಗಿ ನಾಮಾಂಕಿತ ಹೊಂದಿರುವ ಪೂರಾ ಪ್ರದೇಶದಲ್ಲಿ ಬರತಕ್ಕ ನಿವೇಶನಗಳಿಗೆ ದಾವಣಗೆರೆ ನಗರಸಭೆಯ 5ನೇ ವಾರ್ಡು, 7ನೇ ವಿಭಾಗದ ದಾಖಲೆಯಲ್ಲಿ ಡೋರ್ ನಂಬರ್ ಸಹ ದಾಖಲಾಗಿರುವ ಪೂರಾ ಪ್ರದೇಶದಲ್ಲಿ ಬರತಕ್ಕ, ಈ ದಿವಸ ನಿಮಗೆ ಕ್ರಯಕ್ಕೆ ಕೊಟ್ಟ ಸೈಟ್.ನಂ.28 ಡೋರ್. ನಂ.91/81/28 ಅಳತೆ 40x33 ಅಡಿವುಳ್ಳ ಜಾಗ ಹಾಗೂ ಸದರಿ ಜಾಗದಲ್ಲಿ ಕಟ್ಟಿರತಕ್ಕ ನೆಲ ಮಹಡಿ ಮತ್ತು ಮೊದಲನೇ ಮಹಡಿ ಆರ್.ಸಿ.ಸಿ ಮನೆಗಳು ಸೇರಿ ಪೂರಾ ಸೊತ್ತಿಗೆ ಚಕ್ಕುಬಂದಿ- ಪೂರ್ವಕ್ಕೆ- ಸೈಟ್ ನಂ.29, ಪಶ್ಚಿಮಕ್ಕೆ-ಸೈಟ್ ನಂ.27, ಉತ್ತರಕ್ಕೆ-ಸೈಟ್ ನಂ.25, ದಕ್ಷಿಣಕ್ಕೆ- ರಸ್ತೆ.

**ಸಹಿ/- ಕೆ.ಬಿ. ಶೈಲಾಶ್ರೀ**
**ಬಿಎಸ್ಸಿ, ಎಲ್‌ಎಲ್‌ಬಿ., ಪಿಜಿಡಿಎಂ., ಜೆನೆಟಿಕ್ಸ್**
**ವಕೀಲರು, KAR-70/98**

# ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ ದಾವಣಗೆರೆ ಸಿಟಿ ಎಂ.ಸಿ.ಸಿ. ಬಿ ಬ್ಲಾಕ್, 8ನೇ ಮೇನ್, 5ನೇ ಕ್ರಾಸ್, ಡೋರ್ ನಂ. 3629 ವಾಸಿ 80 ವರ್ಷ ವಯಸ್ಸಿನ **ಶ್ರೀ ಜೆ. ಮಲ್ಲಿಕಾರ್ಜುನಪ್ಪ** ಬಿನ್ ಲೇಟ್, ಶ್ರೀ ದೊಡ್ಡ ಕಾಳಪ್ಪ, ಇವರು

ದಾವಣಗೆರೆ ತಾಲ್ಲೂಕು ದೊಡ್ಡಬಾತಿ ಗ್ರಾಮದಲ್ಲಿ ವಾಸವಾಗಿರುವ ದಿವಂಗತ ಶ್ರೀ ಜೆ. ವರ್ಧಮಾನಪ್ಪ ಬಿನ್ ಶ್ರೀ ಹೇಮಪ್ಪ ಇವರ ವಾರಸುದಾರರಾದ :- **(1) ಶ್ರೀಮತಿ ಲೀಲಾವತಿ ಜೆ.** ಕೋಂ ಲೇಟ್ ಶ್ರೀ ಜೆ. ವರ್ಧಮಾನಪ್ಪ, 78 ವರ್ಷ, ವಾಸ; ಪಿ.ಬಿ. ರಸ್ತೆ, ದೊಡ್ಡಬಾತಿ ಗ್ರಾಮ, ದಾವಣಗೆರೆ ತಾಲ್ಲೂಕು. **(2)ಶ್ರೀ ಹೆಚ್. ವಿ. ಸಂಪತ್ ಕುಮಾರ್** ಬಿನ್ ಲೇಟ್ ಶ್ರೀ ಜೆ. ವರ್ಧಮಾನಪ್ಪ, 54 ವರ್ಷ, ವಾಸ; ಪಿ.ಬಿ. ರಸ್ತೆ, ದೊಡ್ಡಬಾತಿ ಗ್ರಾಮ, ದಾವಣಗೆರೆ ತಾಲ್ಲೂಕು. **(3)ಶ್ರೀ ಹೆಚ್. ವಿ. ಹೇಮಂತ್ ಕುಮಾರ್** ಬಿನ್ ಲೇಟ್ ಶ್ರೀ ಜೆ. ವರ್ಧಮಾನಪ್ಪ, ಇವರು ನಿಧನ ಹೊಂದಿದ್ದು, ಅವರ ವಾರಸುದಾರರಾದ- **(A) ಶ್ರೀಮತಿ ರೂಪಾ** ಕೋಂ, ಲೇಟ್ ಶ್ರೀ ಹೆಚ್.ವಿ. ಹೇಮಂತ್ ಕುಮಾರ್, ವಯಸ್ಸು 38 ವರ್ಷ, ವಾಸ; ಪಿ.ಬಿ. ರಸ್ತೆ, ದೊಡ್ಡಬಾತಿ ಗ್ರಾಮ, ದಾವಣಗೆರೆ ತಾಲ್ಲೂಕು. **(B) ಚಿ. ಹೆಚ್.ಆರ್. ಮಿಥುನ್ ಜೈನ್** ಬಿನ್ ಲೇಟ್ ಶ್ರೀ ಹೆಚ್.ವಿ. ಹೇಮಂತ್ ಕುಮಾರ್, ವಯಸ್ಸು 14 ವರ್ಷ, ವಾಸ: ಪಿ.ಬಿ. ರಸ್ತೆ, ದೊಡ್ಡ ಬಾತಿ ಗ್ರಾಮ, ದಾವಣಗೆರೆ ತಾಲ್ಲೂಕು. ಇವರು ಮೈನರ್ ಇದ್ದು, ಇವರ ಪರವಾಗಿ ಅವರ ಜನಕ ತಾಯಿ ಶ್ರೀಮತಿ ರೂಪಾ ಕೋಂ ಲೇಟ್ ಶ್ರೀ ಹೆಚ್. ವಿ. ಹೇಮಂತ್ ಕುಮಾರ್. **(C) ಕುಮಾರಿ. ಹೆಚ್. ಆರ್. ಮೋಕ್ಷ ಜೈನ್** ಬಿನ್ ಲೇಟ್ ಶ್ರೀ ಹೆಚ್.ವಿ. ಹೇಮಂತ್ ಕುಮಾರ್, ವಯಸ್ಸು 12 ವರ್ಷ, ವಾಸ; ಪಿ.ಬಿ. ರಸ್ತೆ, ದೊಡ್ಡಬಾತಿ ಗ್ರಾಮ, ದಾವಣಗೆರೆ ತಾಲ್ಲೂಕು. ಇವರು ಮೈನರ್ ಇದ್ದು, ಇವರ ಪರವಾಗಿ ಅವರ ಜನಕ ತಾಯಿ ಶ್ರೀಮತಿ ರೂಪಾ ಕೋಂ ಲೇಟ್ ಶ್ರೀ ಹೆಚ್.ವಿ. ಹೇಮಂತ್ ಕುಮಾರ್. **(4 )ಶ್ರೀ ಎ. ಹೆಚ್. ಕಿರಣ್ ಕುಮಾರ್** ಬಿನ್ ಲೇಟ್. ಶ್ರೀ ಜೆ. ವರ್ಧಮಾನಪ್ಪ, 50 ವರ್ಷ, ವಾಸ; ಪಿ.ಬಿ. ರಸ್ತೆ, ದೊಡ್ಡ ಬಾತಿ ಗ್ರಾಮ, ದಾವಣಗೆರೆ ತಾಲ್ಲೂಕು. **(5) ಶ್ರೀಮತಿ ರೇಖಾ ಗುಣಪಾಲ್** ಕೋಂ, ಶ್ರೀ ರಾಜೇಂದ್ರ ಆರ್. ಗುಣಪಾಲ್, 48 ವರ್ಷ, ವಾಸ, ಎ- 205, ವಿಲ್ಸನ್ ವಿಂಟೇಜ್, 24, 8ನೇ ಮುಖ್ಯ ರಸ್ತೆ, 1ನೇ ಕ್ರಾಸ್, ವಿಲ್ಸನ್ ಗಾರ್ಡನ್, ಆಡುಗೋಡು ಪೋಸ್ಟ್ ಆಫೀಸ್ ಹಿಂಭಾಗ, ಬೆಂಗಳೂರು-ದಕ್ಷಿಣ, ಬೆಂಗಳೂರು-560 027

ಇವರುಗಳಿಂದ, ಈ ಕೆಳಕಂಡ ಷೆಡ್ಯೂಲ್‌ನಲ್ಲಿ ವಿವರಿಸಿರುವ 'ಹಳೇಯ ಮನೆ ಮತ್ತು ಖಾಲಿ ನಿವೇಶನವನ್ನು' ಕ್ರಯಕ್ಕೆ ಕೊಳ್ಳಲು ಉದ್ದೇಶಿಸಿ ಕ್ರಯ ಕರಾರು ಪತ್ರವನ್ನು ದಿನಾಂಕ; 23-01-2024 ಮಾಡಿಕೊಂಡಿರುತ್ತಾರೆ.

ಕಾರಣ ಈ ಬಗ್ಗೆ ಯಾವುದೇ ವ್ಯಕ್ತಿ ಕಾನೂನು ಪ್ರಕಾರ ಆಕ್ಷೇಪಣೆ/ತಕರಾರು ಹೊಂದಿದ್ದಲ್ಲಿ ಅದನ್ನು ಈ ಪ್ರಕಟಣೆ ನೀಡಿದ 15 ದಿವಸಗಳಲ್ಲಿ ನಮ್ಮ ಕಛೇರಿಗೆ ಸಲ್ಲಿಸತಕ್ಕದ್ದು. ಇಲ್ಲದಿದ್ದಲ್ಲಿ, ನಮ್ಮ ಕಕ್ಷಿದಾರರುಗಳು ಕ್ರಯದ ಬಗ್ಗೆ ಮುಂದುವರೆಯುವವರಿದ್ದಾರೆ ತಿಳಿಯಿರಿ.

**ಷೆಡ್ಯೂಲ್ :** ದಾವಣಗೆರೆ ಹಿರಿಯ ಉಪ-ನೋಂದಣಾಧಿಕಾರಿಗಳವರ ಆಫೀಸಿನ ಅಧಿಕಾರಕ್ಕೆ ಒಳಪಟ್ಟ, ದಾವಣಗೆರೆ ತಾಲ್ಲೂಕು ದೊಡ್ಡ ಬಾತಿ ಗ್ರಾಮದ ಖಾನೇಷುಮಾರಿ ನಂ. 99/2 (ತೊಂಬತ್ತೊಂಬತ್ತು ಸಬ್ ನಂಬರ್ ಎರಡು) ವುಳ್ಳ, ದೊಡ್ಡಬಾತಿ ಗ್ರಾಮ ಪಂಚಾಯ್ತಿಯ ನಮೂನೆ - II - ಬಿ ಪ್ರಕಾರ ಈ-ಸೊತ್ತಿನ ಸಂಖ್ಯೆ 151200201400122595 ವುಳ್ಳ, ಕಟ್ಟಡದ ಅಳತೆ, 118.92 ಚದರ ಮೀಟರ್ ಮತ್ತು ನಿವೇಶನದ ಅಳತೆ 334.45 ಚದರ ಮೀಟರ್ ವುಳ್ಳ, ಒಟ್ಟಾರೆ ಪುರ್ವ-ಪಶ್ಚಿಮ; 13.716000000000001 ಮೀಟರ್ ಮತ್ತು ಉತ್ತರ ದಕ್ಷಿಣ; 24.384 ಮೀಟರ್ ಅಂದರೆ ಪೂರ್ವ-ಪಶ್ಚಿಮ; 45 ಅಡಿ (ನಲವತ್ತೈದು ಅಡಿ) ಮತ್ತು ಉತ್ತರ-ದಕ್ಷಿಣ; 80 ಅಡಿ (ಎಂಬತ್ತು ಅಡಿ) ವುಳ್ಳ ಜಾಗ ಮತ್ತು ಸದರಿ ಜಾಗದಲ್ಲಿರುವ ಪೂರ್ವ-ಪಶ್ಚಿಮ; 32 ಅಡಿ (ಮೂವತ್ತೆರಡು ಅಡಿ) ಮತ್ತು ಉತ್ತರ-ದಕ್ಷಿಣ; 40 ಅಡಿ (ನಲವತ್ತು ಅಡಿ) ಅಳತೆ ಇರುವ ಮಂಗಳೂರು ಹಂಚಿನ ಮನೆ ಒಳಗೊಂಡಿರುವ ಒಟ್ಟಾರೆ ಸೊತ್ತಿಗೆ ಚಕ್ಕುಬಂದಿ; ಪೂರ್ವಕ್ಕೆ; ಇದೇ ನಂಬರ್ ಪೈಕಿ ಸೊತ್ತು ಅಂದರೆ ಶ್ರೀ ಕೆ. ಹನುಮಂತಪ್ಪ ಇವರ ಮನೆ, ಪಶ್ಚಿಮಕ್ಕೆ ಚರಂಡಿ ಮತ್ತು ಎ.ಕೆ. ಕಾಲೋನಿ ರಸ್ತೆ, ಉತ್ತರಕ್ಕೆ ಎ.ಕೆ. ಕಾಲೋನಿ ಬಾವಿಗೆ ಹೋಗುವ ದಾರಿ, ದಕ್ಷಿಣಕ್ಕೆ; ಮೇನ್ ರೋಡ್ ಅಂದರೆ ಪಿ.ಬಿ. ರಸ್ತೆ ಈ ಮಧ್ಯದಲ್ಲಿರುವ 70 ವರ್ಷ ಹಳೆಯದಾದ ಮಂಗಳೂರು ಹಂಚಿನಮನೆ ಮತ್ತು ಉಳಿದ ಖಾಲಿ ನಿವೇಶನ ಮಾತ್ರ, ಕ್ರಯ ಕರಾರು ಪತ್ರಕ್ಕೆ ಒಳಪಟ್ಟಿರುತ್ತದೆ.

**ಶ್ರೀ ಹೆಚ್. ಎಸ್. ಯೋಗೇಶ್**, ವಕೀಲರು,
ಡೋರ್ ನಂ. 154, ಮೊದಲ ಮಹಡಿ, ಕಾನ್ವೆಂಟ್ ರಸ್ತೆ, 3ನೇ ಮೇನ್,
ಪಿ.ಜೆ. ಬಡಾವಣೆ, ದಾವಣಗೆರೆ-577 002. ಫೋ : 98442-41616

**(ಶ್ರೀ ಜೆ. ಮಲ್ಲಿಕಾರ್ಜುನಪ್ಪ)**

# ದಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ.,

## ಆಡಳಿತ ಮಂಡಳಿ ಚುನಾವಣೆ-2024



ಕೋಗುಂಡಿ ಹಾಲಪ್ಪಮೇಷ್ಟ್ರು

# ಭದ್ರತೆಯೊಂದಿಗೆ ಬದಲಾವಣೆಗಾಗಿ



ಅಖಿಲೇಶ್ ಪಿ. ಕೋಗುಂಡಿ

ಕ್ರ.ಸಂ.

ನನಗು 1



ಮತ ನೀಡಿ


#VOTEFORYOUTH #VOICEOFCUSTOMER

– ಅಖಿಲೇಶ್ ಪಿ. ಕೋಗುಂಡಿ

## ಸಂಕ್ಷಿಪ್ತ ಸುದ್ದಿ

- **ಶ್ವೇತಪತ್ರದಲ್ಲಿ ಕರಾಳ ಸತ್ಯ ಮುಚ್ಚಿಡಲಾಗಿದೆ : ವೇಣುಗೋಪಾಲ್**
  ನವದೆಹಲಿ : ಕೇಂದ್ರ ಸರ್ಕಾರ ಆರ್ಥಿಕತೆ ಕುರಿತು ಪ್ರಕಟಿಸಿರುವ ಶ್ವೇತಪತ್ರದಲ್ಲಿ 'ಕರಾಳ ಸತ್ಯ'ಗಳನ್ನು ಮುಚ್ಚಿಡಲಾಗಿದೆ. ನಿರುದ್ಯೋಗ, ಬೆಲೆ ಏರಿಕೆ, ರೈತರ ಬಿಕ್ಕಟ್ಟು ಹಾಗೂ ಆರ್ಥಿಕತೆಯ ಸ್ಥಿತಿಯಿಂದ ಜನರ ಗಮನ ಬೇರೆಡೆ ಸೆಳೆಯಲು ಪ್ರಯತ್ನ ನಡೆಸಲಾಗುತ್ತಿದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಟೀಕಿಸಿದ್ದಾರೆ.
- **ಮಂಗಳವಾರ ಯುಎಇಗೆ ಪ್ರಧಾನಿ ಮೋದಿ**
  ನವದೆಹಲಿ : ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಮಂಗಳವಾರದಿಂದ ಯು.ಎ.ಇ.ಗೆ ಎರಡು ದಿನಗಳ ಭೇಟಿ ನೀಡಲಿದ್ದಾರೆ. ಈ ವೇಳೆ ಅವರು ಯುಎಇ ಅಧ್ಯಕ್ಷ ಶೇಖ್ ಮೊಹಮ್ಮದ್ ಬಿನ್ ಜಯೀದ್ ಅಲ್ ನಹ್ಯಾನ್ ಜೊತೆ ಹಲವು ವಿಷಯಗಳ ಬಗ್ಗೆ ಚರ್ಚಿಸಲಿದ್ದಾರೆ. ಅಬು ಧಾಬಿಯಲ್ಲಿ ಮೊದಲ ಹಿಂದೂ ದೇವಾಲಯ ಉದ್ಘಾಟಿಸಲಿದ್ದಾರೆ.
- **ಸಲ್ಮಾನ್ ಖುರ್ಷೀದ್ ಪತ್ನಿಗೆ ಇ.ಡಿ. ನೋಟಿಸ್**
  ಲಖ್ನೌ : ಕಾಂಗ್ರೆಸ್ ಹಿರಿಯ ನಾಯಕ ಸಲ್ಮಾನ್ ಖುರ್ಷೀದ್ ಅವರ ಪತ್ನಿ ಲೂಸಿ ಖುರ್ಷೀದ್ ಅವರಿಗೆ ಜಾರಿ ನಿರ್ದೇಶನಾಲಯ ಸಮನ್ಸ್ ಕಳಿಸಿದೆ. ಲೂಸಿ ಖುರ್ಷೀದ್ ಅವರ ನೇತೃತ್ವದ ಟ್ರಸ್ಟ್ ಕೃತಕ ಕಾಲು ಹಾಗೂ ಇತರೆ ಉಪಕರಣಗಳನ್ನು ವಿತರಿಸುತ್ತದೆ. ಟ್ರಸ್ಟ್‌ನಲ್ಲಿ ಸರ್ಕಾರಿ ಹಣ ದುರುಪಯೋಗವಾಗಿದೆ ಎಂಬ ಆರೋಪದ ಮೇಲೆ ಪ್ರಕರಣ ದಾಖಲಿಸಲಾಗಿತ್ತು.
- **370ನೇ ವಿಧಿ ರದ್ದುಗೊಳಿಸಿದ ಬಿಜೆಪಿಗೆ 370 ಸ್ಥಾನ : ಅಮಿತ್ ಷಾ**
  ನವದೆಹಲಿ : 370ನೇ ವಿಧಿ ರದ್ದುಗೊಳಿಸಿದ ಬಿಜೆಪಿಗೆ, ಮುಂದಿನ ಲೋಕಸಭಾ ಚುನಾವಣೆಯಲ್ಲಿ ಜನರು 370 ಸ್ಥಾನಗಳನ್ನು ನೀಡಲಿದ್ದಾರೆ. ಎನ್.ಡಿ.ಎ. ಮೈತ್ರಿಕೂಟ 400ಕ್ಕೂ ಹೆಚ್ಚು ಸ್ಥಾನ ಪಡೆಯಲಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಷಾ ವಿಶ್ವಾಸ ವ್ಯಕ್ತಪಡಿಸಿದ್ದಾರೆ.
- **ಕಾನೂನು ಸಂಸ್ಥೆಗಳ ಕಾರ್ಯನಿರ್ವಹಣೆಗೆ ಸ್ವತಂತ್ರ ನ್ಯಾಯಾಂಗ ಅಗತ್ಯ**
  ನವದೆಹಲಿ : ಕಾನೂನು ಸಂಸ್ಥೆಗಳ ಕಾರ್ಯನಿರ್ವಹಣೆಗಾಗಿ ನ್ಯಾಯಿಕ ಸ್ವಾತಂತ್ರ್ಯ ಮಹತ್ವದ್ದಾಗಿದೆ. ಅದರಲ್ಲೂ ಪ್ರಕ್ಷುಬ್ಧಿತ ರಾಜಕೀಯ ಪರಿಸ್ಥಿತಿಯಲ್ಲಿ ಈ ಸ್ವಾತಂತ್ರ್ಯ ಇನ್ನೂ ಅಗತ್ಯವಾಗುತ್ತದೆ ಎಂದು ಅಂತರರಾಷ್ಟ್ರೀಯ ನ್ಯಾಯಾಲಯದ ನ್ಯಾಯಮೂರ್ತಿ ಹಿಲರಿ ಚಾರ್ಲ್ಸ್‌ವರ್ತ್ ಹೇಳಿದ್ದಾರೆ.
- **ಚುನಾವಣೆಗೆ ಮುಂಚೆ ಸಿ.ಎ.ಎ. ನಿಯಮ : ಅಮಿತ್ ಷಾ**
  ನವದೆಹಲಿ : ಪೌರತ್ವ ತಿದ್ದುಪಡಿ ಕಾಯ್ದೆ (ಸಿ.ಎ.ಎ.) ಜಾರಿಗೆ ತರುವ ನಿಯಮಾವಳಿಗಳನ್ನು ಲೋಕಸಭಾ ಚುನಾವಣೆಗೆ ಮುಂಚೆ ಪ್ರಕಟಿಸಲಾಗುವುದು ಎಂದು ಕೇಂದ್ರ ಗೃಹ ಸಚಿವ ಅಮಿತ್ ಷಾ ಹೇಳಿದ್ದಾರೆ. ಈ ಕಾಯ್ದೆಯ ಮೂಲಕ ನೆರೆ ದೇಶಗಳ ಸಂತ್ರಸ್ತ ಅಲ್ಪಸಂಖ್ಯಾತರು ಭಾರತದಲ್ಲಿ ಆಶ್ರಯ ಪಡೆಯಲು ನೆರವಾಗಲಿದೆ.
- **ಅಕಾಲಿ ದಳ ಜೊತೆ ಮೈತ್ರಿ ಮಾತುಕತೆ : ಅಮಿತ್ ಷಾ**
  ನವದೆಹಲಿ : ರಾಜಕೀಯದಲ್ಲಿ ಬಿಜೆಪಿ ಯಾವುದೇ ಕುಟುಂಬ ಯೋಜನೆ ಹೊಂದಿಲ್ಲ ಎಂದಿರುವ ಕೇಂದ್ರ ಗೃಹ ಸಚಿವ ಅಮಿತ್ ಷಾ, ಶಿರೋಮಣಿ ಅಕಾಲಿ ದಳದ ಜೊತೆ ಮೈತ್ರಿ ಮಾತುಕತೆ ನಡೆಯುತ್ತಿದೆ ಎಂದಿದ್ದಾರೆ.

# ಐದು ವರ್ಷಗಳಲ್ಲಿ 21ನೇ ಶತಮಾನದ ಭಾರತಕ್ಕೆ ಅಡಿಪಾಯ : ಪ್ರಧಾನಿ ಮೋದಿ



ನವದೆಹಲಿ, ಫೆ. 10 – ಕಳೆದ 17ನೇ ಲೋಕಸಭೆಯ ಐದು ವರ್ಷಗಳು ಸುಧಾರಣೆ, ಸಾಧನೆ ಹಾಗೂ ಪರಿವರ್ತನೆಯ ಕಾಲವಾಗಿತ್ತು. ಈ ಅವಧಿಯಲ್ಲಿ ದೇಶ ವೇಗವಾಗಿ ದೊಡ್ಡ ಬದಲಾವಣೆಯ ಕಡೆ ಸಾಗಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ತಿಳಿಸಿದ್ದಾರೆ.


ಬಜೆಟ್ ಅಧಿವೇಶನದ ಕೊನೆಯ ದಿನದಂದು ಲೋಕಸಭೆಯಲ್ಲಿ ಮಾತನಾಡಿದ ಪ್ರಧಾನಿ, ಕಳೆದ ಐದು ವರ್ಷಗಳು ಸುಧಾರಣೆಯಲ್ಲಿ ಮಹತ್ವದ್ದಾಗಿದೆ. ಈ ಅವಧಿಯಲ್ಲಿ 21ನೇ ಶತಮಾನದ ಭಾರತಕ್ಕೆ ಬಲಿಷ್ಠ ಅಡಿಪಾಯ ಹಾಕಲಾಗಿದೆ ಎಂದರು.

ಭಾರತ ದೊಡ್ಡ ಬದಲಾವಣೆಯ ಕಡೆ ವೇಗವಾಗಿ ಸಾಗಿದೆ. ಸದನದ ಇತರೆ ಎಲ್ಲ ಸದಸ್ಯರು ಈ ದಿಸೆಯಲ್ಲಿ ಪ್ರಮುಖ ಕೊಡುಗೆ ನೀಡಿದ್ದಾರೆ. ಜನರು ಶತಮಾನಗಳಿಂದ ಕಾದಿದ್ದ ಹಲವು ಕೆಲಸಗಳು ಪೂರ್ಣವಾಗಿವೆ ಎಂದೂ ಮೋದಿ ಹೇಳಿದರು.

ಕಳೆದ ಐದು ವರ್ಷಗಳಲ್ಲಿ ಕೊರೊನಾ ಮಹಾಮಾರಿಯಂತಹ ಶತಮಾನದ ಅತಿ ದೊಡ್ಡ ಬಿಕ್ಕಟ್ಟು ಎದುರಿಸಿದೆವು. ಈ ನಡುವೆಯೂ, ಸಂಸತ್ತಿನ ಕಾರ್ಯನಿರ್ವಹಣೆಗೆ ಧಕ್ಕೆಯಾಗದ ರೀತಿಯಲ್ಲಿ ಲೋಕಸಭಾಧ್ಯಕ್ಷ ಓಂ ಬಿರ್ಲಾ ಅವರು ಅಧಿವೇಶನಕ್ಕೆ ವ್ಯವಸ್ಥೆ ಮಾಡಿದ್ದರು ಎಂದೂ ಪ್ರಧಾನಿ ಹೇಳಿದರು.

ನೂತನ ಸಂಸತ್ ಕಟ್ಟಡ ಅಗತ್ಯದ ಬಗ್ಗೆ ಈ ಹಿಂದೆ ಹಲವು ಬಾರಿ ಮಾತುಗಳು ಕೇಳಿ ಬರುತ್ತಿದ್ದೇವು.ಆದರೆ, ಲೋಕಸಭಾಧ್ಯಕ್ಷರ ನಿರ್ಧಾರದಿಂದಾಗಿ ಈ ಅವಧಿಯಲ್ಲಿ ಹೊಸ ಸಂಸತ್ ಭವನ ನಿರ್ಮಾಣವಾಯಿತು ಎಂದೂ ಮೋದಿ ಹೇಳಿದರು. 17ನೇ ಲೋಕಸಭೆಯಲ್ಲಿ ಉತ್ಪಾದಕತೆ ಶೇ.97ರಷ್ಟಿದೆ. ಮುಂದಿನ ಲೋಕಸಭೆಯಲ್ಲಿ ಶೇ.100ರಷ್ಟು ಉತ್ಪಾದಕತೆಯಾಗಬೇಕು ಎಂಬ ಬದ್ಧತೆ ಹೊಂದಬೇಕಿದೆ ಎಂದು ಪ್ರಧಾನಿ ಹೇಳಿದರು.

## ನಗರದಲ್ಲಿ ಇಂದು 31 ನೇ ಶ್ರೀ ರಾಘವೇಂದ್ರ ಸಪ್ತಾಹ ಮಹೋತ್ಸವದ ಉದ್ಘಾಟನೆ



ಶ್ರೀ ರಾಘವೇಂದ್ರ ಸಪ್ತಾಹ ಕಾರ್ಯಾಚರಣೆ ಸಮಿತಿ (ಮಂತ್ರಾಲಯ), ಶ್ರೀ ರಾಘವೇಂದ್ರ ಸಪ್ತಾಹ ಮಹೋತ್ಸವ ಸಮಿತಿ (ದಾವಣಗೆರೆ) ಇವರ ವತಿಯಿಂದ ಶ್ರೀ ರಾಘವೇಂದ್ರ ಗುರು ಸಾರ್ವಭೌಮರ ಪಟ್ಟಾಭಿಷೇಕ ಮತ್ತು ಜನ್ಮ ದಿನಗಳ ಸಂಸ್ಮರಣೆಗಾಗಿ ಆಚರಿಸುವ 31 ನೇ ಶ್ರೀ ರಾಘವೇಂದ್ರ ಸಪ್ತಾಹ ಮಹೋತ್ಸವದ ಉದ್ಘಾಟನಾ ಸಮಾರಂಭವು ಇಂದು ಸಂಜೆ 5 ಕ್ಕೆ ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ನಡೆಯಲಿದೆ.

ಮಂತ್ರಾಲಯದ ಶ್ರೀ ಸುಬುಧೇಂದ್ರ ತೀರ್ಥ ಶ್ರೀಪಾದಂಗಳವರು, ಉಡುಪಿಯ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದಂಗಳವರು, ಶ್ರೀ ವಿದ್ಯಾರಾಜೇಶ್ವರತೀರ್ಥ ಶ್ರೀಪಾದಂಗಳವರು ಸಾನ್ನಿಧ್ಯ ವಹಿಸಲಿದ್ದಾರೆ.

ವಿಶೇಷ ಅಭ್ಯಾಗತರಾಗಿ ಬೆಂಗಳೂರಿನ ಡಾ. ರಾಜಾ ಎಸ್. ಗಿರಿಯಾಚಾರ್ಯರು, ಚಿಂತರೆವುಲ ಆದ್ಯ ಕೇಶವಾಚಾರ್ಯರು, ವಿಶೇಷ ಆಹ್ವಾನಿತರಾಗಿ ಮಂತ್ರಾಲಯದ ಕೆ.ಅಪ್ಪಣ್ಣಾಚಾರ್ಯರು, ಡಾ. ಕೊರ್ಲಹಳ್ಳಿ ವೆಂಕಟೇಶಾಚಾರ್, ಅನಂತಪುರದ ಡಾ. ಸದಾನಂದ ಶಾಸ್ತ್ರಿಗಳು ಆಗಮಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಶಾಸಕ ಶಾಮನೂರು ಶಿವಶಂಕರಪ್ಪ, ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಅಸಗೋಡು ಜಯಸಿಂಹ, ಜಿಲ್ಲಾಧಿಕಾರಿ ಡಾ.ಎಂ.ವಿ. ವೆಂಕಟೇಶ್, ಎಸ್ಪಿ ಉಮಾ ಪ್ರಶಾಂತ್, ಮೇಯರ್ ವಿನಾಯಕ ಪೈಲ್ವಾನ್ ಭಾಗವಹಿಸಲಿದ್ದಾರೆ. ಇದಕ್ಕೂ ಮುನ್ನ ಬೆಳಿಗ್ಗೆ 6 ಕ್ಕೆ ಸುಪ್ರಭಾತ ಪ್ರಾತಃಸ್ಮರಣೆ ಕೆ. ಅಪ್ಪಣ್ಣಚಾರ್ಯ, ಡಾ.ಜೆ. ಸದಾನಂದ ಶಾಸ್ತ್ರಿಗಳಿಂದ, 7.30 ಕ್ಕೆ ಭಜನೆ, 8.30 ಕ್ಕೆ ಶ್ರೀ ಪಲಿಮಾರು ಮಠದ ಸುಧಾ ವಿದ್ಯಾರ್ಥಿನಿಯ ಪ್ರವಚನ, 9 ಕ್ಕೆ ಸಮೀರಾಚಾರ್ಯ ಅವರಿಂದ 'ಪರೋಪಕಾರ: ಪುಣ್ಯಾಯ' ಕುರಿತು ಪ್ರವಚನ, 9.45 ಕ್ಕೆ ಶ್ರೀಗಳವರಿಂದ ಅನುಗ್ರಹ ಸಂದೇಶ, 11 ಕ್ಕೆ ದಾಸರ ಪದ ವಿಶ್ಲೇಷಣೆ, 11.30 ಕ್ಕೆ ಅಪರ್ಣಾ ಮುಕುಂದ ಬೆಂಗಳೂರು ಇವರಿಂದ ದಾಸರ ಪದಗಳು, ಮಧ್ಯಾಹ್ನ 2.30 ಕ್ಕೆ ಭಜನಾ ಮಂಡಳಿಗಳಿಂದ ಕಾರ್ಯಕ್ರಮ ನಡೆಯಲಿವೆ.

## ನಗರದಲ್ಲಿ ಇಂದಿನಿಂದ 'ಹಸಿದವರಿಗೆ ಉಚಿತ ಊಟ ವಿತರಣೆ'

ಸಿರಿಗನ್ನಡ ವಿಕಲಚೇತನರ ಸೇವಾ ಚಾರಿಟಬಲ್ ಟ್ರಸ್ಟ್ ವತಿಯಿಂದ ಇಂದಿನಿಂದ ಪ್ರತಿದಿನ ಮಧ್ಯಾಹ್ನ 1 ಗಂಟೆಯಿಂದ 'ಹಸಿದವರಿಗೆ ಉಚಿತ ಊಟ ವಿತರಣೆ' ಕಾರ್ಯಕ್ರಮದ ಉದ್ಘಾಟನಾ ಸಮಾರಂಭವು ಜಿಲ್ಲಾ ಕ್ರೀಡಾಂಗಣದ ಬಳಿ ನಡೆಯಲಿದೆ.

ನಾಗವಂದದ ಶ್ರೀ ಶಿವಯೋಗಿ ಶಿವಾನಂದ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಸಮಾಜ ಸೇವಕ ಎ.ಎಂ. ಶಿವಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಪಾಲಿಕೆ ಆಯುಕ್ತರಾದ ರೇಣುಕಾ, ಮಾಜಿ ಮೇಯರ್ ಎಸ್.ಟಿ. ವೀರೇಶ್, ಸದಸ್ಯರಾದ ಜೆ.ಎನ್. ಶ್ರೀನಿವಾಸ್, ಜಿ.ಎಸ್. ಮಂಜುನಾಥ ಗಡಿಗುಡಾಳ್, ದೂಡಾ ಮಾಜಿ ಅಧ್ಯಕ್ಷ ದೇವರಮನಿ ಶಿವಕುಮಾರ್, ಡಾ.ಎ.ಕೆ. ರುದ್ರಮುನಿ, ಡಾ. ಕೆ.ಕೆ.ಪ್ರಕಾಶ್, ಆರ್.ಎಲ್. ನಾಗಭೂಷಣ್, ಡಿ.ಎಸ್. ಸಿದ್ದಪ್ಪ, ಮಹಾಂತೇಶ್ ಒಣರೊಟ್ಟಿ, ನಾಗೇಂದ್ರ ಬಂಡೀಕರ್, ಎನ್.ಕೆ. ಬಸವರಾಜ್, ವೀರಯ್ಯ ಸ್ವಾಮಿ ಮತ್ತಿತರರು ಭಾಗವಹಿಸಲಿದ್ದಾರೆ.

## ಚುನಾವಣಾ ಭರವಸೆಗೆ ಬೊಕ್ಕಸ ಖಾಲಿ ಮಾಡಿಕೊಂಡರೆ ಕೇಂದ್ರ ನೆರವು ನೀಡಲಾಗದು

**ಅಮಿತ್ ಷಾ**

ನವದೆಹಲಿ, ಫೆ. 10 – ರಾಜ್ಯಗಳು ಅವಾಸ್ತವಿಕವಾದ ಚುನಾವಣಾ ಭರವಸೆಗಳನ್ನು ನೀಡಿ ತಮ್ಮ ಬೊಕ್ಕಸ ಖಾಲಿ ಮಾಡಿಕೊಂಡರೆ ಕೇಂದ್ರ ಸರ್ಕಾರ ನೆರವು ನೀಡಲಾಗದು ಎಂದು ಕೇಂದ್ರ ಗೃಹ ಸಚಿವ ಅಮಿತ್ ಷಾ ಹೇಳಿದ್ದಾರೆ.

ಎಲ್ಲಾ ರಾಜ್ಯಗಳು ಅಭಿವೃದ್ಧಿ ಯೋಜನೆ ಹಾಗೂ ಸಮಾಜ ಕಲ್ಯಾಣ ಯೋಜನೆಗೆ ಅನುಗುಣವಾಗಿ ತಮ್ಮ ಬಜೆಟ್ ಸಿದ್ಧಪಡಿಸಿಕೊಳ್ಳಬೇಕು ಎಂದೂ ಅವರು ಹೇಳಿದ್ದಾರೆ.

ರಾಜ್ಯಗಳ ಅನುದಾನದ ಬಗ್ಗೆ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಶ್ವೇತಪತ್ರ ಮಂಡಿಸಿದ್ದಾರೆ. ನಾವು ಪ್ರತಿಯೊಂದು ರಾಜ್ಯಕ್ಕೂ ಕಾಂಗ್ರೆಸ್ ಸರ್ಕಾರ ನೀಡುತ್ತಿದ್ದ ಹಣಕ್ಕಿಂತ ಹೆಚ್ಚಿನದನ್ನು ನೀಡಿದ್ದೇವೆ ಎಂದರು.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು 15ನೇ ಹಣಕಾಸು ಆಯೋಗದ ಮೂಲಕ ರಾಜ್ಯಗಳಿಗೆ ಹೆಚ್ಚು ಹಣ ನೀಡುವ ಕ್ರಮ ತೆಗೆದುಕೊಂಡರು. ಇದು ಎಲ್ಲರಿಗೂ ಗೊತ್ತಿದೆ ಎಂದರು. ಆದರೆ, ನೀವು ಬೊಕ್ಕಸ ಖಾಲಿ ಮಾಡಿಕೊಳ್ಳುವಂತಹ ಚುನಾವಣಾ ಭರವಸೆ ನೀಡುತ್ತೀರಿ. ನಂತರ ಸಂಬಳ ಪಾವತಿಸಲೂ ಹಣ ಇರುವುದಿಲ್ಲ. ಇಂತಹ ಸಂದರ್ಭದಲ್ಲಿ ಕೇಂದ್ರ ಸರ್ಕಾರ ನೆರವು ನೀಡಲಾಗದು ಎಂದು ಅಮಿತ್ ಷಾ ಹೇಳಿದರು.

## ಭೂ ಸುಧಾರಣಾ ಕಾಯ್ದೆಗೆ ತಿದ್ದುಪಡಿ ಸಿಎಂ ಭರವಸೆ

**(3ನೇ ಪುಟದಿಂದ)** ಉಪನ್ಯಾಸಕರು, ಪ್ರೊಫೆಸರ್‌ಗಳು, ಸಾಹಿತಿಗಳ ಮಾರ್ಗದರ್ಶನ ಅನುಕೂಲವಾಯಿತು ಎಂದರು.

ನಂಜುಂಡಸ್ವಾಮಿ ಕಡೆಯವರೂ ರೈತರ ಪರವಾಗಿ ಕ್ರಿಯಾಶೀಲವಾಗಿದ್ದರು, ಸಮಾಜವಾದಿ ಆಶಯಗಳ ಪರವಾಗಿದ್ದ ಅವರ ಚಳವಳಿ ರೈತರ ಸಮಸ್ಯೆ ಪರಿಹಾರಕ್ಕೆ ಆಸರೆ ಆಯಿತು, ರೈತ ಹೋರಾಟ ಮತ್ತು ರೈತ ಸಮಾವೇಶಗಳಲ್ಲಿ ಭಾಗವಹಿಸುವುದು ನನಗೂ ಬಹಳ ಸಂತಸ ಮತ್ತು ಹೆಮ್ಮೆಯ ವಿಷಯ. ನಂಜುಂಡಸ್ವಾಮಿ ಮತ್ತು ರೈತ ಹೋರಾಟಗಳು ಸಮಾಜ ಮತ್ತು ಸರ್ಕಾರಗಳ ಮೇಲೆ ಪರಿಣಾಮ ಬೀರಿವೆ, ನಂಜುಂಡಸ್ವಾಮಿ ಅವರ ರೈತ ಹೋರಾಟ ತಮಗೆ ರಾಜಕೀಯ ಪ್ರೇರಣೆಯಾಗಿದೆ ಎಂದರು.

## 6407 ಕೋಟಿ ಹೂಡಿಕೆಗೆ ಒಪ್ಪಿಗೆ

ಬೆಂಗಳೂರು, ಫೆ. 10 - ರಾಜ್ಯದಾದ್ಯಂತ ಕೈಗಾರಿಕಾ ಬೆಳವಣಿಗೆ ಉತ್ತೇಜಿಸಲು ಮತ್ತು ಉದ್ಯೋಗ ಸೃಷ್ಟಿಸಲು ಶಿಕ್ಷಣ - ಸಂಶೋಧನಾ ಸಂಸ್ಥೆಗಳ ಸ್ಥಾಪನೆ, ಉಗ್ರಾಣ, ಶೈತ್ಯಾಗಾರಗಳ ನಿರ್ಮಾಣ, ವಾಹನ ಬಿಡಿಭಾಗ, ಪಿವಿಸಿ ಪೈಪ್ ಸೇರಿದಂತೆ ವಿವಿಧ ಉತ್ಪನ್ನ ತಯಾರಿಕಾ ಪ್ರಸ್ತಾವಗಳಿಗೆ ಅನುಮೋದನೆ ನೀಡಲಾಗಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ತಿಳಿಸಿದ್ದಾರೆ.

ಬಂಡವಾಳ ಹೂಡಿಕೆ ಸಂಬಂಧ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಒಟ್ಟು 6,407 ಕೋಟಿ ರೂ. ಬಂಡವಾಳ ಹೂಡಿಕೆಯ ವಿವಿಧ ಪ್ರಸ್ತಾವಗಳಿಗೆ ರಾಜ್ಯಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿ ಒಪ್ಪಿಗೆ ನೀಡಿದೆ ಎಂದರು.

ಇವುಗಳಲ್ಲಿ ಬೆಂಗಳೂರು ಗ್ರಾಮಾಂತರ, ಬೆಳಗಾವಿ, ರಾಮನಗರ ಮತ್ತು ಮೈಸೂರು ಜಿಲ್ಲೆಗಳಲ್ಲಿ ಬಂಡವಾಳ ಹೂಡಿಕೆಯ ವಿವಿಧ ಯೋಜನೆಗಳಿಗೆ ಒಪ್ಪಿಗೆ ಸೂಚಿಸಲಾಗಿದೆ, ತಲಾ 50 ಕೋಟಿ ರೂ.ಗಳಿಗೂ ಹೆಚ್ಚಿನ ಬಂಡವಾಳದ 22 ಪ್ರಮುಖ ಬೃಹತ್ ಮತ್ತು ಮಧ್ಯಮ ಯೋಜನೆಗಳಿಗೆ ಅನುಮೋದನೆ ನೀಡಲಾಗಿದ್ದು, ಇವುಗಳಿಂದ ರಾಜ್ಯದಲ್ಲಿ 4,230.64 ಕೋಟಿ ರೂ. ಬಂಡವಾಳ ಹೂಡಿಕೆಯೊಂದಿಗೆ ಒಟ್ಟು 24,846 ಜನರಿಗೆ ಉದ್ಯೋಗಾವಕಾಶಗಳು ದೊರೆಯಲಿವೆ ಎಂದರು.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿಯಲ್ಲಿ 484.33 ಕೋಟಿ ರೂ. ಮೊತ್ತದ ವಿಜ್ಞಾನ, ತಂತ್ರಜ್ಞಾನ, ಸಂಶೋಧನೆ ಹಾಗೂ ಕೌಶಲ್ಯ ಅಭಿವೃದ್ಧಿ ಕೇಂದ್ರ ಸ್ಥಾಪನೆ, ಮೈಸೂರು ಜಿಲ್ಲೆಯಲ್ಲಿ 415 ಕೋಟಿ ರೂ. ಮೊತ್ತದ ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟ್‌ನ ಶಿಕ್ಷಣ ವಿಶ್ವವಿದ್ಯಾಲಯ ಸ್ಥಾಪನೆ, ಬೆಳಗಾವಿ ಜಿಲ್ಲೆಯಲ್ಲಿ 485 ಕೋಟಿ ರೂ. ಬಂಡವಾಳದ ಯಾಂತ್ರೀಕೃತ ಎರಕಹೊಯ್ಯುವ ಘಟಕ ಸ್ಥಾಪನೆ ಸೇರಿವೆ ಎಂದರು.

## ಅರ್ಬನ್ ಬ್ಯಾಂಕ್ ಚುನಾವಣೆ : 5 ಅವಿರೋಧ ಆಯ್ಕೆ

**(3ನೇ ಪುಟದಿಂದ)** ಸ್ಥಾನಗಳಿಗಾಗಿ ಬಿ.ಸಿ. ಉಮಾಪತಿ ಗುಂಪಿನ 9 ಜನರಲ್ಲದೇ, ಪ್ರತ್ಯೇಕವಾಗಿ ಮೂವರು ಸ್ಪರ್ಧಿಸಿದ್ದಾರೆ. ಎಂ.ವಿ. ಜಯಪ್ರಕಾಶ್ ಮಾಗಿ, ಅಖಿಲೇಶ್ ಕೋಗುಂಡಿ ಮತ್ತು ಎನ್.ಎ. ಗುರುರಾಜ್ ಪ್ರತ್ಯೇಕವಾಗಿ ಸ್ಪರ್ಧಿಸಿರುವ ಅಭ್ಯರ್ಥಿಗಳು.

ಪ್ರವರ್ಗ 'ಬಿ' ಮೀಸಲು ಕ್ಷೇತ್ರದ 1 ಸ್ಥಾನಕ್ಕೆ ಬಿ.ಸಿ. ಉಮಾಪತಿ ಗುಂಪಿನ ಸೋಗಿ ಮುರುಗೇಶ್ ಅವರಲ್ಲದೇ, ಪ್ರತ್ಯೇಕವಾಗಿ ಐವರು ಸ್ಪರ್ಧಿಸಿದ್ದಾರೆ.

ಲೆಕ್ಕ ಪರಿಶೋಧಕ ಜಂಬಿಗಿ ರಾದೇಶ್, ಶ್ರೀಮತಿ ಹಂಪಾಳಿ ನಾಗಮಣಿ ಬಸವರಾಜ್, ಬೆಳ್ಳೂಡಿ ಮಂಜುನಾಥ್, ಎಸ್.ವಿ.ಪ್ರಭುಸ್ವಾಮಿ ಮತ್ತು ಎಂ. ಹೆಚ್. ಶಿವಯೋಗೀಶ್ವರ ಸ್ವಾಮಿ ಪ್ರತ್ಯೇಕವಾಗಿ ಸ್ಪರ್ಧಿಸಿರುವ ಅಭ್ಯರ್ಥಿಗಳು.

## ನಗರದಲ್ಲಿಂದು ಚೈತನ್ಯ ಸಾಂಸ್ಕೃತಿಕ ಸೌರಭ

ಅಶ್ವತ್ಥಪುರ ದೇಷಸ್ತ ಬ್ರಾಹ್ಮಣ ಸಮಾಜದ 11ನೆ ವರುಷದ 'ಚೈತನ್ಯ ಸಾಂಸ್ಕೃತಿಕ ಸೌರಭ' ಕಾರ್ಯಕ್ರಮ ಇಂದು ಸಂಜೆ 5 ಗಂಟೆಗೆ ಶ್ರೀ ಶಂಕರ ಸಮುದಾಯ ಭವನದಲ್ಲಿ ನಡೆಯಲಿದೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸ್ಥೆಯ ಅಧ್ಯಕ್ಷ ಡಾ. ಪಿ. ಎಸ್ ಸುರೇಶ್ ಬಾಬು ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಹಿರಿಯ ವೈದ್ಯ ಶ್ರೀಪಾದ್ ಭಟ್, ಅಶ್ವತ್ಥಪುರ ಶ್ರೀರಾಮಚಂದ್ರ ದೇವಸ್ಥಾನದ ಆಡಳಿತ ಮೊಕ್ತೇಸರ ರಘುನಾಥ್ ವಂಟಿಮಾರ್, ಕಾರ್ಯದರ್ಶಿ ಎಲ್ ವಿ.ಸುಬ್ರಮಣ್ಯ ಅವರು ಆಗಮಿಸಲಿದ್ದಾರೆ.

## ನಗರದಲ್ಲಿಂದು ಸಾಮೂಹಿಕ ಉಪನಯನ

ದಿ. ಶ್ರೀ ಕಾಶಿನಾಥ ಸಾ ಪರಶುರಾಮ ಸಾ ಸೋಳಂಕಿ ಮತ್ತು ದಿ. ಶ್ರೀಮತಿ ಸಾವಿತ್ರ ಬಾಯಿ ಕಾಶಿನಾಥ ಸಾ ಸೋಳಂಕಿ ಇವರ 55ನೇ ವರ್ಷದ ವಿವಾಹ ವಾರ್ಷಿಕೋತ್ಸವದ ಸ್ಮರಣಾರ್ಥ ಎಸ್.ಎಸ್.ಕೆ ಸಮಾಜದ ವಟುಗಳ 'ಸಾಮೂಹಿಕ ಉಪನಯನ' ಕಾರ್ಯಕ್ರಮವು ಧರ್ಮಪ್ರವರ್ತ ರಾಜನಹಳ್ಳಿ ಹನುಮಂತಪ್ಪನವರ ಧರ್ಮಶಾಲಾದಲ್ಲಿ ಇಂದು ಬೆಳಿಗ್ಗೆ 11.15 ಕ್ಕೆ ನಡೆಯಲಿದೆ. ಸಾನ್ನಿಧ್ಯ : ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ.

## ನಗರದ ಶ್ರೀ ಸತ್ಯಸಾಯಿ ಮಂದಿರದಲ್ಲಿ ಇಂದು ಪ್ರಶಾಂತಿ ಧರ್ಮೋತ್ಸವ

ಶ್ರೀ ಸತ್ಯಸಾಯಿ ಮಂದಿರ (ಸತ್ಯಂ - ಶಿವಂ - ಸುಂದರಂ) ದಲ್ಲಿ ಇಂದು ಪ್ರಶಾಂತಿ ಧರ್ಮೋತ್ಸವ ಕಾರ್ಯಕ್ರಮ ನಡೆಯಲಿದೆ. ಇದರ ಪ್ರಯುಕ್ತ ಬೆಳಿಗ್ಗೆ 5 ಗಂಟೆಗೆ ಓಂಕಾರ, ಸುಪ್ರಭಾತ, ನಗರ ಸಂಕೀರ್ತನೆ ನಡೆಯಲಿದೆ. 6.30ಕ್ಕೆ ಶ್ರೀ ಪ್ರಸನ್ನ ಸಾಯಿ ಗಣಪತಿಗೆ ಪಂಚಾಮೃತಾಭಿಷೇಕ ನಡೆಯಲಿದೆ.

ಬೆಳಿಗ್ಗೆ 8 ಗಂಟೆಗೆ ಪ್ರಶಾಂತಿ ಧ್ವಜಾರೋಹಣ ಕಾರ್ಯಕ್ರಮ ನಡೆಯಲಿದ್ದು, ಇದನ್ನು ಶ್ರೀ ಸತ್ಯಸಾಯಿ ಸೇವಾ ಸಂಸ್ಥೆಗಳ ಜಿಲ್ಲಾಧ್ಯಕ್ಷ ಎಸ್. ಪ್ರಶಾಂತ್ ಕುಮಾರ್ ನೆರವೇರಿಸುವರು. ನಂತರ ಶ್ರೀ ಗಣಹೋಮ, ನವಗ್ರಹ ಹೋಮ, ಶ್ರೀ ಸಾಯಿ ಸತ್ಯನಾರಾಯಣ ಪೂಜೆ ಮೊದಲಾದ ಧಾರ್ಮಿಕ ವಿಧಿಗಳು ನಡೆಯಲಿವೆ. ಬಾಬಾರವರ ಭಾವಚಿತ್ರ ಸಹಿತ ಪಲ್ಲಕ್ಕಿ ಉತ್ಸವ ನಡೆಯಲಿದೆ.

ಮಧ್ಯಾಹ್ನ 12.30 ರಿಂದ ಭಕ್ತ ಸಮಾವೇಶ ನಡೆಯಲಿದ್ದು, ಶ್ರೀ ಸತ್ಯಸಾಯಿ ಸೇವಾ ಸಂಸ್ಥೆಗಳ ಸಂಯೋಜಕ ಜಗನ್ನಾಥ ನಾಡಿಗೇರ್ ಉಪನ್ಯಾಸ ನೀಡಲಿದ್ದಾರೆ. ಸಮಿತಿಯ ಸಂಚಾಲಕ ಆರ್. ಪಾಂಡುರಂಗರಾವ್ ಭಾಗವಹಿಸಲಿದ್ದಾರೆ. ಸಂಜೆ 6.30ರಿಂದ ನಡೆಯುವ ಶ್ರೀ ಸಾಯಿ ಸಂಗೀತ ಸಂಧ್ಯಾ ಕಾರ್ಯಕ್ರಮ ಜರುಗಲಿದೆ.

COMMERCIAL SPACE FOR RENT
* 1st floor - 2000 sqft
* 2nd floor - 2000 sqft
Shamanur Road, Near Karnataka Bank, Davangere - 577 004.
Mob :70197 92341

ಸ್ವಾಗತ-ಸುಸ್ವಾಗತ
ಇಂದು ಮತ್ತು ನಾಳೆ ರಾಣೇಬೆನ್ನೂರಿನಲ್ಲಿ ನಡೆಯುವ 13ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಆಗಮಿಸುತ್ತಿರುವ ಸಹೃದಯಿ ಕನ್ನಡಿಗರೆಲ್ಲರಿಗೂ ಸ್ವಾಗತ-ಸುಸ್ವಾಗತ...





ಸ್ವಾಗತ ಬಯಸುವವರು...
ಜೆ.ಎಂ. ರಾಜಶೇಖರ್
ಸಾಹಿತಿ, ರಾಣೇಬೆನ್ನೂರು.

Rushi Educational Trust ®
Rishi Group Of Institutions
Littile Champs Gurukulam
#26 97/69, S.S Layout, Opp. Church, Davanagere -577005
TEACHER'S RECRUITMENT
Calling for the enthusiastic, innovative and qualified teachers to handle the below subjects
Languages : • Science • Mathematics • Computer • PE Teacher (Male)
Qualification : PG with B.Ed.,
*Fluency in English is mandatory.*
Salary Commensurate based on qualification and Experience.
Interested candidates may Please call the following number for further details
M : 6361427533 / 70265 98444
ADMISSIONS OPEN FROM PRE NURSERY TO 8th Std for 2024-25

ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ
ಆಡಳಿತ ಮಂಡಳಿ ಚುನಾವಣೆ-2024 ಬಿ-ಪ್ರವರ್ಗ (ಮೀಸಲು) ಕ್ಷೇತ್ರ
ಮಾನ್ಯ ಗೌರವಾನ್ವಿತ ಷೇರುದಾರರಲ್ಲಿ ವಿನಂತಿ....
ದಿನಾಂಕ : 11.02.2024ರ ಭಾನುವಾರ ನಡೆಯಲಿರುವ ಮೇಲ್ಕಂಡ ಬ್ಯಾಂಕಿನ ಆಡಳಿತ ಮಂಡಳಿ ನಿರ್ದೇಶಕರ ಸ್ಥಾನಕ್ಕೆ ನಮ್ಮೆಲ್ಲರ ಆತ್ಮೀಯರಾದ ಪ್ರಭುಸ್ವಾಮಿ ಎಸ್.ವಿ. (ವಾಣಿ ಪ್ರಭು)ರವರು ಚುನಾವಣೆಗೆ ಸ್ಪರ್ಧಿಸಿಲಿದ್ದಾರೆ. ಆದ ಕಾರಣ ನಿಮ್ಮ ಅತ್ಯಮೂಲ್ಯವಾದ ಒಂದು ಮತವನ್ನು ಇವರ ಗುರುತಾದ "ಟೆಂಟ್"ಗೆ ನೀಡಿ, ಬ್ಯಾಂಕಿನ ಶ್ರೇಯೋಭಿವೃದ್ಧಿಗಾಗಿ ಹಾಗೂ ಬ್ಯಾಂಕಿನ ಸದಸ್ಯರ ಏಳ್ಗೆಗಾಗಿ ಪ್ರಾಮಾಣಿಕವಾಗಿ ಶ್ರಮಿಸಲು ಸದಾವಕಾಶ ಮಾಡಿಕೊಡಬೇಕಾಗಿ ವಿನಂತಿ.

13 ಪ್ರಭುಸ್ವಾಮಿ ಎಸ್.ವಿ.



ಶುಭ ಕೋರುವವರು
- ಶ್ರೀ ಎಸ್.ಟಿ. ವೀರೇಶ್, ಮಾಜಿ ಮೇಯರ್ ಹಾಲಿ ಸದಸ್ಯರು ಮಹಾನಗರ ಪಾಲಿಕೆ
- ಶ್ರೀ ಮಹಾಂತೇಶಪ್ಪ ವಿ. ಒಣರೊಟ್ಟಿ ಮತ್ತು ಸಹೋದರರು, ಬಸವೇಶ್ವರ ಟ್ರಾನ್ಸ್‌ಪೋರ್ಟ್.
- ಶ್ರೀ ರಮೇಶ್ ಬಸಪ್ಪ ಮತ್ತು ಸಹೋದರರು, ಕಂಟ್ರಾಕ್ಟರ್
- ಶ್ರೀ ಜಂಬಗಿ ಕರಿಬಸಪ್ಪ ಬಸಪ್ಪ ಮತ್ತು ಮಕ್ಕಳು, ರಾಣೇಬೆನ್ನೂರು
- ಶ್ರೀ ವೀರೇಶ್ ಮುರಿಗೆಪ್ಪ ಜಂಬಗಿ, ನಿರ್ದೇಶಕರು ಶ್ರೀ ಬಸವೇಶ್ವರ ಅರ್ಬನ್ ಕೋ. ಆಪರೇಟಿವ್ ಲಿ., ರಾಣೇಬೆನ್ನೂರು
- ಶ್ರೀ ಕೆ.ಪಿ.ಕಲ್ಲಿಂಗಪ್ಪ ಕಕ್ಕರಗೊಳ್ಳ ಮತ್ತು ಸಹೋದರರು ಬಿಜೆಪಿ ಮುಖಂಡರು
- ಶ್ರೀ ಕೆ.ಎಸ್. ಮೋಹನ್ ಸದಸ್ಯರು ದಾವಣಗೆರೆ ಸ್ಮಾರ್ಟ್ ಸಿಟಿ ಮತ್ತು ಸಹೋದರರು
- ಶ್ರೀ ಅಣಜಿ ಬಸವರಾಜ್ ಮತ್ತು ಸಹೋದರರು ಹಾಗೂ ಮಿತ್ರರು, ಬಿಜೆಪಿ ಮುಖಂಡರು
- ಶ್ರೀ ಪಿ.ಎಸ್. ವೀರಣ್ಣ (ಅಕ್ಕಿ ರಾಜಣ್ಣ) ಮತ್ತು ಸಹೋದರರು, ಅಕ್ಕಿ ವ್ಯಾಪಾರಸ್ಥರು, ಬಿಜೆಪಿ ಮುಖಂಡರು
- ಶ್ರೀ ಎಸ್. ರವೀಂದ್ರ ಮೊಫ್ಲಿ ಮತ್ತು ಸಹೋದರರು ಹಾಗೂ ಮಿತ್ರರು ರಿಯಲ್ ಎಸ್ಟೇಟ್ ಏಜೆಂಟ್ಸ್
- ಶ್ರೀ ಈರಣ್ಣ ಹಿಟ್ಟಿನ ಗಿರಣಿ ಮತ್ತು ಸಹೋದರರು ಹಾಗೂ ಮಿತ್ರರು ಕಾಂಗ್ರೆಸ್ ಯುವ ಮುಖಂಡರು
- ಶ್ರೀ ಆನಂದ, (ಗುರುರಾಜ ಬಸ್) ಬೆಂಗಳೂರು
- ಶ್ರೀ ಜಯದೇವ ಪ್ರಕಾಶ್, ಬೆಂಗಳೂರು

